ಸ್ಥಾಪನೆ : 1907

119 ವರ್ಷಗಳ ಸಾರ್ಥಕ ಸಹಕಾರ ಬ್ಯಾಂಕಿಂಗ್ ಸೇವೆಯಲ್ಲಿ

# ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ : ನಂ.೩, ಪಂಪಮಹಾಕವಿ ರಸ್ತೆ, ಜಾಮರಾಜಪೇಟೆ, ಬೆಂಗಳೂರು-18

ಕಛೇರಿ ☎ : 26678572 : 26600512 : 26609066

ಅಧ್ಯಕ್ಷರು: 26606377: ಪ್ರಧಾನ ವ್ಯವಸ್ಥಾಪಕರು: 26617980

ಟೆಲಿಫ್ಯಾಕ್ಸ್: (080) 26617980 website : www.bccbl.co.in

## ಬ್ಯಾಂಕ್‌ನ ಆಡಳಿತ ಮಂಡಳಿ

| | | |
|---|---|---|
| ಅಧ್ಯಕ್ಷರು | : | **ಶ್ರೀ ಆವಲಹಳ್ಳಿ ಚಂದ್ರಪ್ಪ ಆರ್** (ರಾಜ್ಯ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು) |
| ಉಪಾಧ್ಯಕ್ಷರು | : | **ಡಾ॥ ದೇವರಾಜ್ ಟಿ.ಎಂ.** ಎಂ.ಬಿ.ಬಿ.ಎಸ್, ಡಿಹೆಚ್‌ಎ., ಎಫ್‌ಎಜಿಇ., |
| ನಿರ್ದೇಶಕರುಗಳು | : | **ಶ್ರೀ ಆಂಜನಪ್ಪ** |
| | : | **ಶ್ರೀ ಕೃಷ್ಣಪ್ಪ ಕೆ.** |
| | : | **ಶ್ರೀ ಚಿಕ್ಕಣ್ಣಯ್ಯ ಕೆ.ಸಿ.** ಬಿ.ಕಾಂ., |
| | : | **ಶ್ರೀಮತಿ ಪಂಕಜ ಹನುಮಂತಯ್ಯ,** ಎಂ.ಎಸ್ಸಿ., |
| | : | **ಶ್ರೀ ರಾಧಾಕೃಷ್ಣ ಎನ್.** ಬಿ.ಎ., |
| | : | **ಶ್ರೀ ರಘುನಾಥ್ ಸಿ.** ಬಿ.ಎ.ಬಿಎಲ್., |
| | : | **ಶ್ರೀ ಸುರೇಶ್ ಕೆ.ಪಿ.** ಬಿ.ಎ., |
| | : | **ಶ್ರೀ ಬಸವರಾಜು** |
| | : | **ಶ್ರೀ ನಾರಾಯಣಪ್ಪ ಬಿ.ಆರ್.** ಬಿ.ಎ., |
| | : | **ಶ್ರೀಮತಿ ಅಶ್ವಿನಿ ಸತೀಶ್** |
| | : | **ಕು. ಮೀನಾಕುಮಾರಿ ಕೆ.ಪಿ.** ಬಿ.ಕಾಂ., |
| | : | **ಶ್ರೀ ವೆಂಕಟೇಶ್** |
| | : | **ಶ್ರೀ ಹನುಮಂತಪ್ಪ ಟಿ.ವಿ.** |
| | : | **ಶ್ರೀ ಶಿವಣ್ಣ ಕೆ,** ಬಿ.ಕಾಂ., ಎಲ್.ಎಲ್.ಬಿ., ಸಿ.ಎ.ಐ.ಐ.ಬಿ., |
| | : | **ಶ್ರೀ ಯತೀಶ್ ಬಿ,** ಬಿ.ಎ.ಬಿ.ಎಲ್., |
| ಪ್ರಧಾನ ವ್ಯವಸ್ಥಾಪಕರು | : | **ಶ್ರೀ ಮಂಜುನಾಥ ಪಿ,** ಬಿ.ಕಾಂ., ಎ.ಡಿ.ಸಿ.ಬಿ |

ಸ್ಥಾಪನೆ : 1907

119 ವರ್ಷಗಳ ಸಾರ್ಥಕ ಸಹಕಾರ ಬ್ಯಾಂಕಿಂಗ್ ಸೇವೆಯಲ್ಲಿ

**ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್**

ಆಡಳಿತ ಕಛೇರಿ : ನಂ.3, ಪಂಪಮಹಾಕವಿ ರಸ್ತೆ, ಜಾಮರಾಜಪೇಟೆ, ಬೆಂಗಳೂರು-18

ಕಛೇರಿ ☎ : 26678572 : 26600512 : 26609066

ಅಧ್ಯಕ್ಷರು: 26606377: ಪ್ರಧಾನ ವ್ಯವಸ್ಥಾಪಕರು: 26617980

ಟೆಲಿಫ್ಯಾಕ್ಸ್: (080) 26617980 website : www.bccbl.co.in

## ನೋಟೀಸು

ದಿನಾಂಕ : 31-03-2025ಕ್ಕೆ ಮುಕ್ತಾಯಗೊಂಡ (2024-25ನೇ ಸಾಲಿನ) 119ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಆವಲಹಳ್ಳಿ ಚಂದ್ರಪ್ಪ ಆರ್.ರವರ ಅಧ್ಯಕ್ಷತೆಯಲ್ಲಿ ದಿನಾಂಕ 14-09-2025ನೇ ಭಾನುವಾರ ಬೆಳಿಗ್ಗೆ: 10.00 ಘಂಟೆಗೆ ಮೇಲೆ ಸೂಚಿಸಿದ ಬ್ಯಾಂಕ್‌ನ ಆವರಣದಲ್ಲಿ ನಡೆಯಲಿದೆ.

ಮಾನ್ಯ ಸದಸ್ಯರುಗಳೆಲ್ಲರೂ ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

## ಕಾರ್ಯಕ್ರಮಗಳು

1. ಪ್ರಾರ್ಥನೆ
2. ಅಧ್ಯಕ್ಷರಿಂದ ಸ್ವಾಗತ ಭಾಷಣ
3. 2024-25 ನೇ ಸಾಲಿನ ಸರ್ವಸದಸ್ಯರ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು
4. ಮರಣ ಹೊಂದಿದ ಸದಸ್ಯರುಗಳ ಗೌರವಾರ್ಥ ಸಂತಾಪ ಸೂಚನೆ
5. 2023-24ನೇ ಸಾಲಿನ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು
6. 2025ನೇ ಮಾರ್ಚ್ 31ಕ್ಕೆ ಆಖೈರಾದ ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿಯೊಂದಿಗೆ ಸರ್ವ ಸದಸ್ಯರ ಮಹಾಸಭೆಯ ಅನುಮೋದನೆಯಂತೆ ಆಡಳಿತ ಮಂಡಳಿ ಸಭೆಯಿಂದ ನೇಮಕವಾಗಿರುವ ಚಾರ್ಟರ್ಡ್ ಅಕೌಂಟೆಂಟ್‌ರವರಾದ ಮೆ॥ ಬಿ.ಪಿ.ಎಸ್.ಎಸ್.ವೈ ಅಂಡ್ ಕೋ., ಬೆಂಗಳೂರು ರವರು ನೀಡಲ್ಪಟ್ಟಿರುವ 2024-25 ನೇ ಸಾಲಿನ ಸರ್ಟಿಫೈಡ್ ಬ್ಯಾಲೆನ್ಸ್ ಷೀಟ್ ಮತ್ತು ಲಾಭ-ನಷ್ಟಗಳ ತಃಖ್ತೆ, ಆಡಳಿತ ಮಂಡಳಿಯವರ ಸಮಜಾಯಿಷಿಗಳೊಂದಿಗೆ ಲೆಕ್ಕ ಪರಿಶೋಧನಾ ವರದಿ, ಸದಸ್ಯತ್ವಕ್ಕೆ ಸೇರ್ಪಡೆ/ಹಿಂತೆಗೆಯುವಿಕೆ, ನಿರ್ದೇಶಕ ಮಂಡಳಿ ಸದಸ್ಯರುಗಳಿಗೆ ನೀಡಲಾಗುತ್ತಿರುವ ಸಂಭಾವನೆ, ಸಿಬ್ಬಂದಿ ವೇತನ, ಸಿಬ್ಬಂದಿ ನೇಮಕಾತಿ ಮತ್ತು ಸಿಬ್ಬಂದಿ ಸೇವಾ ನಿಯಮಗಳು, ಸದಸ್ಯರ ಮರಣ ಪರಿಹಾರ ಪಾವತಿ ನಿಯಮಗಳು ಹಾಗೂ ಮುಂದಿನ ವರ್ಷದ ಕಾರ್ಯ ಯೋಜನೆ ಒಳಗೊಂಡಂತೆ ಆಡಳಿತ ಮಂಡಳಿ ವರದಿಗಳನ್ನು ಅನುಮೋದಿಸುವುದು
7. 2024-25ನೇ ಸಾಲಿನ ನಿವ್ವಳ ಆದಾಯ ಹಂಚಿಕೆಯನ್ನು ತೀರ್ಮಾನಿಸುವುದು
8. 2024-25ರ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಿಗೆ ಖರ್ಚಾಗಿರುವುದನ್ನು ಅನುಮೋದಿಸುವ ಮತ್ತು 2025-26ರ ಸಾಲಿನ ಪರಿಷ್ಕೃತ ಹಾಗೂ 2026-27ನೇ ಸಾಲಿನ ಆಯವ್ಯಯ ಪಟ್ಟಿ ಪರಿಶೀಲಿಸಿ ಅನುಮೋದಿಸುವ ವಿಚಾರ.

9. 2025–26ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧನೆ ನಡೆಸಲು ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿಯೊಂದಿಗೆ ಮೆ॥ ಬಿ.ಪಿ.ಎಸ್.ಎಸ್.ವೈ ಅಂಡ್ ಕೋ., ಬೆಂಗಳೂರು, ಚಾರ್ಟರ್ಡ್ ಅಕೌಂಟೆಂಟ್ ರವರನ್ನು ನೇಮಕ ಮಾಡಲು ಆಡಳಿತ ಮಂಡಳಿಯು ತೀರ್ಮಾನಿಸಿರುವುದನ್ನು ಖಾಯಂಗೊಳಿಸುವ ವಿಚಾರ.
10. ಬೈಲಾ ಬದಲಾವಣೆ
11. ಇತರೇ ವಿಷಯಗಳು
12. ವಂದನಾರ್ಪಣೆ

ಸ್ಥಳ : ಬೆಂಗಳೂರು
ದಿನಾಂಕ: 25–08–2025

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
**ಮಂಜುನಾಥ ಪಿ.**
ಪ್ರಧಾನ ವ್ಯವಸ್ಥಾಪಕರು

## ಸೂಚನೆಗಳು

1. ಸರ್ವಸದಸ್ಯರ ಮಹಾಸಭೆಯಲ್ಲಿ ಸದಸ್ಯರನ್ನು ಸದಸ್ಯತ್ವದ ಕಾರ್ಡಿನ ಮೂಲಕ ಗುರುತಿಸಲಾಗುವುದ ರಿಂದ ಸರ್ವಸದಸ್ಯರ ಸಭೆಗೆ ಬರುವಾಗ ಮಾನ್ಯ ಸದಸ್ಯರು ತಪ್ಪದೇ ತಮ್ಮ ಸದಸ್ಯತ್ವದ ಕಾರ್ಡನ್ನು (Membership Identity Card) ತರಬೇಕಾಗಿ ವಿನಂತಿ. ಸದಸ್ಯತ್ವದ ಕಾರ್ಡ್ ಪಡೆಯದೇ ಇರುವಂತಹ ಸದಸ್ಯರುಗಳು ತಮ್ಮ ಭಾವಚಿತ್ರದ ಎರಡು ಪ್ರತಿಗಳನ್ನು ಸಲ್ಲಿಸಿ ದಿನಾಂಕ 10.09.2025ನೇ ಬುಧವಾರ ಸಾಯಂಕಾಲ 5.30 ಘಂಟೆಯೊಳಗೆ ಸದಸ್ಯತ್ವದ ಕಾರ್ಡನ್ನು ಖುದ್ದಾಗಿ ಪಡೆಯಬೇಕೆಂದು ಕೋರಲಾಗಿದೆ. ಹಾಗೆಯೇ ಸದಸ್ಯತ್ವದ ಕಾರ್ಡ್‌ನಲ್ಲಿ ಬಹಳ ಹಳೆಯ ಭಾವಚಿತ್ರ ಹೊಂದಿರುವ ಸದಸ್ಯರು ತಮ್ಮ ಇತ್ತೀಚಿನ ಭಾವಚಿತ್ರದ ಎರಡು ಪ್ರತಿಗಳನ್ನು ಸಲ್ಲಿಸಿ ಹೊಸ ಸದಸ್ಯತ್ವ ಕಾರ್ಡನ್ನು ಉಚಿತವಾಗಿ ಪಡೆಯಲು ಕೋರಿದೆ.
2. ಸರ್ವಸದಸ್ಯರ ಮಹಾಸಭೆಯಲ್ಲಿ ಯಾವುದೇ ವಿಷಯವನ್ನು ಕುರಿತು ಚರ್ಚಿಸುವುದಿದ್ದಲ್ಲಿ / ಮಾಹಿತಿ ಬೇಕಾದಲ್ಲಿ ಐದು (5) ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಪ್ರಧಾನ ವ್ಯವಸ್ಥಾಪಕರಿಗೆ ತಿಳಿಸತಕ್ಕದ್ದು. ಆಡಳಿತ ಮಂಡಳಿಯವರ ಅನುಮತಿಯಿಂದ ಸೂಕ್ತವಾದ ಅಂತಹ ವಿಷಯಗಳಿಗೆ ಸರ್ವಸದಸ್ಯರ ಮಹಾಸಭೆಯಲ್ಲಿ ಮೊದಲು ಅವಶ್ಯ ಮಾಹಿತಿ ಒದಗಿಸಲಾಗುವುದು.
3. ಬ್ಯಾಂಕಿನ ಬೈಲಾ ಸಂಖ್ಯೆ 20ರ ಪ್ರಕಾರ ಬ್ಯಾಂಕಿನ ಯಾವುದೇ ಸದಸ್ಯನು ಬ್ಯಾಂಕಿನಲ್ಲಿ ಕನಿಷ್ಠ ಒಂದು ಸಾವಿರ ರೂಪಾಯಿಗಳ ಷೇರು ಹೊಂದಿರಬೇಕಾಗಿದೆ ಮತ್ತು ಕನಿಷ್ಠ ಒಂದು ಸಾವಿರ ರೂಪಾಯಿಗಳ ಠೇವಣಿ ಅಥವಾ ಸಾಲ ಸೌಲಭ್ಯ ಹೊಂದಿ ಸಹಕಾರ ವರ್ಷವೊಂದರಲ್ಲಿ ಕನಿಷ್ಠ ಐದು ಬ್ಯಾಂಕಿಂಗ್ ವ್ಯವಹಾರ ಮಾಡಬೇಕಾಗಿದೆ. ಉಪವಿಧಿಗಳಲ್ಲಿ ನಿಗದಿಪಡಿಸಿದ ಇಂತಹ ಕನಿಷ್ಠ ಸೇವೆ ಅಥವಾ ಸೌಲಭ್ಯಗಳನ್ನು ಹಿಂದಿನ ಐದು, ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬಳಸಿಕೊಳ್ಳಲು ತಪ್ಪಿದ ಸದಸ್ಯನು ಒಂದು ವರ್ಷ ಅವಧಿಗೆ ಸರ್ವಸದಸ್ಯರ ಮಹಾಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕನ ಚುನಾವಣೆಯಲ್ಲಿ ಮತ ನೀಡುವ ಹಾಗೂ ಸ್ಪರ್ಧಿಸುವ ಹಕ್ಕನ್ನು ಕಳೆದುಕೊಳ್ಳುತ್ತಾನೆಂದು ತಿಳಿಸಲು ಇಚ್ಛಿಸುತ್ತೇವೆ. ಅದುದರಿಂದ ಎಲ್ಲಾ ಸದಸ್ಯರುಗಳು ಬೈಲಾಗಳಲ್ಲಿ ನಿಗದಿಪಡಿಸಿರುವ ಕನಿಷ್ಠ ಸೇವೆ ಅಥವಾ ಸೌಲಭ್ಯಗಳನ್ನು ಉಪಯೋಗಿಸಲು ಮನವಿ ಮಾಡಿದೆ.
4. ಬ್ಯಾಂಕಿನಿಂದ ಸಾಲ ಸೌಲಭ್ಯಗಳನ್ನು ಪಡೆದು ಸಕಾಲದಲ್ಲಿ ಕಂತುಗಳನ್ನು ಮರುಪಾವತಿ ಮಾಡದೇ ಸುಸ್ತಿದಾರರಾಗಿರುವ ಸದಸ್ಯರು ಸರ್ವಸದಸ್ಯರ ಮಹಾಸಭೆಯಲ್ಲಿ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.
5. ಕರ್ನಾಟಕ ಸಹಕಾರ ಸಂಘಗಳ ಕಾನೂನು 1959 ರ ಕಲಂ 20(2) (ಎiii) ಹಾಗೂ ಬ್ಯಾಂಕಿನ ಬೈಲಾ ಸಂಖ್ಯೆ 44(4) (ಡಿ) ಪ್ರಕಾರ ದಿನಾಂಕ: 14-09-2024 ರ ನಂತರ ಬ್ಯಾಂಕಿನಿಂದ ಸದಸ್ಯತ್ವವನ್ನು ಪಡೆದಿರುವಂತಹ ಸದಸ್ಯರುಗಳು ಬ್ಯಾಂಕಿನ ಈ ಸರ್ವಸದಸ್ಯರ ಮಹಾಸಭೆಯಲ್ಲಿ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.
6. ಇದುವರೆವಿಗೂ ಡಿವಿಡೆಂಡ್ (ಷೇರು ನಫೆ) ತೆಗೆದುಕೊಳ್ಳದೇ ಇರುವ ಸದಸ್ಯರು ಬ್ಯಾಂಕಿನ ಅಧಿಕಾರಿಗಳನ್ನು ಸಂಪರ್ಕಿಸಿ ಡಿವಿಡೆಂಡ್ ಪಡೆಯತಕ್ಕದ್ದು. ತಪ್ಪಿದಲ್ಲಿ ಲಾಭಾಂಶವನ್ನು ಪ್ರಕಟಿಸಿದ ನಂತರ ಮೂರು ವರ್ಷಗಳ ವರೆವಿಗೂ ಅದನ್ನು ಬ್ಯಾಂಕಿನಿಂದ ಪಡೆಯದಿದ್ದ ಸಂದರ್ಭದಲ್ಲಿ ಬ್ಯಾಂಕಿನ ಬೈಲಾ ಸಂಖ್ಯೆ : 107 ರ ಪ್ರಕಾರ ಅಂತಹ ಹಣವನ್ನು ಬ್ಯಾಂಕಿನ ಕಾಯ್ದಿಟ್ಟ ನಿಧಿಗೆ (Reserve Fund) ವರ್ಗಾಯಿಸಲಾಗುವುದು ಎಂದು ತಿಳಿಸುತ್ತೇವೆ.
7. ಸರ್ವಸದಸ್ಯರ ಸಭೆಯ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಅವಶ್ಯಕ ಮಾಹಿತಿಯನ್ನು ತಾವು ಸದಸ್ಯತ್ವ ಹೊಂದಿರುವ ಶಾಖೆಗಳಲ್ಲಿ ತಮ್ಮ ಸದಸ್ಯತ್ವದ ಕಾರ್ಡ್ ಹಾಜರುಪಡಿಸಿ ಪಡೆಯಲು ಕೋರಿದೆ.
8. ಸದಸ್ಯರುಗಳ ಮಕ್ಕಳು 2024-25 ನೇ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ ಮತ್ತು ಅಂತಿಮ ಪಿ.ಯು.ಸಿ ಪರೀಕ್ಷೆಗಳಲ್ಲಿ ಶೇಕಡ 90 ಮತ್ತು ಮೇಲ್ಪಟ್ಟು, ಪದವಿ ಪರೀಕ್ಷೆಗಳಲ್ಲಿ ಶೇಕಡ 75 ಮತ್ತು ಮೇಲ್ಪಟ್ಟು, ಮೂರು

ವರ್ಷಗಳ ಡಿಪ್ಲೋಮಾ ಹಾಗೂ ಬಿ.ಇ/ಎಂ.ಸಿ.ಎ/ಎಂ.ಬಿ.ಎ/ಬಿ.ವಿ.ಎಸ್.ಸಿ/ಬಿ.ಯು.ಎಂ.ಎಸ್/ಬಿ.ಹೆಚ್. ಎಂ.ಎಸ್/ಬಿ.ಎ.ಎಂ.ಎಸ್ ಪದವಿ ಪರೀಕ್ಷೆಗಳಲ್ಲಿ ಡಿಸ್ಟಿಂಕ್ಷನ್ ಹಾಗೂ ಎಂ.ಬಿ.ಬಿ.ಎಸ್ ಮತ್ತು ಬಿ.ಡಿ.ಎಸ್ ಪದವಿ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಹಾಗೂ ಎಂ.ಫಿಲ್ /ಪಿಹೆಚ್‌ಡಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದಲ್ಲಿ ಬ್ಯಾಂಕಿನಿಂದ ಪ್ರೋತ್ಸಾಹ ಧನಕ್ಕಾಗಿ ಸೂಕ್ತ ದಾಖಲಾತಿಗಳೊಡನೆ ಅರ್ಜಿಯನ್ನು ದಿನಾಂಕ 08–09–2025 ನೇ ಸೋಮವಾರ ಸಂಜೆ: 5.30 ಘಂಟೆಯೊಳಗಾಗಿ ತಮ್ಮ ಶಾಖೆಯ ಶಾಖಾ ವ್ಯವಸ್ಥಾಪಕರಿಗೆ ಸಲ್ಲಿಸತಕ್ಕದ್ದು. (ವಿದ್ಯಾರ್ಥಿಯು ಅಂಗವಿಕಲನಾಗಿದ್ದು ಅಥವಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದ್ದಲ್ಲಿ ಮೊದಲನೇ ದರ್ಜೆಯಲ್ಲಿ ಪಾಸಾಗಿದ್ದರೂ ಸಹ ಈ ಯೋಜನೆಯಡಿಯಲ್ಲಿ ಅರ್ಜಿ ಸಲ್ಲಿಸಬಹುದು).

9. ಹಿಂದೆ ಸರ್ವಸದಸ್ಯರುಗಳ ಸಭೆಗಳಲ್ಲಿ ಸದಸ್ಯರುಗಳಿಗೆ ಉಪಹಾರ ಮತ್ತು ಊಟದ ವ್ಯವಸ್ಥೆ ಏರ್ಪಡಿಸಲಾಗುತ್ತಿತ್ತು. ಸರ್ವಸದಸ್ಯರ ಸಭೆಯಲ್ಲಿ ಅತಿ ಹೆಚ್ಚು ಸದಸ್ಯರುಗಳು ಹಾಜರಾಗುವ ಕಾರಣ ಅನುಕೂಲತೆ ದೃಷ್ಟಿಯಿಂದ ಸರ್ವಸದಸ್ಯರ ಸಭೆಗೆ ಹಾಜರಾಗುವ ಬೈಲಾ ನಿಯಮಗಳ ರೀತ್ಯಾ ಅರ್ಹ ಸದಸ್ಯರುಗಳಿಗೆ ಮಾತ್ರ ಸರ್ವಸದಸ್ಯರ ಸಭೆಯ ದಿನಾಂಕ 14–09–2025 ರಂದು ಮಧ್ಯಾಹ್ನ 3.00 ಗಂಟೆಯವರೆಗೆ ಊಟೋಪಚಾರ ಸಂಬಂಧ ರೂ. 400/– ಗಳನ್ನು ನೀಡಲಾಗುವುದು, ಮಾನ್ಯ ಸದಸ್ಯರುಗಳು ಸಹಕರಿಸಬೇಕೆಂದು ಕೋರಲಾಗಿದೆ.

10. ಸರ್ವಸದಸ್ಯರ ಸಭೆಗೆ ಹಾಜರಾಗುವ ಸದಸ್ಯರುಗಳಿಗೆ ಗುರುತಿನ ಚೀಟಿ ಮತ್ತು ಊಟೋಪಚಾರ ಸಂಬಂಧ ಹಣ ನೀಡಲು ಬ್ಯಾಂಕಿನ ಆಡಳಿತ ಕಛೇರಿ ಎದುರಿನಲ್ಲಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕಾಲೇಜಿನ ಆವರಣದಲ್ಲಿ ವ್ಯವಸ್ಥೆ ಮಾಡಿದ್ದು, ಸದಸ್ಯರುಗಳು ಸಭೆಗೆ ಹಾಜರಾಗುವ ಮುನ್ನ ಗುರುತಿನ ಚೀಟಿ ಪಡೆದು ಸರ್ವಸದಸ್ಯರ ಸಭೆ ಸಭಾಂಗಣಕ್ಕೆ ಹಾಜರಾಗಲು ಕೋರಿದೆ.

11. ಬ್ಯಾಂಕಿನ ಸದಸ್ಯರು Covid-19 ಸಾಂಕ್ರಾಮಿಕ ಕಾಯಿಲೆಯಿಂದಾಗಿ ಮರಣ ಹೊಂದಿದ್ದು ಅವರ ಅಪ್ರಾಪ್ತ ವಯಸ್ಕರ ಮಕ್ಕಳು ಅನಾಥರಾಗಿದ್ದಲ್ಲಿ (ತಂದೆ ಮತ್ತು ತಾಯಿ ಇಬ್ಬರೂ ಜೀವಂತ ಇಲ್ಲದಿದ್ದಲ್ಲಿ) ಅವರಿಗೆ ಬ್ಯಾಂಕಿನ ವತಿಯಿಂದ ಆರ್ಥಿಕ ನೆರವು ಒದಗಿಲು ಬ್ಯಾಂಕಿನ ಆಡಳಿತ ಮಂಡಳಿಯು ತೀರ್ಮಾನಿಸಿದ್ದು, ಸಂಬಂಧಿಸಿದವರು ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಕೋರಿದೆ.

12. ನಮ್ಮ ಬ್ಯಾಂಕಿನಲ್ಲಿ ದಿನಾಂಕ 31.03.1975 ರ ಹಿಂದಿನ ದಿನದಿಂದಲೂ ಸದಸ್ಯರಾಗಿ ಮುಂದುವರೆಯುತ್ತಿರುವವರಿಗೆ ಬ್ಯಾಂಕಿನ ವತಿಯಿಂದ ಸನ್ಮಾನಿಸಲು ತೀರ್ಮಾನಿಸಿದ್ದು ಅಂತಹ ಸದಸ್ಯರು ತಮ್ಮ ವಿವರವನ್ನು ನೀಡಲು ಕೋರಿದೆ. (ಹಿಂದಿನ ವರ್ಷದಲ್ಲಿ ಸನ್ಮಾನಿತರಾಗಿದ್ದಲ್ಲಿ ಅನ್ವಯಿಸುವುದಿಲ್ಲ).

13. ಬ್ಯಾಂಕು ಭಾರತೀಯ ಜೀವ ವಿಮಾ ನಿಗಮ ಸಹಕಾರದೊಂದಿಗೆ ಜೀವ ವಿಮಾ ಸೌಲಭ್ಯ ನೀಡುತ್ತಿದ್ದು ನಿಮ್ಮ ಜೀವ ವಿಮಾ ಅವಶ್ಯಕತೆಗಳಿಗೆ ನಮ್ಮೊಂದಿಗೆ ವ್ಯವಹರಿಸಲು ಕೋರಿದೆ. ಸಾಲ ಪಡೆದ ಸದಸ್ಯರು / ಸಾಲ ಮರುಪಾವತಿ ಜವಾಬ್ದಾರಿ ಇರುವ ಅವರ ಕುಟುಂಬ ಸದಸ್ಯರು ಬ್ಯಾಂಕಿನಿಂದ ಪಡೆದ ಸಾಲಕ್ಕೆ ಸಂಬಂಧಿಸಿದಂತೆ ಟರ್ಮ್ ಜೀವ ವಿಮೆ ಪಡೆದು ಸಾಲದ ಅವಧಿಯಲ್ಲಿ ಏನಾದರೂ ಮರಣ ಹೊಂದಿದ್ದಲ್ಲಿ ಬಾಕಿ ಸಾಲದ ಉಳಿಕೆ ಕಂತುಗಳನ್ನು ವಿಮೆ ಮೂಲಕ ಭರಿಸಲು ಸಹಾಯಕವಾಗುವಂತೆ ಜೀವ ವಿಮಾ ಕಂಪನಿಯವರೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು ಸದಸ್ಯರುಗಳು ಇಂತಹ ಜೀವ ವಿಮೆ ಹೊಂದಲು ಕೋರಿದೆ.

14. ಬ್ಯಾಂಕ್ ಇಫ್ಕೋ ಟೋಕಿಯೊ ಕಂಪನಿ ಸಹಕಾರದೊಂದಿಗೆ ಜನರಲ್ ಇನ್ಸೂರೆನ್ಸ್ ಸೌಲಭ್ಯ ನೀಡುತ್ತಿದ್ದು ಸದಸ್ಯರು ತಮ್ಮ ವಾಹನ ವಿಮೆ, ಕಟ್ಟಡ ವಿಮೆ, ಆರೋಗ್ಯ ವಿಮೆ, ಲಾಕರ್ ವಿಮೆ ಮುಂತಾದ ವ್ಯವಹಾರಗಳಿಗೆ ನಮ್ಮೊಂದಿಗೆ ವ್ಯವಹರಿಸಲು ಕೋರಿದೆ.

15. ಬ್ಯಾಂಕ್ ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ **"ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆ"** ಯನ್ನು ಅಳವಡಿಸಿಕೊಂಡಿದ್ದು, ಈ ಯೋಜನೆಯಲ್ಲಿ ವಾರ್ಷಿಕ ರೂ. 436/– ಗಳನ್ನು ಪಾವತಿಸುವ

ಮೂಲಕ ರೂ.2,00,000/– ಗಳ ಜೀವ ವಿಮೆ ಪಡೆಯಬಹುದಾಗಿದ್ದು ಸದಸ್ಯರು / ಗ್ರಾಹಕರು ಈ ಯೋಜನೆಯ ಸೌಲಭ್ಯ ಪಡೆಯಲು ಕೋರಲಾಗಿದೆ.

16. ಬ್ಯಾಂಕ್ ಇಫ್ಕೋ ಟೋಕಿಯೋ ಕಂಪನಿ ಸಹಯೋಗದೊಂದಿಗೆ 'ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಯಡಿಯಲ್ಲಿ ರೂ. 2,00,000/–ಗಳ 'ಅಪಘಾತ ವಿಮೆ' ಅಳವಡಿಸಿಕೊಂಡಿದ್ದು ಗ್ರಾಹಕರು ರೂ. 20/– ಗಳನ್ನು ಪಾವತಿಸಿ ಸೌಲಭ್ಯವನ್ನು ಪಡೆಯಬಹುದಾಗಿದೆ. ಬ್ಯಾಂಕಿನಿಂದ ಸಾಲ ಸೌಲಭ್ಯ ಪಡೆದಿರುವ ಎಲ್ಲಾ ಸದಸ್ಯರಿಗೆ, ಠೇವಣಿ ಮತ್ತು ಉಳಿತಾಯ ಖಾತೆಯಲ್ಲಿ ರೂ. 5000/– ಗಳ ಶಿಲ್ಕು ನಿರ್ವಹಿಸುವ ಎಲ್ಲಾ ಖಾತೆದಾರರಿಗೆ ಬ್ಯಾಂಕಿನ ವತಿಯಿಂದ ಉಚಿತವಾಗಿ ಅಪಘಾತ ವಿಮೆ ನೀಡಲು ತೀರ್ಮಾನಿಸಿದ್ದು ಈ ಯೋಜನೆಯ ಸೌಲಭ್ಯ ಪಡೆಯಲು ಅಗತ್ಯ ಅರ್ಜಿಗಳನ್ನು ನೀಡಲು ಕೋರಲಾಗಿದೆ.

17. ಸದಸ್ಯರು ಕರ್ನಾಟಕ ರಾಜ್ಯ ಸರ್ಕಾರದ ಯಶಸ್ವಿನಿ ಆರೋಗ್ಯ ವಿಮೆ ಸೌಲಭ್ಯವನ್ನು ಪಡೆಯಬಹುದಾಗಿದೆ. ಈ ಸೌಲಭ್ಯ ಪಡೆಯಲು ಸದಸ್ಯರು ವಾರ್ಷಿಕ ರೂ.1000/– ಗಳನ್ನು ರಾಜ್ಯ ಸರ್ಕಾರಕ್ಕೆ ಬ್ಯಾಂಕಿನ ಮೂಲಕ ಪಾವತಿಸಿ, ತಮ್ಮ ಕುಟುಂಬದ ಅವಲಂಬಿತ ನಾಲ್ಕು ಸದಸ್ಯರಿಗೆ ಒಟ್ಟು ರೂ.5.00 ಲಕ್ಷಗಳ ಆರೋಗ್ಯ ವಿಮೆ ಪಡೆಯಬಹುದಾಗಿದೆ. ಯಶಸ್ವಿನಿ ಆರೋಗ್ಯ ವಿಮೆ ಸೌಲಭ್ಯವು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಸಮುದಾಯಕ್ಕೆ ಉಚಿತವಾಗಿರುತ್ತದೆ. ಕರ್ನಾಟಕ ರಾಜ್ಯ ಸರ್ಕಾರದ ಯಶಸ್ವಿನಿ ಯೋಜನೆ ರೀತ್ಯಾ ನಿಗದಿತ ಅವಧಿಯಲ್ಲಿ ಈ ಸೌಲಭ್ಯ ಹೊಂದಲು ಕೋರಿದೆ.

18. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ 10 ವರ್ಷಗಳಿಗೂ ಮೀರಿದ ಮಕ್ಕಳು ಉಳಿತಾಯ ಖಾತೆ ತೆರೆಯಬಹುದಾಗಿದ್ದು ಸದಸ್ಯರು ತಮ್ಮ ಮಕ್ಕಳು ನಮ್ಮ ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆದು ವ್ಯವಹರಿಸುವ ಮೂಲಕ ಅವರಲ್ಲಿ ಉಳಿತಾಯ ಮನೋಭಾವ ಬೆಳೆಸಲು ಕೋರಿದೆ.

19. ಠೇವಣಿದಾರರು ತಮ್ಮ ಉಳಿತಾಯ ಖಾತೆ/ಚಾಲ್ತಿ ಖಾತೆ ಮತ್ತಿತರ ಯಾವುದೇ ಠೇವಣಿ ಖಾತೆಯಲ್ಲಿ ಹತ್ತು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ವ್ಯವಹಾರ ನಡೆಸದಿದ್ದಲ್ಲಿ ಅಂತಹ ಖಾತೆಗಳಿಗೆ ಸಂಬಂಧಿಸಿದ ಪೂರ್ಣ ಮೊಬಲಗನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ Depositor Education and Awareness Fund ಖಾತೆಗೆ ವರ್ಗಾಯಿಸುವುದು ಕಡ್ಡಾಯವಾಗಿದೆ. ಆದ್ದರಿಂದ ಸದಸ್ಯರು/ಠೇವಣಿದಾರರು ತಮ್ಮ ಠೇವಣಿ ಖಾತೆಗಳಲ್ಲಿ ಕಾಲ ಕಾಲಕ್ಕೆ ಕನಿಷ್ಠ ವ್ಯವಹಾರ ನಡೆಸಲು ಕೋರಿದೆ.

20. ಬ್ಯಾಂಕ್ HDFC ಬ್ಯಾಂಕ್‌ನ ಸಹಯೋಗದೊಂದಿಗೆ Rupay ATM Card ಸೌಲಭ್ಯ ಒದಗಿಸಿದ್ದು ಸದಸ್ಯರುಗಳು/ ಠೇವಣಿದಾರರುಗಳು ತಮ್ಮ ಉಳಿತಾಯ/ಚಾಲ್ತಿ ಖಾತೆಗೆ ಸಂಬಂಧಿಸಿದಂತೆ ATM Card ಪಡೆದು ದೇಶಾದ್ಯಂತ ಯಾವುದೇ ಬ್ಯಾಂಕಿನ ATM ನಿಂದ ಹಣ ಪಡೆಯಲು ಅಥವಾ ಸಾಮಾನು ಖರೀದಿ ಉದ್ದೇಶಕ್ಕೆ ಈ ಕಾರ್ಡ್ ಬಳಸಬಹುದಾಗಿದೆ.

21. ಬ್ಯಾಂಕು ಆಕ್ಸಿಸ್ ಬ್ಯಾಂಕ್ ಸಹಯೋಗದೊಂದಿಗೆ IMPS-In House ಸೌಲಭ್ಯ ಒದಗಿಸಿದ್ದು ಗ್ರಾಹಕರುಗಳು ಬ್ಯಾಂಕಿನ ಕಾರ್ಯ ವೇಳೆಯಲ್ಲಿ ದೇಶಾದ್ಯಂತ ಯಾವುದೇ ಬ್ಯಾಂಕಿನ ಗ್ರಾಹಕನಿಗೆ ರೂ.5.00 ಲಕ್ಷಗಳವರೆವಿಗೆ ತಕ್ಷಣ ಹಣ ವರ್ಗಾಹಿಸಬಹುದಾಗಿದ್ದು ತಮ್ಮ ಅವಶ್ಯಕತೆಗಳಿಗೆ ಉಪಯೋಗಿಸಿಕೊಳ್ಳಲು ಮನವಿ ಮಾಡಿದೆ.

22. ಬ್ಯಾಂಕ್ ಐ.ಡಿ.ಬಿ.ಐ ಮತ್ತು ಇಂಡಸ್ ಇಂಡ್ ಬ್ಯಾಂಕಿನ ಸಹಯೋಗದೊಂದಿಗೆ ಗ್ರಾಹಕರುಗಳಿಗೆ RTGS / NEFT ಸೌಲಭ್ಯ ಒದಗಿಸಿದೆ. ಈ ಸೌಲಭ್ಯದಿಂದ ಗ್ರಾಹಕರು ಯಾವುದೇ ಬ್ಯಾಂಕಿನಿಂದ ಹಣ ವರ್ಗಾಯಿಸಿಕೊಳ್ಳಲು ಅಥವಾ ಯಾವುದೇ ಬ್ಯಾಂಕಿಗೆ ಹಣ ವರ್ಗಾವಣೆ ಮಾಡಬಹುದಾಗಿದ್ದು ತಮ್ಮ ಅವಶ್ಯಕತೆಗೆ ಉಪಯೋಗಿಸಿಕೊಳ್ಳಲು ಮನವಿ ಮಾಡಿದೆ.

23. ಬ್ಯಾಂಕ್ ಡೊಂಬೀವಲಿ ನಗರಿ ಸಹಕಾರ ಬ್ಯಾಂಕ್, ಪುಣೆ ರವರ ಸಹಕಾರದೊಂದಿಗೆ BBPS (Bharat Bill Payment System) ಅನ್ನು ಜಾರಿಗೊಳಿಸಿದ್ದು ಗ್ರಾಹಕರು ತಮ್ಮ ವಿದ್ಯುತ್ ಬಿಲ್ಲು, ನೀರಿನ ಬಿಲ್ಲು, ಗ್ಯಾಸ್

ಬಿಲ್ಲು, DTH ಬಿಲ್ಲು, ದೂರವಾಣಿ ಬಿಲ್ಲು ಇತ್ಯಾದಿಗಳನ್ನು ಯಾವುದೇ ಶುಲ್ಕವಿಲ್ಲದೆ ಬ್ಯಾಂಕಿನ ಮೂಲಕ ಪಾವತಿಸಬಹುದಾಗಿದ್ದು, ಸದರಿ ಸೌಲಭ್ಯ ಉಪಯೋಗಿಸಲು ಕೋರಿದೆ.

24. ಬ್ಯಾಂಕು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಯೊಂದಿಗೆ Mobile Banking ಮತ್ತು UPI ಸೌಲಭ್ಯ ಒದಗಿಸುತ್ತಿದ್ದು ಗ್ರಾಹಕರು ಇದರ ಉಪಯೋಗ ಪಡೆದುಕೊಳ್ಳಲು ಕೋರಿದೆ.

25. ಸದಸ್ಯರುಗಳು ತಾವು ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ ಷೇರು ದೃಢೀಕರಣ ಪತ್ರಗಳನ್ನು ಪಡೆಯಲು ಕೋರಿದೆ.

26. ಬದಲಾವಣೆಗೊಂಡ ಆದಾಯ ತೆರಿಗೆ ಕಾನೂನು ರೀತ್ಯಾ ಠೇವಣಿದಾರರುಗಳಿಗೆ ರಿಕರಿಂಗ್ ಠೇವಣಿಗಳನ್ನೊಳ ಗೊಂಡಂತೆ ಎಲ್ಲಾ ಅವಧಿ ಠೇವಣಿಗಳ ಮೇಲೆ ವಾರ್ಷಿಕ ರೂ.50,000/– (ಹಿರಿಯ ನಾಗರೀಕರಾಗಿದ್ದಲ್ಲಿ ರೂ.1,00,000/–) ಗಳಿಗೂ ಮೀರಿ ಬಡ್ಡಿ ಪಾವತಿಸುತ್ತಿದ್ದಲ್ಲಿ ಮೂಲದಲ್ಲೆ ಆದಾಯ ತೆರಿಗೆ ಕಡಿತ (TDS) ನಿಯಮಗಳು ಅನ್ವಯವಾಗುತ್ತವೆ. ಠೇವಣಿದಾರರುಗಳು ಆದಾಯ ತೆರಿಗೆ ವಿನಾಯಿತಿ ಮಿತಿಯೊಳಗೆ ವಾರ್ಷಿಕ ಆದಾಯ ಹೊಂದಿದ್ದಲ್ಲಿ 15G ಅಥವಾ 15H ಫಾರಂಗಳನ್ನು ಸಲ್ಲಿಸಿ TDSನಿಂದ ವಿನಾಯಿತಿ ಪಡೆಯಬಹುದಾಗಿದೆ. ಈ ಸಂಬಂಧದಲ್ಲಿ ಶಾಖಾ ವ್ಯವಸ್ಥಾಪಕರುಗಳನ್ನು ಸಂಪರ್ಕಿಸಲು ಕೋರಿದೆ.

## ಅವಧಿ ಠೇವಣಿ ಮೇಲಿನ ವಾರ್ಷಿಕ ಬಡ್ಡಿ ದರಗಳು

| | ವಿವರಗಳು | ಠೇವಣಿದಾರರಿಗೆ | ಹಿರಿಯ ನಾಗರಿಕರಿಗೆ |
|---|---|---|---|
| ❖ | 7 ದಿನಗಳು ಮತ್ತು ಮೇಲ್ಪಟ್ಟು 29 ದಿನಗಳವರೆಗೆ | 3.00% | 3.00% |
| ❖ | 30 ದಿನಗಳು ಮತ್ತು ಮೇಲ್ಪಟ್ಟು 90 ದಿನಗಳವರೆಗೆ | 4.00% | 4.50% |
| ❖ | 91 ದಿನಗಳು ಮತ್ತು ಮೇಲ್ಪಟ್ಟು 180 ದಿನಗಳವರೆಗೆ | 4.50% | 5.00% |
| ❖ | 181 ದಿನಗಳು ಮತ್ತು ಮೇಲ್ಪಟ್ಟು 364 ದಿನಗಳವರೆಗೆ | 6.00% | 6.50% |
| ❖ | 365 ದಿನಗಳು (1 ವರ್ಷ) ಮತ್ತು 2 ವರ್ಷಗಳವರೆಗೆ | 7.25% | 7.75% |
| ❖ | 2 ವರ್ಷಕ್ಕೂ ಮೇಲ್ಪಟ್ಟು 5 ವರ್ಷಗಳವರೆಗೆ | 7.00% | 7.50% |
| ❖ | 5 ವರ್ಷಕ್ಕೂ ಮೇಲ್ಪಟ್ಟು (above 5 years) | 6.50% | 7.00% |
| ❖ | ಸೊಸೈಟಿ ಮತ್ತು ಸಂಸ್ಥೆಯ ಠೇವಣಿಗೆ 365 ದಿನಗಳು (1 ವರ್ಷ) | 7.50% | |

(ಸೂಚನೆ : ರೂ. 15.00 ಲಕ್ಷ ಮತ್ತು ಮೇಲ್ಪಟ್ಟ ಮೊಬಲಗನ್ನು ಒಂದೇ ಗಂಟಿನಲ್ಲಿ ಒಂದು ವರ್ಷ ಮತ್ತು ಮೇಲ್ಪಟ್ಟು ಅವಧಿಗೆ ಇರಿಸಿದ್ದಲ್ಲಿ ಅನ್ವಯವಾಗುವ ಬಡ್ಡಿ ದರಗಳಿಗಿಂತ ಶೇಕಡ 0.25ರಷ್ಟು ಹೆಚ್ಚಿನ ಬಡ್ಡಿ ನೀಡಲಾಗುವುದು)

## ಬ್ಯಾಂಕ್ ನಡೆದು ಬಂದ ಹಾದಿ

- ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ದಿನಾಂಕ 06–04–1907 ರಂದು ಸ್ಥಾಪನೆಗೊಂಡು 117 ವರ್ಷಗಳ ಉತ್ತಮ ಬ್ಯಾಂಕಿಂಗ್ ಸೇವೆಯನ್ನು ಗ್ರಾಹಕರುಗಳಿಗೆ ಒದಗಿಸಿ ಇಂದು ಕರ್ನಾಟಕ ರಾಜ್ಯದ ಅತ್ಯುನ್ನತ ಪಟ್ಟಣ ಸಹಕಾರ ಬ್ಯಾಂಕ್ ಆಗಿದೆ.

- ಕರ್ನಾಟಕ ರಾಜ್ಯದ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ಅತ್ಯುನ್ನತ ಸ್ಥಾನ ಪಡೆದಿದೆ. 1926, 1927 ಮತ್ತು 1928 ರಲ್ಲಿ ಸತತವಾಗಿ ಮೂರು ವರ್ಷ ಮೈಸೂರು ಸಂಸ್ಥಾನದ 'ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್' ಪ್ರಶಸ್ತಿಯನ್ನು ಅಂದಿನ ಮೈಸೂರು ಸಂಸ್ಥಾನದ ಯುವರಾಜರಾದ ಶ್ರೀ ಶ್ರೀ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್‌ರವರಿಂದ ಪಡೆದಿದೆ.

- ಕರ್ನಾಟಕ ರಾಜ್ಯ ಸರ್ಕಾರದಿಂದಲೂ ಸಹ 2002, 2004, 2007–08 ಮತ್ತು 2011–12ರ ಸಾಲಿಗೆ ಕರ್ನಾಟಕ ರಾಜ್ಯದ 'ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್ ಪ್ರಶಸ್ತಿ' ಪಡೆದಿದೆ. ಪ್ರಾರಂಭದಿಂದಲೂ ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯಿಂದ ಆಡಿಟ್ ವರ್ಗೀಕರಣದಲ್ಲಿ "A" ಸ್ಥಾನ ಪಡೆದಿದೆ.

- ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದವರು ಅಂತರ ರಾಷ್ಟ್ರೀಯ ಸಹಕಾರ ವರ್ಷ–2012ರ ಅಂಗವಾಗಿ ದಿನಾಂಕ 08.09.2012 ರಂದು ನವದೆಹಲಿಯಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ನಮ್ಮ ಬ್ಯಾಂಕಿಗೆ **"ಶತಮಾನೋತ್ಸವ ಪೂರೈಸಿದ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್"** ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ.

- ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ಹೊಸ ದೆಹಲಿ ರವರು ದಿನಾಂಕ 23.06.2022 ರಂದು ನವದೆಹಲಿಯಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಬ್ಯಾಂಕ್ 100 ವರ್ಷಗಳನ್ನು ಪೂರೈಸಿರುವ ಹಿನ್ನಲೆಯಲ್ಲಿ **"ಶತಮಾನ ದಾಟಿದ ಬ್ಯಾಂಕ್"** ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ.

- ಕರ್ನಾಟಕ ರಾಜ್ಯ ಸಹಕಾರಿ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿಯಮಿತ, ಬೆಂಗಳೂರು ರವರು ಸಹ ಅಂತರ ರಾಷ್ಟ್ರೀಯ ಸಹಕಾರ ವರ್ಷ–2012ರ ಸಂಬಂಧ ನಮ್ಮ ಬ್ಯಾಂಕನ್ನು **"ಶತಮಾನೋತ್ಸವ ಪೂರೈಸಿದ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್"** ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ.

- ಕರ್ನಾಟಕ ರಾಜ್ಯ ಸಹಕಾರಿ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿಯಮಿತ, ಬೆಂಗಳೂರು ರವರು 59ನೇ ಅಖಿಲ ಭಾರತ ಸಹಕಾರ ಸಪ್ತಾಹ–2012ರ ಸಂಬಂಧ ದಿನಾಂಕ 17.11.2012ನೇ ಶನಿವಾರದಂದು ಗದಗಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ನಮ್ಮ ಬ್ಯಾಂಕಿಗೆ ಕರ್ನಾಟಕ ರಾಜ್ಯದ **"ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್ "** ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ.

- ಕರ್ನಾಟಕ ರಾಜ್ಯ ಸಹಕಾರಿ ಪಟ್ಟಣ ಬ್ಯಾಂಕುಗಳ ಮಹಾಮಂಡಳದವರು ಕಳೆದ ಹತ್ತು ಸಾಲುಗಳಿಂದಲೂ ನಮ್ಮ ಬ್ಯಾಂಕನ್ನು ರಾಜ್ಯದ ಅತ್ಯುನ್ನತ ಮೂರು ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಒಂದಾಗಿರುವುದಕ್ಕೆ ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ.

- ಮಾನ್ಯ ಸದಸ್ಯರುಗಳು ತಮ್ಮ ಹಾಗೂ ತಮ್ಮ ಸ್ನೇಹಿತ, ಬಂಧು–ಬಳಗದವರ ಬ್ಯಾಂಕಿಂಗ್ ಖಾತೆಗಳನ್ನು ನಮ್ಮ ಬ್ಯಾಂಕಿನಲ್ಲಿ ತೆರೆಸುವುದರ ಮೂಲಕ ಸಂಸ್ಥೆಯ ಅಭಿವೃದ್ಧಿಗೆ ಸಹಕರಿಸಬೇಕೆಂದು ವಿನಂತಿಸಿಕೊಳ್ಳಲಾಗಿದೆ

## ಬ್ಯಾಂಕಿನ ಶಾಖೆಗಳ ವಿಳಾಸ ಹಾಗೂ ದೂರವಾಣಿ ಸಂಖ್ಯೆ

| | | |
|---|---|---|
| 1 | ಪ್ರಧಾನ ಕಛೇರಿ ಶಾಖೆ | ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18 ☎ 26672751/ 9342781401 |
| 2 | ವಿಜಯನಗರ ಶಾಖೆ | ನಂ. 7ಇ, 14ನೇ ಮುಖ್ಯರಸ್ತೆ (ಪೂರ್ವ), ವಿಜಯನಗರ, ಬೆಂಗಳೂರು-40 ☎ 23302005 / 9342781402 |
| 3 | ಜಯನಗರ 9ನೇ ಬ್ಲಾಕ್ ಶಾಖೆ | ನಂ. 1432, 39ನೇ ಅಡ್ಡರಸ್ತೆ, 22ನೇ ಮುಖ್ಯರಸ್ತೆ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-41, ☎ 22442389 / 9342781403 |
| 4 | ಇಂದಿರಾನಗರ ಶಾಖೆ | ನಂ. 29ಎ, 1ನೇ ಹಂತ, ಬಿನ್ನಮಂಗಲ, ಇಂದಿರಾನಗರ, (ಬಿ.ಎಂ.ಶ್ರೀ ಸರ್ಕಲ್), ಬೆಂಗಳೂರು-38 ☎ 25250194/ 9342781404 |
| 5 | ಚಾಮರಾಜಪೇಟೆ ಪಶ್ಚಿಮ ಶಾಖೆ | ನಂ. 68, 1ನೇ ಮಹಡಿ, ಸಿರಸಿ ವೃತ್ತ (ರಸ್ತೆ), ಚಾಮರಾಜಪೇಟೆ, ಬೆಂಗಳೂರು-18. ☎ 26707349 / 9342781405 |
| 6 | ಶಾಂತಿನಗರ ಶಾಖೆ | ನಂ.375-31, ಹೆಚ್.ಸಿದ್ದಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಹೊಂಬೇಗೌಡನಗರ, ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆ ಎದುರು, ಬೆಂಗಳೂರು-560 027. ☎ 22219211 / 9342781406 |
| 7 | ಮಹಾಲಕ್ಷ್ಮೀಪುರ ಶಾಖೆ | ನಂ. 429, 12ನೇ ಕ್ರಾಸ್, ಪಶ್ಚಿಮ ಕಾರ್ಡ್ ರಸ್ತೆ, ಬಸವೇಶ್ವರನಗರ 2ನೇ ಹಂತ, (ಜಿ.ಡಿ.ನಾಯ್ಡು ಹಾಲ್ ರಸ್ತೆ), ಮಹಾಲಕ್ಷ್ಮೀಪುರ, ಬೆಂಗಳೂರು-86 ☎ 23491120 / 9342781407 |
| 8 | ಸಂಜಯನಗರ ಶಾಖೆ | ನಂ. 4/ಎ, ಸರ್ವೆ ನಂ 35/1, ಗೆದ್ದಲಹಳ್ಳಿ ಮುಖ್ಯರಸ್ತೆ, ರಾಜಮಹಲ್ ವಿಲಾಸ್ ಎರಡನೇ ಘಟ್ಟ, ಸಂಜಯನಗರ, ಬೆಂಗಳೂರು-560 094 ☎ 23414135/ 9342781408 |
| 9 | ಪದ್ಮನಾಭನಗರ ಶಾಖೆ | ನಂ. 637, ಸಿ.ಜೆ. ವೆಂಕಟದಾಸ ರಸ್ತೆ, (ಎನ್.ಯು. ಆಸ್ಪತ್ರೆಯ ಎದುರು), ಜಯನಗರ ಹೆಚ್.ಬಿ.ಸಿ.ಎಸ್ 1ನೇ ಘಟ್ಟ, ಪದ್ಮನಾಭನಗರ, ಬೆಂಗಳೂರು-560 070. ☎ 26393519 / 9342781409 |
| 10 | ಕೋರಮಂಗಲ ಶಾಖೆ | ನಂ. 6, (ಹಳೆ ನಂ. 5), ಎಸ್.ಎನ್. ಪ್ರೈಡ್, 1ನೇ ಮಹಡಿ, 1ನೇ ಮುಖ್ಯರಸ್ತೆ, ಮಡಿವಾಳ, ಬೆಂಗಳೂರು-68 ☎ 25522721 / 9342781410 |
| 11 | ಆವಲಹಳ್ಳಿ ಶಾಖೆ | ನಂ. 64/47, 1ನೇ ಮಹಡಿ, 14ನೇ ಮುಖ್ಯರಸ್ತೆ, 50 ಅಡಿರಸ್ತೆ, ಮುನೇಶ್ವರ ಬ್ಲಾಕ್, ಬೆಂಗಳೂರು-26 ☎ 26420357 / 9342781411 |
| 12 | ಆರ್.ಟಿ.ನಗರ ಶಾಖೆ | ನಂ. 38, ಮೊದಲನೇ ಮಹಡಿ, 2ನೇ ಮುಖ್ಯರಸ್ತೆ, ಮನೋರಾಯನಪಾಳ್ಯ, ಚೋಳನಾಯಕನಹಳ್ಳಿ, ಬೆಂಗಳೂರು-32 ☎ 23650122 / 9342781412 |
| 13 | ಜ್ಞಾನಜ್ಯೋತಿನಗರ ಶಾಖೆ | ನಂ. 1, ಮೊದಲನೆ ಮಹಡಿ, 2ನೇ ಕ್ರಾಸ್, ಉಲ್ಲಾಳ ಮುಖ್ಯರಸ್ತೆ, ಜ್ಞಾನಜ್ಯೋತಿನಗರ, ಬೆಂಗಳೂರು-56 ☎ 23240023 / 9342781413 |

| | | |
|---|---|---|
| 14 | ಹೆಚ್.ಆರ್.ಬಿ.ಆರ್. ಲೇಔಟ್ ಶಾಖೆ | ನಂ. 50/2, BBMP ಖಾತಾ ಸಂಖ್ಯೆ: 330, 1ನೇ ಮಹಡಿ, ಕಮ್ಮನಹಳ್ಳಿ ಮುಖ್ಯರಸ್ತೆ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು-84 ☎ 25450087 / 9342781414 |
| 15 | ಕೃಷ್ಣರಾಜಪುರಂ ಶಾಖೆ | ನಂ. 63/77, 1ನೇ ಮಹಡಿ, ರಾಜರಾಜೇಶ್ವರಿ ದೇವಸ್ಥಾನ ರಸ್ತೆ, ದೇವಸಂದ್ರ ಮುಖ್ಯರಸ್ತೆ, ಕೃಷ್ಣರಾಜಪುರಂ, ಬೆಂಗಳೂರು-36 ☎ 25610409 / 9342781415 |
| 16 | ರಾಮನಗರ ಟೌನ್ ಶಾಖೆ | ನಂ. 1363/2058, 1ನೇ ಮಹಡಿ, ರಾಮನಗರ ಬಸ್ ಸ್ಟಾಂಡ್ ಎದುರು, ಬಿ.ಎಂ.ರಸ್ತೆ, ರಾಮನಗರ ಟೌನ್, ರಾಮನಗರ ☎ 27271173 / 9342781416 |
| 17 | ಪೀಣ್ಯ-ದಾಸರಹಳ್ಳಿ ಶಾಖೆ | ನಂ. 1040/1, ಸರ್ವೆ ನಂ. 13, ದಾಸರಹಳ್ಳಿ ವಿಲೇಜ್, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ದಾಸರಹಳ್ಳಿ, (ದಾಸರಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ), ಬೆಂಗಳೂರು-560 097. ☎ 28390222 / 9342781417 |
| 18 | ಕುವೆಂಪುನಗರ ಶಾಖೆ, ಮೈಸೂರು ನಗರ | ನಂ. 830, 830/1, 830/2, 1ನೇ ಮಹಡಿ, ನ್ಯೂ ಕಾಂತರಾಜ್ ಅರಸ್ ರಸ್ತೆ, (ಅಕ್ಷಯ ಬಂಡಾರ ರಸ್ತೆ) ಕುವೆಂಪುನಗರ, ಮೈಸೂರು-570023 ☎ 0821-2490163 / 9342781418 |
| 19 | ಹೊಸೂರು ರಸ್ತೆಯ ಎಲೆಕ್ಟ್ರಾನಿಕ್ ಸಿಟಿ ಶಾಖೆ | ನಂ. 81 ಮತ್ತು 82, ಸರ್ವೆ ನಂ. 63, ನಾಗನಾಥಪುರ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು-68 ☎ 25744442 / 9342781419 |
| 20 | ಯಲಹಂಕ ಶಾಖೆ | ನಂ. 796, ಎಂ.ಐ.ಜಿ 'ಎ' ಕ್ರಾಸ್, 'ಎ' ಸೆಕ್ಟರ್, 3ನೇ ಹಂತ, 3ನೇ ಘಟ್ಟ, ಯಲಹಂಕ ನ್ಯೂ ಟೌನ್, ಮಿನಿ ವಿಧಾನಸೌಧ ಹತ್ತಿರ, ಬೆಂಗಳೂರು-16 ☎ 28561898 / 9342781420 |
| 21 | ಅಂಜನಾನಗರ ಶಾಖೆ | ನಂ. 93/123, ಹೊಸ ಗೊಲ್ಲರಪಾಳ್ಯ, ಅಂಜನಾನಗರ, ಮಾಗಡಿ ಮುಖ್ಯರಸ್ತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು-560 091 ☎ 23288889 / 9342781421 |
| 22 | ಕೋಣನಕುಂಟೆ ಶಾಖೆ | ನಂ. 27, ಸದಾನಂದಪ್ಪ ಲೇ ಔಟ್, 2ನೇ ಕ್ರಾಸ್, ಚುಂಚಘಟ್ಟ ರಸ್ತೆ, ಈಶ್ವರ ಲೇಔಟ್ ಬಸ್ ನಿಲ್ದಾಣದ ಹತ್ತಿರ, ಶ್ರೀ ಶಿವಶಕ್ತಿ ದೇವಸ್ಥಾನ ಎದುರು, ಬೆಂಗಳೂರು-560062 ☎ 26321022 / 9342781422 |

## ಸದಸ್ಯರುಗಳ ಅನುಕೂಲಕ್ಕಾಗಿ ಆಡಳಿತ ಮಂಡಳಿಯ ತೀರ್ಮಾನಗಳು

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ / ಕರ್ನಾಟಕ ಗೃಹ ಮಂಡಳಿ / ಗೃಹ ನಿರ್ಮಾಣ ಸಹಕಾರ ಸಂಘಗಳಿಂದ ಹಂಚಿಕೆಯಾಗುವ ನಿವೇಶನಗಳ ಖರೀದಿಗೆ ಸಾಲ ಸೌಲಭ್ಯ ಪರಿಚಯಿಸಿದೆ.
2. ವ್ಯಾಪಾರ ವಹಿವಾಟು ಉದ್ದೇಶಗಳಿಗೆ ನಿವೇಶನ ಆಧಾರ ಸಾಲ/ಕ್ಯಾಷ್ ಕ್ರೆಡಿಟ್ ಸೌಲಭ್ಯ ಪರಿಚಯಿಸಿದೆ.
3. ಸ್ಲಂ ಹೊರತುಪಡಿಸಿ 600 ಚದರ ಅಡಿಗಳಿರುವ ಸ್ಥಿರಾಸ್ತಿಗಳಿಗೂ ಸಾಲ ಸೌಲಭ್ಯ ಅಳವಡಿಕೆ.
4. ರೂ. 14 (ಹದಿನಾಲ್ಕು) ಕೋಟಿಗಳವರೆಗೂ ಸ್ಥಿರಾಸ್ತಿ ಆಧಾರ ಸಾಲ ಸೌಲಭ್ಯ ನೀಡಿಕೆ.
5. ಸದಸ್ಯರುಗಳಿಗೆ ಶೀಘ್ರ ಸಾಲ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಪ್ರಧಾನ ವ್ಯವಸ್ಥಾಪಕರಿಗೆ ರೂ.25.00 ಲಕ್ಷಗಳವರೆವಿಗೆ ಸಾಲ ಮಂಜೂರು ಮಾಡಲು ಅಧಿಕಾರ ನಿಯೋಜನೆ ಮಾಡಿದೆ.
6. ಭಾರತೀಯ ರಿಸರ್ವ್ ಬ್ಯಾಂಕ್‌ನವರ ಅನುಮತಿಯೊಂದಿಗೆ ಕರ್ನಾಟಕ ರಾಜ್ಯಾದ್ಯಂತ ಕಾರ್ಯಕ್ಷೇತ್ರ ವಿಸ್ತರಣೆ ಮತ್ತು ರಾಜ್ಯದ ಯಾವುದೇ ಪ್ರದೇಶದಲ್ಲಿನ ಸ್ಥಿರಾಸ್ತಿಗಳ ಆಧಾರ ಸಾಲ ಸೌಲಭ್ಯ ನೀಡಲು ಅವಕಾಶ ಮಾಡಿದೆ.
7. ಅವಧಿಗೆ ಮುಂಚಿತವಾಗಿ ಸ್ವಂತ ಸಂಪನ್ಮೂಲಗಳಿಂದ ಸಾಲ ತೀರುವಳಿ ಮಾಡಿದಲ್ಲಿ ಯಾವುದೇ ಸೇವಾ ಶುಲ್ಕವಿಲ್ಲ.
8. ಅವಧಿಗೆ ಮುಂಚಿತವಾಗಿ ಠೇವಣಿ ಹಿಂತೆಗೆದಲ್ಲಿ ದಂಡ ಬಡ್ಡಿ ವಿಧಿಸದಿರಲು ತೀರ್ಮಾನ.
9. ಠೇವಣಿ ಆಧಾರಿತ ಸಾಲಗಳಿಗೆ ಹೆಚ್ಚುವರಿ ಬಡ್ಡಿ ಶೇಕಡ 2 ರಿಂದ ಶೇಕಡ 1ಕ್ಕೆ ಇಳಿಸಲು ತೀರ್ಮಾನ.
10. ಹಿರಿಯ ನಾಗರೀಕರಿಗೆ ಕಮಿಷನ್ ಪಡೆಯದೆ ಡಿಮ್ಯಾಂಡ್ ಡ್ರಾಫ್ಟ್ / ಉಚಿತ ಚೆಕ್ಕು ಪುಸ್ತಕ ನೀಡಲು ತೀರ್ಮಾನ.
11. ಸದಸ್ಯ ಮರಣ ಹೊಂದಿದಲ್ಲಿ ವಾರಸುದಾರರಿಗೆ ರೂ. 10,000/– ಗಳವರೆವಿಗೂ ಮರಣ ಪರಿಹಾರ ಪಾವತಿ ಅವಕಾಶ ಮಾಡಿದೆ.
12. ಸದಸ್ಯರ ಐಚ್ಛಿಕ ಮರಣ ಪರಿಹಾರ ನಿಧಿ ಮತ್ತು ಸದಸ್ಯರ ಕಲ್ಯಾಣ ನಿಧಿ ಸ್ಥಾಪನೆ.
13. 50 ವರ್ಷ ಸದಸ್ಯರಾಗಿ ಮುಂದುವರೆದವರಿಗೆ ಮತ್ತು ಉತ್ತಮ ಗ್ರಾಹಕರುಗಳಿಗೆ ಸನ್ಮಾನ ಸಂಪ್ರದಾಯ ಅಳವಡಿಕೆ.
14. ರೂ. 50.00 ಲಕ್ಷಗಳವರೆಗಿನ ಸ್ಥಿರಾಸ್ತಿ ಸಾಲಗಳಿಗೆ ಮತ್ತು ಹೆಚ್ಚುವರಿ ಸಾಲಗಳಾಗಿದ್ದಲ್ಲಿ ರೂ.80.00 ಲಕ್ಷಗಳವರೆಗಿನ ಸ್ಥಿರಾಸ್ತಿ ಸಾಲಗಳಿಗೆ ವಿಧಿಸಲಾಗುತ್ತಿದ್ದ ಸೇವಾ ಶುಲ್ಕವನ್ನು ಶೇಕಡ 1 ರಿಂದ ಶೇಕಡ 0.50 ಇಳಿಸಲು ತೀರ್ಮಾನಿಸಿದೆ.
15. ಒಡವೆ ಆಧಾರ ಪ್ರತಿ ಗ್ರಾಂ ಚಿನ್ನಕ್ಕೆ ರೂ.5,900–00 ಗಳವರೆವಿಗೆ ನಿಬಂಧನೆಗಳಿಗೊಳಪಟ್ಟು ವಾರ್ಷಿಕ ಶೇಕಡ 8.50 ಕನಿಷ್ಠ ಬಡ್ಡಿ ದರದಲ್ಲಿ ಸಾಲ ನೀಡಿಕೆ ಮತ್ತು ಒಡವೆ ಸಾಲಗಳಿಗೆ ಸಂಬಂಧಿಸಿದಂತೆ ಷೇರು ಹೊಂದಾಣಿಕೆ ನಿರ್ಬಂಧ ತೆಗೆದುಹಾಕಿದೆ. ನಾಮಮಾತ್ರ ಸದಸ್ಯರು ಪಡೆಯುವ ಒಡವೆ ಸಾಲಗಳಿಗೆ ಸೇವಾ ಶುಲ್ಕದಿಂದ ವಿನಾಯಿತಿ ನೀಡಿದೆ.
16. ಬೆಂಗಳೂರು ಮಹಾನಗರದಲ್ಲಿನ 'ಬಿ' ಖಾತಾ ಸ್ಥಿರಾಸ್ತಿಗಳ ಆಧಾರ ರೂ. 30.00 ಲಕ್ಷಗಳವರೆಗೆ ಸಾಲ ಸೌಲಭ್ಯ ನೀಡಿಕೆ.

ಸ್ಥಾಪನೆ : 1907

119 ವರ್ಷಗಳ ಸಾರ್ಥಕ ಸಹಕಾರ ಬ್ಯಾಂಕಿಂಗ್ ಸೇವೆಯಲ್ಲಿ

# ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18
ಕಛೇರಿ ☎ : 26678572 : 26600512 : 26609066
ಅಧ್ಯಕ್ಷರು: 26606377: ಪ್ರಧಾನ ವ್ಯವಸ್ಥಾಪಕರು: 26617980
ಟೆಲಿಫ್ಯಾಕ್ಸ್: (080) 26617980 www.bccbl.co.in

## 2024–25ನೇ ಸಾಲಿನ ಆಡಳಿತ ಮಂಡಳಿ ವರದಿ

ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರಾದ ಗೌರವಾನ್ವಿತ ಸಹಕಾರಿ ಬಂಧುಗಳೇ,

**1. ಸ್ವಾಗತ :**

ಪಟ್ಟಣ ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ 118 ವರ್ಷಗಳ ಬ್ಯಾಂಕಿಂಗ್ ಸೇವೆಯನ್ನು ಗ್ರಾಹಕರಿಗೆ ಒದಗಿಸಿ 119ನೇ ವರ್ಷದಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿರುವ, ಷೇರು ಸಂಗ್ರಹಣೆ, ನಿಧಿ ಸಂಗ್ರಹಣೆ, ಠೇವಣಿ ಸಂಗ್ರಹಣೆ, ಸಾಲ ಮುಂಗಡಗಳಲ್ಲಿ, ಒಟ್ಟು ವ್ಯವಹಾರ ಲೆಕ್ಕದಲ್ಲಿ ಮತ್ತು ಲಾಭ ಗಳಿಕೆಯಲ್ಲಿ ಕರ್ನಾಟಕ ರಾಜ್ಯದ ಅತ್ಯುನ್ನತ ಪಟ್ಟಣ ಸಹಕಾರ ಬ್ಯಾಂಕ್ ಆಗಿರುವ ನಮ್ಮ ಬ್ಯಾಂಕ್‌ನ 119ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ (2024–25ನೇ ಸಾಲಿನ) ಯಲ್ಲಿ ಭಾಗವಹಿಸಿರುವ ಮಾನ್ಯ ಸದಸ್ಯರುಗಳಿಗೆ ಆಡಳಿತ ಮಂಡಳಿಯ ಸದಸ್ಯರು ಅತ್ಯಾದರದ ಸ್ವಾಗತವನ್ನು ಬಯಸುತ್ತೇವೆ.

ಈ ಮಹಾಸಭೆಯ ಮುಂದೆ ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಯೊಂದಿಗೆ ನೇಮಿಸಲ್ಪಟ್ಟಿರುವ ಮೆ॥ ಬಿ.ಪಿ.ಎಸ್. ಎಸ್.ವೈ ಅಂಡ್ ಕೋ., ಬೆಂಗಳೂರು ಚಾರ್ಟರ್ಡ್ ಅಕೌಂಟೆಂಟ್ ರವರಿಂದ ಲೆಕ್ಕ ಪರಿಶೋಧನೆಯಾಗಿ ನೀಡಲ್ಪಟ್ಟಿರುವ 2024–25ರ (ದಿನಾಂಕ:01–04–2024 ರಿಂದ 31–03–2025 ರವರೆಗೆ) ಸಾಲಿನ ಲಾಭ–ನಷ್ಟ ತ:ಖ್ತೆಗಳು ಮತ್ತು ದಿನಾಂಕ:31–03–2025ಕ್ಕೆ ಆಸ್ತಿ–ಜವಾಬ್ದಾರಿ ತಃಖ್ತೆ, ಸಮಜಾಯಿಷಿಗಳೊಂದಿಗೆ ಲೆಕ್ಕ ಪರಿಶೋಧನಾ ವರದಿ, ಬ್ಯಾಂಕಿನ ಪ್ರಗತಿಯೊಂದಿಗೆ ಆಡಳಿತ ಮಂಡಳಿ ವರದಿಗಳು, ನಿವ್ವಳ ಲಾಭ ವಿಲೇವಾರಿ, 2025–26 ರ ಸಾಲಿನ ಪರಿಷ್ಕೃತ ಹಾಗೂ 2026–27ನೇ ಸಾಲಿನ ಆಯ–ವ್ಯಯ ಪತ್ರ, ಬೈಲಾ ಬದಲಾವಣೆ ಮುಂತಾದ ವಿಷಯಗಳನ್ನು ಮಂಡಿಸುತ್ತಿದ್ದೇವೆ. ಸನ್ಮಾನ್ಯ ಸದಸ್ಯರು ಮಹಾಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮಗಳ ಅಮೂಲ್ಯವಾದ ಸಲಹೆ ಹಾಗೂ ಸೂಚನೆಗಳೊಂದಿಗೆ ಮಂಜೂರಾತಿ ನೀಡಬೇಕೆಂದು ಪ್ರಾರ್ಥಿಸುತ್ತೇವೆ.

**2. ಸ್ಥಾಪನೆ ಹಾಗೂ ಉದ್ದೇಶ :**

ರಾಷ್ಟ್ರದ ಸಹಕಾರ ಚಳುವಳಿಯ ಪ್ರಾರಂಭದ ದಿನಗಳಲ್ಲಿ ಸಾಮಾನ್ಯ ಜನರನ್ನು ಲೇವಾದೇವಿಗಾರರ ಹಿಡಿತದಿಂದ ಪಾರು ಮಾಡುವ ಉದ್ದೇಶದಿಂದ ಹಿರಿಯ ಸಹಕಾರಿಗಳಾದ ಸನ್ಮಾನ್ಯ ಶ್ರೀ ಕೆ. ರಾಮಸ್ವಾಮಯ್ಯ ಮತ್ತು ಸಂಗಡಿಗರ ಪರಿಶ್ರಮದಿಂದ 1905 ರಲ್ಲಿ ಪತ್ತಿನ ಸಹಕಾರ ಸಂಘವಾಗಿ ಬೆಂಗಳೂರು ನಗರದಲ್ಲಿ ಪ್ರಾರಂಭಗೊಂಡು, ನಂತರ ದಿನಾಂಕ 06–04–1907 ರಲ್ಲಿ ಹಿಂದಿನ ಮೈಸೂರು ಪ್ರಾಂತ್ಯದ ಪ್ರಪ್ರಥಮ ಪಟ್ಟಣ ಸಹಕಾರಿ ಬ್ಯಾಂಕ್ (First Urban Co-operative Bank of the then Mysore region) ಆಗಿ ಪರಿವರ್ತನೆಗೊಂಡ ನಮ್ಮ ಬ್ಯಾಂಕ್ ಪಟ್ಟಣ ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗ್ರಾಹಕರ ಅಪಾರ ವಿಶ್ವಾಸ ಮತ್ತು ಮನ್ನಣೆ ಗಳಿಸಿ ಉತ್ತಮ ಪ್ರಗತಿ ಹೊಂದಿ ತಮ್ಮೆಲ್ಲರ ಪ್ರೀತಿ ಗೌರವಾದರಗಳಿಗೆ ಪಾತ್ರವಾಗಿದೆ. ಬೆಂಗಳೂರು ನಗರ ಹಂತ ಹಂತವಾಗಿ ಬೆಳೆದು ಉದ್ಯಾನ ನಗರಿಯಾಗಿ ನಂತರ ಐಟಿ–ಬಿಟಿ ಸಿಟಿಯಾಗಿ ರೂಪಾಂತರಗೊಂಡು ಇಂದು ಪ್ರಪಂಚದ ಮಹಾನಗರಗಳಲ್ಲಿ ಒಂದಾಗಿ ಪ್ರಸಿದ್ಧಿಯಾಗಿದೆ. ಇಂತಹ ಬೆಂಗಳೂರು ಮಹಾನಗರದಲ್ಲಿ ನಮ್ಮ ಬ್ಯಾಂಕ್ ಕೇಂದ್ರ ಕಛೇರಿ ಹೊಂದಿ ಗ್ರಾಹಕರ ಅಶೋತ್ತರಗಳನ್ನು ಗಮನದಲ್ಲಿರಿಸಿ ಕಾರ್ಯ ನಿರ್ವಹಿಸುತ್ತಿದ್ದು, ಕರ್ನಾಟಕ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಷೇರು ಬಂಡವಾಳ, ನಿಧಿಗಳು, ಠೇವಣಿ,

ಸಾಲ ಮತ್ತು ಮುಂಗಡಗಳು, ಒಟ್ಟು ದುಡಿಯುವ ಬಂಡವಾಳ, ಒಟ್ಟು ವ್ಯವಹಾರ ಲೆಕ್ಕ ಮತ್ತು ಲಾಭ ಗಳಿಕೆಯಲ್ಲಿ ರಾಜ್ಯದ ಅತ್ಯುನ್ನತ ಬ್ಯಾಂಕ್ ಆಗಿದೆ ಮತ್ತು ದೇಶದ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಒಂದಾಗಿ ಬೆಳೆದು ನಿಂತಿದೆ ಎಂದು ತಿಳಿಸಲು ಇಚ್ಛಿಸುತ್ತೇವೆ.

ಬ್ಯಾಂಕ್ ಸ್ಥಾಪನೆಗೊಂಡ ಪ್ರಾರಂಭದಿಂದಲೂ ಮುಕ್ತ ಸದಸ್ಯತ್ವ ನೀತಿ ಅನುಸರಿಸಿ ಸದಸ್ಯರುಗಳನ್ನು ನೋಂದಾಯಿಸುತ್ತಾ ಷೇರು ಬಂಡವಾಳವನ್ನು ಕ್ರೋಢೀಕರಿಸಿಕೊಂಡು, ಗ್ರಾಹಕರಲ್ಲಿ ಮಿತವ್ಯಯ ಪ್ರಚುರಪಡಿಸಿ ಆಕರ್ಷಕ ಠೇವಣಿ ಯೋಜನೆಗಳ ಮೂಲಕ ಠೇವಣಿಗಳನ್ನು ಸಂಗ್ರಹಿಸುವ ಮೂಲಕ ನಿಧಿ ಸಂಗ್ರಹಣೆ, ಸದಸ್ಯರುಗಳಿಗೆ ನಿವೇಶನ ಖರೀದಿ, ಗೃಹ ಖರೀದಿ, ಗೃಹ ನಿರ್ಮಾಣ, ಮನೆ ರಿಪೇರಿ, ಸ್ವಂತ ಉದ್ಯೋಗಗಳನ್ನು ಕೈಗೊಳ್ಳಲು, ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು, ಪ್ರಯಾಣಿಕರ ಹಾಗೂ ಸರಕುಗಳ ಸಾಗಾಣಿಕೆಗಾಗಿ ವಾಹನಗಳನ್ನು ಖರೀದಿಸಲು, ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಗೃಹೋಪಯೋಗಿ ವಸ್ತುಗಳ ಖರೀದಿ ಮುಂತಾದ ವಿವಿಧ ಉದ್ದೇಶಗಳಿಗಾಗಿ ಸಾಲ ಸೌಲಭ್ಯಗಳನ್ನು ಒದಗಿಸುತ್ತಾ ಸದಸ್ಯರ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗುವ ಮೂಲಕ ಸಂಸ್ಥೆಯು ತನ್ನ ಧ್ಯೇಯ ಮತ್ತು ಉದ್ದೇಶ ಸಾಧನೆ ಮಾಡುವಲ್ಲಿ ಸಫಲವಾಗಿದೆ.

**3. ಸದಸ್ಯರು :**

2024–25ನೇ ಸಾಲಿನ ಪ್ರಾರಂಭದಲ್ಲಿ ಒಟ್ಟು 80048 ಸದಸ್ಯರುಗಳಿದ್ದು, ವರದಿ ಸಾಲಿನಲ್ಲಿ 2451 ಮಂದಿಯನ್ನು ಸದಸ್ಯರುಗಳನ್ನಾಗಿ ನೋಂದಾವಣೆ ಮಾಡಿಕೊಂಡಿದ್ದು 1169 ಮಂದಿ ಸದಸ್ಯರುಗಳು ನಿವೃತ್ತಿ, ಮರಣ ಹಾಗೂ ಸಾಲ ಡಿಕ್ರಿಯಾಗಿದ್ದರಿಂದ ಸದಸ್ಯತ್ವವನ್ನು ಕಳೆದುಕೊಂಡಿದ್ದು ಸಾಲಾಂತ್ಯದಲ್ಲಿ ಒಟ್ಟು 81330 ಸದಸ್ಯರುಗಳು ಮುಂದುವರೆದಿರುತ್ತಾರೆ. ಸದಸ್ಯರ ಸೇರ್ಪಡೆ ಮತ್ತು ಸದಸ್ಯತ್ವದಿಂದ ನಿರ್ಗಮಿಸಿರುವುದನ್ನು ಸರ್ವಸದಸ್ಯರ ಸಭೆಯು ಅನುಮೋದಿಸಲು ಕೋರಿದೆ.

ಸದಸ್ಯತ್ವ ಪಡೆಯಲು ಅರ್ಹವಿರುವ ಮತ್ತು ಬ್ಯಾಂಕಿನ ಸೌಲಭ್ಯ ಪಡೆಯಲು ಇಚ್ಛಿಸುವ ಯಾವುದೇ ವ್ಯಕ್ತಿಯು ಸಂಸ್ಥೆಯ ಸದಸ್ಯತ್ವ ಕೋರಿದ್ದಲ್ಲಿ ಮುಕ್ತ ಸದಸ್ಯತ್ವ ನೀತಿ ಅನುಸರಿಸಿ ಸದಸ್ಯತ್ವ ನೀಡಲಾಗಿದೆ ಮತ್ತು ವರದಿ ಸಾಲಿನಲ್ಲಿ ಸದಸ್ಯತ್ವ ಕೋರಿರುವ ಯಾವುದೇ ಅರ್ಜಿಯನ್ನು ತಿರಸ್ಕರಿಸಿರುವುದಿಲ್ಲ ಎಂಬ ಮಾಹಿತಿಯನ್ನು ಸರ್ವಸದಸ್ಯರ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇವೆ.

2024–25 ರ ಸಾಲಿನಲ್ಲಿ 459 ಸದಸ್ಯರ ಮರಣ ದಾಖಲಾಗಿದ್ದು ಮರಣ ಹೊಂದಿದ ಸದಸ್ಯರುಗಳ ಆತ್ಮಕ್ಕೆ ಶಾಂತಿ ಕೋರಿ ಪ್ರಾರ್ಥಿಸುತ್ತೇವೆ.

ಬೈಲಾ ಸಂಖ್ಯೆ 20 ರನ್ವಯ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳಡಿಯಲ್ಲಿ ಸದಸ್ಯರು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳ ರೂ. 1000/– ಗಳು ಮತ್ತು ಕನಿಷ್ಠ ಠೇವಣಿ ರೂ. 1000/– ಗಳು ಅಥವಾ ಸಾಲ ಸೌಲಭ್ಯ ಪಡೆದಿರುವಿಕೆಯೊಂದಿಗೆ ತನ್ನ ಖಾತೆಯಲ್ಲಿ ಸಹಕಾರ ವರ್ಷದಲ್ಲಿ ಕನಿಷ್ಠ 5 ಬ್ಯಾಂಕಿಂಗ್ ವ್ಯವಹಾರ ನಡೆಸಬೇಕಿದೆ. ಸಹಕಾರ ಕಾಯ್ದೆ ನಿಯಮಗಳನ್ವಯ ಕಳೆದ ಐದು ವಾರ್ಷಿಕ ಸರ್ವಸದಸ್ಯರ ಸಭೆಗಳಲ್ಲಿ ಎರಡು ಸರ್ವಸದಸ್ಯರ ಸಭೆಗಳಲ್ಲಿ ಹಾಜರಿ ಮಾಡದ ಅಥವಾ ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳದ ಸದಸ್ಯರುಗಳು ಒಂದು ವರ್ಷಗಳವರೆಗೆ ಸರ್ವಸದಸ್ಯರ ಸಭೆ ಮತ್ತು ಆಡಳಿತ ಮಂಡಳಿ ಚುನಾವಣೆಗಳಲ್ಲಿ ಮತ ನೀಡುವ ಹಕ್ಕು ಕಳೆದುಕೊಳ್ಳುವುದರಿಂದ ಎಲ್ಲಾ ಸದಸ್ಯರು ಮೇಲೆ ವಿವರಿಸಿದಂತೆ ಬ್ಯಾಂಕಿನ ಕನಿಷ್ಠ ಸೇವೆ ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ವಿನಂತಿಸಿದೆ.

**4. ಅಧಿಕೃತ ಮತ್ತು ಪಾವತಿಯಾದ ಷೇರು ಬಂಡವಾಳ :**

ಬ್ಯಾಂಕಿನ ಅಧಿಕೃತ ಷೇರು ಬಂಡವಾಳವು ರೂ. 200.00 ಮುಖಬೆಲೆಯ 1,00,00,000 ಷೇರುಗಳು ಅಂದರೆ ರೂ.200 ಕೋಟಿಗಳಾಗಿರುತ್ತದೆ.

ದಿನಾಂಕ: 01.04.2024 ರಲ್ಲಿ ಬ್ಯಾಂಕ್‌ನ ಪಾವತಿಯಾದ ಷೇರು ಬಂಡವಾಳವು ನಾಮಮಾತ್ರ ಸದಸ್ಯರನ್ನೊಳ ಗೊಂಡಂತೆ ರೂ.95,09,05,022–00ಗಳಿದ್ದು, ವರದಿ ವರ್ಷದಲ್ಲಿ ರೂ.5,70,71,033–00 ಜಮಾ ಬಂದಿದ್ದು, ರೂ.4,85,17,723.00ಗಳನ್ನು ವಾಪಸ್ಸು ನೀಡಲಾಗಿದ್ದು ಸಾಲಾಂತ್ಯಕ್ಕೆ ರೂ.95,94,58,332–00ಗಳ ಷೇರು ಬಂಡವಾಳ ಮುಂದುವರೆದಿದೆ. 2024–25ರ ಸಾಲಿನಲ್ಲಿ ಪಾವತಿಯಾದ ಷೇರು ಬಂಡವಾಳ ರೂ.85,53,310–00 ಗಳಷ್ಟು ಹೆಚ್ಚಾಗಿದ್ದು ಶೇಕಡ 0.90ರಷ್ಟು ಬೆಳವಣಿಗೆಯಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ಬ್ಯಾಂಕುಗಳ CRAR (Capital to Risk Assets Ratio) ಸಾಲಾಂತ್ಯ 2024–25 ಕ್ಕೆ ಶೇಕಡ 11 ರಷ್ಟು ಕನಿಷ್ಠ ಇರಬೇಕಿದ್ದು ದಿನಾಂಕ 31.03.2025ಕ್ಕೆ ನಮ್ಮ ಬ್ಯಾಂಕಿನ Capital to Risk Assets Ratio ಶೇಕಡ 24.71 ರಷ್ಟಿದ್ದು ಬ್ಯಾಂಕಿನ ಉತ್ತಮ ಆರ್ಥಿಕ ಸ್ಥಿತಿಗೆ ಉದಾಹರಣೆಯಾಗಿದೆ.

ಸದಸ್ಯರುಗಳು ತಾವು ಹೊಂದಿರುವ ಹೆಚ್ಚುವರಿ ಷೇರುಗಳನ್ನು ಷೇರು ಪಡೆದ ಎರಡು ವರ್ಷಗಳ ನಂತರ ಹಿಂತೆಗೆಯಲು ಅವಕಾಶಗಳಿದ್ದು, ಬ್ಯಾಂಕಿನ ಷೇರು ಬಂಡವಾಳಗಳಲ್ಲಿ ಕನಿಷ್ಠ ಮಟ್ಟದಲ್ಲಿ ಏರಿಳಿತ ಸಾಧಿಸುವ ಉದ್ದೇಶದಿಂದ ಸದಸ್ಯರುಗಳು ಆರ್ಥಿಕ ವರ್ಷವೊಂದರಲ್ಲಿ ರೂ. 2,50,000/– ಗಳು ಅಥವಾ ಆತ ಹೊಂದಿರುವ ಒಟ್ಟು ಷೇರಿನ ಶೇಕಡ 25 ರಷ್ಟು ಇವುಗಳಲ್ಲಿ ಯಾವುದು ಹೆಚ್ಚು ಅಂತಹ ಮೊಬಲಗನ್ನು ವಾಪಸ್ಸು ನೀಡಲು ನೀತಿ ಅಳವಡಿಸಿಕೊಂಡಿದ್ದು ಸದಸ್ಯರು ಸಹಕರಿಸಲು ಕೋರಿದೆ.

**5. ಕಾಯ್ದಿರಿಸಿದ ಮತ್ತು ಇತರೆ ನಿಧಿಗಳು :**

ಬ್ಯಾಂಕ್‌ನ ಕಾಯ್ದಿರಿಸಿದ ಮತ್ತು ಇತರೆ ನಿಧಿಗಳು ದಿನಾಂಕ: 01.04.2024 ರಲ್ಲಿ ರೂ.496,73,77,431.68 ಗಳಿದ್ದು 2024–25ರ ಸಾಲಾಂತ್ಯಕ್ಕೆ ರೂ.525,48,99,645–32ಗಳಿಗೆ ಏರಿದ್ದು ವರದಿ ಸಾಲಿನಲ್ಲಿ ರೂ.28,75,22,213.64 ಗಳಷ್ಟು ಹೆಚ್ಚಾಗಿದೆ. 2024–25 ರ ಸಾಲಿನಲ್ಲಿ ಕಾಯ್ದಿರಿಸಿದ ಮತ್ತು ಇತರೆ ನಿಧಿಗಳು ಶೇಕಡ 5.79 ರಷ್ಟು ಹೆಚ್ಚಾಗಿವೆ.

ಬ್ಯಾಂಕಿನ ಕಾಯ್ದಿರಿಸಿದ ಮತ್ತು ಇತರ ನಿಧಿಗಳು ಬ್ಯಾಂಕಿನ ದೃಢತೆ ಮತ್ತು ಭದ್ರತೆಗೆ ಬುನಾದಿ ಎಂಬುದನ್ನು ಸದಸ್ಯರುಗಳಿಗೆ ತಿಳಿಸಲು ಇಚ್ಛಿಸುತ್ತೇವೆ.

**6. ಠೇವಣಾತಿಗಳು :**

ದಿನಾಂಕ: 01–04–2024 ರಂದು ಬ್ಯಾಂಕ್‌ನ ಒಟ್ಟು ಠೇವಣಿಗಳು ರೂ.2096,22,55,135–91 ಗಳಿದ್ದು, 2024–25ರ ಸಾಲಾಂತ್ಯಕ್ಕೆ ಒಟ್ಟು ಠೇವಣಿಗಳು ರೂ.2158,88,87,918–96 ಗಳಾಗಿದ್ದು ವರದಿ ಸಾಲಿನಲ್ಲಿ ರೂ.62,66,32,783–05 ಗಳ ಠೇವಣಿಗಳು ಹೆಚ್ಚಾಗಿದೆ. 2024–25ರ ಸಾಲಿನಲ್ಲಿ ಬ್ಯಾಂಕಿನ ಠೇವಣಾತಿಗಳು ಶೇಕಡ 2.99ರಷ್ಟು ಬೆಳವಣಿಗೆಯಾಗಿದೆ.

ಕಳೆದ ವರ್ಷಗಳಲ್ಲಿ ಕಂಡ ಬೆಂಗಳೂರು ನಗರದ ಸಹಕಾರ ಬ್ಯಾಂಕೊಂದರ ವೈಫಲ್ಯತೆಯನ್ನು ಉದಹರಿಸುತ್ತಾ ಮುದ್ರಣ ಮಾಧ್ಯಮ ಮತ್ತು ದೃಶ್ಯ ಮಾಧ್ಯಮದವರು ಪತ್ತಿನ ಸಹಕಾರ ಸಂಘಗಳು ವೈಫಲ್ಯವಾದರೂ ಅದನ್ನು ಸಹಕಾರ ಬ್ಯಾಂಕಿನ ವೈಫಲ್ಯ ಎಂದು ಬಿಂಬಿಸುತ್ತಾ ಸಾರ್ವಜನಿಕರು ಸಹಕಾರ ಬ್ಯಾಂಕುಗಳಲ್ಲಿ ಇರಿಸಿದ್ದ ನಂಬಿಕೆಗೆ ಭಂಗ ತರುತ್ತಿರುವುದರಿಂದ ರಾಜ್ಯದ ಸಹಕಾರ ಬ್ಯಾಂಕುಗಳಲ್ಲಿ ಠೇವಣಿ ಬೆಳವಣಿಗೆ ಬಹುತೇಕ ಇಲ್ಲವಾಗಿದ್ದು, ನಮ್ಮ ಬ್ಯಾಂಕು ಠೇವಣಿ ಬೆಳವಣಿಗೆಯಲ್ಲಿ ಕನಿಷ್ಠ ಪ್ರಗತಿ ಸಾಧಿಸಿದೆ ಎಂದು ತಿಳಿಸಲು ಇಚ್ಛಿಸುತ್ತೇವೆ.

ಸದಸ್ಯರು ನಮ್ಮ ಬ್ಯಾಂಕು ಹಿಂದಿನ 118 ವರ್ಷದಿಂದಲೂ ಯಶಸ್ವಿಯಾಗಿ ಲಾಭ ಗಳಿಸುತ್ತಾ ಸಾಗುತ್ತಿರುವ ಇತಿಹಾಸ, ಸ್ವಂತ ಬಂಡವಾಳ ನಿಧಿಗಳು, ಲಾಭ ಗಳಿಕೆ ಸಾಮರ್ಥ್ಯ, ಶೇಕಡ ಶೂನ್ಯ ನಿವ್ವಳ ಅನುತ್ಪಾದಕ ಸಾಲಗಳು ಇತ್ಯಾದಿ ಸದೃಢತೆಯ ಉತ್ತಮ ಅಂಶಗಳನ್ನು ಗಮನಿಸಿ ನಮ್ಮ ಬ್ಯಾಂಕಿನಲ್ಲಿ ಠೇವಣಿ ಇರಿಸಬೇಕೆಂದು ಮತ್ತು ತಮ್ಮ ಕುಟುಂಬ ಮತ್ತು ಸ್ನೇಹಿತರ ಠೇವಣಿ ಖಾತೆಗಳನ್ನು ನಮ್ಮ ಬ್ಯಾಂಕಿನಲ್ಲಿ ತೆರೆಯಲು ಸಹಕರಿಸುವ ಮೂಲಕ ಬ್ಯಾಂಕಿನ ಪ್ರಗತಿಗೆ ಕಾರಣರಾಗಬೇಕೆಂದು ಕೋರುತ್ತೇವೆ.

ಮಾನ್ಯ ಸದಸ್ಯರುಗಳು ರಾಜ್ಯದಲ್ಲಿನ ಪತ್ತಿನ ಸಹಕಾರ ಸಂಘಗಳು ಭಾರತೀಯ ರಿಸರ್ವ್ ಬ್ಯಾಂಕಿನ ಅಧೀನದಲ್ಲಿ ಕಾರ್ಯವೆಸಗದಿರುವ ಅಂಶವನ್ನು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳು ಭಾರತೀಯ ರಿಸರ್ವ್ ಬ್ಯಾಂಕಿನ ಸುಪರ್ದಿಯಲ್ಲಿ ಕಾರ್ಯವೆಸಗುತ್ತವೆ ಎಂಬ ಅಂಶವನ್ನು ಮನಗಾಣಬೇಕೆಂದು ಸಹ ಅರಿಕೆ ಮಾಡಿಕೊಳ್ಳುತ್ತೇವೆ.

**7. ಠೇವಣಿ ವಿಮಾ ಯೋಜನೆಯಡಿಯಲ್ಲಿ ಠೇವಣಿ ಭದ್ರತೆ :**

ಬ್ಯಾಂಕಿನ ಪ್ರತಿ ಠೇವಣಿದಾರರ ರೂ. 5,00,000–00 ಗಳ ಠೇವಣಿಗಳು "ಡಿಪಾಸಿಟ್ ಇನ್ಸೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟೀ ಕಾರ್ಪೊರೇಷನ್ ಆಫ್ ಇಂಡಿಯಾ, ಮುಂಬಯಿ" ರವರಿಂದ ವಿಮೆಗೊಳಪಟ್ಟಿವೆ. ಈ ಸಂಬಂಧದಲ್ಲಿ ಬ್ಯಾಂಕಿನ ಪೂರ್ಣ ಠೇವಣಾತಿ ರೂ.2160.29 ಕೋಟಿ ರೂಪಾಯಿಗಳ ಮೇಲೆ 2024–25 ರ ಸಾಲಿನಲ್ಲಿ ಒಟ್ಟಾರೆ ಪ್ರೀಮಿಯಂ ರೂ.2,76,36,538.00 ಗಳನ್ನು ಪಾವತಿಸಿದ್ದು, ಠೇವಣಿ ವಿಮೆ ಚಾಲ್ತಿಯಲ್ಲಿದೆ.

ಠೇವಣಿ ವಿಮಾ ಯೋಜನೆಯಿಂದಾಗಿ ದೇಶದ ಯಾವುದೇ ಬ್ಯಾಂಕು ನಷ್ಟದಿಂದಾಗಿ ಸಮಾಪನಾಗೊಂಡಲ್ಲಿ ಅಂತಹ ಬ್ಯಾಂಕಿನ ಪ್ರತಿ ಗ್ರಾಹಕನ ರೂ. 5.00 ಲಕ್ಷಗಳವರೆಗಿನ ಠೇವಣಿಯು ವಿಮೆಗೊಳಪಟ್ಟಿರುತ್ತದೆ ಎಂಬ ಅಂಶವನ್ನು ಗಮನಿಸಲು ಕೋರುತ್ತೇವೆ. ಈ ಕಾರಣದಿಂದಾಗಿ ಗ್ರಾಹಕರು ಹೆಚ್ಚು ವಿಶ್ವಾಸದಿಂದ ಬ್ಯಾಂಕಿನೊಂದಿಗೆ ವ್ಯವಹರಿಸಬಹುದಾಗಿದೆ ಎಂದು ತಿಳಿಸಲು ಇಚ್ಛಿಸುತ್ತೇವೆ.

**8. ಠೇವಣಾತಿಗಳ ಮೇಲೆ ಪಾವತಿಸಬೇಕಾಗಿರುವ ಬಡ್ಡಿ :**

ದಿನಾಂಕ: 31.03.2025 ರವರೆಗೆ ಬ್ಯಾಂಕಿನ ಠೇವಣಿದಾರರುಗಳು ಹೊಂದಿರುವ ಠೇವಣಾತಿಗಳ ಮೇಲೆ ಪಾವತಿಸಲು ಬಾಕಿಯಿರುವ ಬಡ್ಡಿ ರೂ.1,40,31,836.00 ಗಳನ್ನು ಈ ಸಂಬಂಧದಲ್ಲಿ ಕಾದಿರಿಸಲಾಗಿದ್ದು ಆಸ್ತಿ–ಜವಾಬ್ದಾರಿ ತ:ಖ್ತೆಗಳಲ್ಲಿ ಮುಂದುವರೆದಿದೆ.

**9. ದುಡಿಯುವ ಬಂಡವಾಳ :**

ನಮ್ಮ ಬ್ಯಾಂಕಿನ ಒಟ್ಟು ದುಡಿಯುವ ಬಂಡವಾಳ ದಿನಾಂಕ: 01.04.2024 ರಂದು ರೂ. 2688,05,37,589.00 ಗಳಿದ್ದು ದಿನಾಂಕ: 31.03.2025 ರಲ್ಲಿ ರೂ. 2780,32,45,896.00 ಗಳಾಗಿದೆ. 2024–25 ರ ಸಾಲಿನಲ್ಲಿ ಬ್ಯಾಂಕಿನ ದುಡಿಯುವ ಬಂಡವಾಳವು ರೂ.92,27,08,307.00 ಗಳು ಹೆಚ್ಚಾಗಿದ್ದು ಶೇಕಡ 3.43 ಗಳ ಬೆಳವಣಿಗೆಯಾಗಿದೆ.

**10. ಸಾಲಗಳು :**

ದಿನಾಂಕ : 01–04–2024ರಂದು 12967 ಸದಸ್ಯರುಗಳ ಖಾತೆಗಳಿಗೆ ನೀಡಿದ ಬ್ಯಾಂಕಿನ ಎಲ್ಲಾ ಸಾಲಗಳು ರೂ.1318,42,37,614.71ಗಳಿದ್ದು, ದಿನಾಂಕ: 31–03–2025ಕ್ಕೆ 14133 ಸದಸ್ಯರುಗಳ ಖಾತೆಗಳಿಂದ ರೂ.1360,96,79,920.79ಗಳಾಗಿವೆ. 2024–25ರ ಸಾಲಿನಲ್ಲಿ ಬ್ಯಾಂಕಿನ ಸದಸ್ಯರ ಸಾಲಗಳು ರೂ.42,54,47,306.08 ಗಳಷ್ಟು ಹೆಚ್ಚಾಗಿದ್ದು ವರದಿ ಸಾಲಿನಲ್ಲಿ ಸಾಲಗಳು ಶೇಕಡ 3.23 ಗಳಷ್ಟು ಬೆಳವಣಿಗೆಯಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ಬ್ಯಾಂಕ್ ತನ್ನ Tier 1 ಬಂಡವಾಳ ನಿಧಿಗಳ ಶೇಕಡ 15 ರ ಮಿತಿಯೊಳಗೆ ಮೀರದಂತೆ ಸದಸ್ಯರೊಬ್ಬರಿಗೆ ಸಾಲ ಸೌಲಭ್ಯ ನೀಡಬಹುದಾಗಿದೆ. ದಿನಾಂಕ 31–03–2025ಕ್ಕೆ ಬ್ಯಾಂಕಿನ Tier 1 ಬಂಡವಾಳ ನಿಧಿಗಳು ರೂ.27098.33 ಲಕ್ಷಗಳಿದ್ದು, ಸದಸ್ಯರೊಬ್ಬರಿಗೆ ರೂ. 4064.74 ಲಕ್ಷಗಳಿಗೆ ಮೀರದಂತೆ ಸಾಲ ಸೌಲಭ್ಯ ನೀಡಬಹುದಾಗಿದ್ದು ಉತ್ತಮ ಸಾಲ ನಿರ್ವಹಣೆ ದೃಷ್ಟಿಯಿಂದ ಸದಸ್ಯರೊಬ್ಬರಿಗೆ ಗರಿಷ್ಠ ರೂ. 1400.00 ಲಕ್ಷಗಳವರೆಗೆ ಮಾತ್ರ ಸಾಲ ನೀಡಲು ಆಡಳಿತ ಮಂಡಳಿಯು ತೀರ್ಮಾನಿಸಿದೆ. ಹಾಗೆಯೇ ಭಾರತೀಯ ರಿಸರ್ವ್ ಬ್ಯಾಂಕಿನವರು ಸಹಕಾರ ಬ್ಯಾಂಕುಗಳ ಸಾಲಗಳ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಬ್ಯಾಂಕಿನ ಒಟ್ಟು ಸಾಲದ ಶೇಕಡ 50ರಷ್ಟು ಸಾಲಗಳು ಮೂರು ಕೋಟಿ ಮಿತಿಗೊಳಪಟ್ಟು ರೂ. 25 ಲಕ್ಷ ಅಥವಾ ಆಯಾ ಬ್ಯಾಂಕಿನ Tier 1 ಬಂಡವಾಳ ನಿಧಿಗಳ ಶೇಕಡ 0.4 ರಷ್ಟು ಇವುಗಳಲ್ಲಿ ಯಾವುದೋ ಹೆಚ್ಚು ಮಿತಿಯಲ್ಲಿ ಇರಬೇಕೆಂದು ನಿರ್ದೇಶಿಸಿದ್ದು,

ಸದರಿ ನಿರ್ದೇಶನವನ್ನು ಪಾಲಿಸಲಾಗಿದೆ. ಸದರಿ ನೀತಿಯನುಗುಣವಾಗಿ ದಿನಾಂಕ 31.03.2025ರಂದಿಗೆ ಬ್ಯಾಂಕಿನ ಒಟ್ಟು ಸಾಲದ ಶೇಕಡ 50 ರಷ್ಟು ಸಾಲಗಳು ಗರಿಷ್ಠ ಮಿತಿ ರೂ.108.39 ಲಕ್ಷದೊಳಗೆ ಇರಬೇಕಿದ್ದು, ಅಂತಹ ಸಾಲಗಳು 2024–25 ಸಾಲಾಂತ್ಯಕ್ಕೆ ರೂ.108873.66 ಲಕ್ಷಗಳಿರುತ್ತವೆ (ಒಟ್ಟು ಸಾಲದ ಶೇಕಡ 78.81 ರಷ್ಟು) ಎಂದು ತಿಳಿಸಲು ಇಚ್ಛಿಸುತ್ತೇವೆ.

ಬ್ಯಾಂಕಿನ ಸಾಲಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಶೀಘ್ರ ಸಾಲ ಅರ್ಜಿ ವಿಲೇವಾರಿ, ರೂ.25.00 ಲಕ್ಷಗಳವರೆವಿಗೆ ಸಾಲ ಮಂಜೂರು ಮಾಡಲು ಪ್ರಧಾನ ವ್ಯವಸ್ಥಾಪಕರಿಗೆ ಅಧಿಕಾರ, ಸಾಲ ಬಡ್ಡಿ ದರಗಳ ಕಡಿತ, ಚಿನ್ನಾಭರಣ ಆಧಾರ ಪ್ರತಿ ಗ್ರಾಂಗೆ ಸಾಲ ಹೆಚ್ಚಳ, ಸಾಲ ಸೇವಾ ಶುಲ್ಕ ಇಳಿತ ಮತ್ತು ಸಾಲ ಮಾರ್ಕೆಟಿಂಗ್ ಇತ್ಯಾದಿ ಕ್ರಮ ಅಳವಡಿಸಿದ್ದು, ಸದಸ್ಯರುಗಳು ತಮ್ಮ ಸಾಲ ಅವಶ್ಯಕತೆಯನ್ನು ಬ್ಯಾಂಕಿನಿಂದ ಪಡೆದುಕೊಳ್ಳುವಂತೆ ಮತ್ತು ತಮ್ಮ ಸ್ನೇಹಿತ / ಬಂಧು ಬಳಗದವರನ್ನು ಸಾಲ ಪಡೆಯುವ ನಿಟ್ಟಿನಲ್ಲಿ ಬ್ಯಾಂಕಿಗೆ ಪರಿಚಯಿಸಬೇಕೆಂದು ಕೋರುತ್ತೇವೆ.

ಬೆಂಗಳೂರು ಮಹಾನಗರದಲ್ಲಿ 'ಬಿ' ಖಾತಾ ಸ್ಥಿರಾಸ್ತಿ ಹೊಂದಿರುವ ಸದಸ್ಯರುಗಳಿಗೆ ಸಾಲ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಅಂತಹ ಸ್ಥಿರಾಸ್ತಿ ಆಧಾರ ರೂ. 30.00 ಲಕ್ಷಗಳವರೆವಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ.

ಸದಸ್ಯರು ಸಾಲದ ಕಂತುಗಳನ್ನು Equated Monthly Instalments (EMI) ರೀತ್ಯಾ ಮರುಪಾವತಿ ಮಾಡಲು ಅವಕಾಶ ಮಾಡಿದೆ. ಈ ಸೌಲಭ್ಯದಿಂದಾಗಿ ಮರುಪಾವತಿಸಬೇಕಾದ ಸಾಲದ ಮಾಹೆಯಾನ ಕಂತು ಮೊಬಲಗು ಅಸಲು ಸಮ ಕಂತುಗಳಿಗೆ ಹೋಲಿಸಿದ್ದಲ್ಲಿ ಕಡಿಮೆಯಾಗುವುದರೊಂದಿಗೆ ಸಾಲದ ಅವಧಿ ಪೂರ್ಣ ಏಕ ಮೊತ್ತದ ಕಂತುಗಳಾಗಿರುತ್ತದೆ. ಸದಸ್ಯರು ಈ ಸೌಲಭ್ಯ ಉಪಯೋಗಿಸಿಕೊಳ್ಳಲು ಕೋರಿದೆ.

ಮಾನ್ಯ ಸದಸ್ಯರುಗಳು ಬ್ಯಾಂಕ್ ವಿವಿಧ ಉದ್ದೇಶಗಳಿಗೆ ಒದಗಿಸುವ ಸಾಲ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಆರ್ಥಿಕ ಅಭಿವೃದ್ಧಿಯನ್ನು ಪಡೆಯಬೇಕೆಂದು ಕೋರಿದೆ.

**11. ಸುಸ್ತಿ ಸಾಲಗಳು / ಅನುತ್ಪಾದಕ ಸಾಲಗಳು :**

ದಿನಾಂಕ: 31.03.2025ಕ್ಕೆ 14133 ಸದಸ್ಯರುಗಳ ಖಾತೆಗಳಿಂದ ಬ್ಯಾಂಕ್‌ಗೆ ಬರಬೇಕಾದ ಎಲ್ಲಾ ಬಗೆಯ ಸಾಲಗಳ ಮೊತ್ತ ರೂ.1360,96,79,920.79 ಗಳಿದ್ದು ಇವುಗಳ ಪೈಕಿ 707 ಸದಸ್ಯರುಗಳ ಸಾಲ ಖಾತೆಗಳಿಂದ ರೂ.22,37,59,013.00 ಅಸಲು ಮೊತ್ತವನ್ನು ಸಕಾಲದಲ್ಲಿ ಪಾವತಿಸದ ಕಾರಣ ಸುಸ್ತಿಯಾಗಿದೆ. ಈ ಸುಸ್ತಿ ಸಾಲಗಳು ಒಟ್ಟು ಸಾಲದ ಶೇಕಡ 1.62 ರಷ್ಟಿದ್ದು, ಕಳೆದ ಸಾಲಾಂತ್ಯಕ್ಕೆ ಹೋಲಿಸಿದಲ್ಲಿ ಸುಸ್ತಿ ಸಾಲಗಳು ಶೇಕಡ 0.10 ರಷ್ಟು ಕಡಿಮೆಯಾಗಿರುತ್ತವೆ.

ಭಾರತೀಯ ರಿಸರ್ವ್ ಬ್ಯಾಂಕಿನವರ ನಿರ್ದೇಶನಗಳನ್ವಯ ಯಾವುದೇ ಸಾಲದ ಕಂತು ಅಥವಾ ಸಾಲದ ಬಡ್ಡಿ ಮೊಬಲಗು ಮರುಪಾವತಿ ದಿನಾಂಕದಿಂದ 90 ದಿವಸಗಳಿಗೂ ಮೀರಿ ಹೆಚ್ಚಿನ ಅವಧಿಗೆ ಬಾಕಿ ಉಳಿದಲ್ಲಿ ಅಂತಹ ಸಾಲಗಳನ್ನು ಅನುತ್ಪಾದಕ ಸಾಲಗಳೆಂದು ವಿಂಗಡಿಸಬೇಕಾಗಿದ್ದು ವರ್ಷಾಂತ್ಯದಲ್ಲಿ ಅಂತಹ ಸಾಲಗಳ ಮೊತ್ತ ರೂ.10418.93 ಲಕ್ಷಗಳಿರುತ್ತವೆ. ಇದು ಒಟ್ಟು ಸಾಲಕ್ಕೆ ಶೇಕಡ 7.54 ಆಗಿರುತ್ತದೆ. ಈ ಸಂಬಂಧದಲ್ಲಿ ಬ್ಯಾಂಕು ದಿನಾಂಕ : 31–03–2025 ಕ್ಕೆ ರೂ.24658.96 ಲಕ್ಷಗಳ ಅವಕಾಶ ಹೊಂದಿದ್ದು, ಬ್ಯಾಂಕಿನ ನಿವ್ವಳ ಅನುತ್ಪಾದಕ ಸಾಲಗಳು ಒಟ್ಟು ಸಾಲಕ್ಕೆ ಶೇಕಡ ಶೂನ್ಯವಿರುತ್ತವೆ.

ಭಾರತೀಯ ರಿಸರ್ವ್ ಬ್ಯಾಂಕಿನವರು ದಿನಾಂಕ 31.03.2024 ರ ಅಂತ್ಯಕ್ಕೆ ಬ್ಯಾಂಕಿನ ಲೆಕ್ಕ ಪತ್ರಗಳ ತಪಾಸಣೆ ನಡೆಸಿದ್ದು, ಬ್ಯಾಂಕು ಗುರುತಿಸಿರುವ ಉತ್ಪಾದಕ ಸಾಲಗಳಲ್ಲಿ ವ್ಯತ್ಯಯ ಗುರುತಿಸಿ ದಿನಾಂಕ 31.03.2024 ಕ್ಕೆ ಗುರುತಿಸಿದ್ದ ಒಟ್ಟು ಅನುತ್ಪಾದಕ ಸಾಲ ರೂ.143.67 ಕೋಟಿಗಳಿಂದ ರೂ.150.36 ಕೋಟಿಗಳಿಗೆ ಹೆಚ್ಚಿಸಲಾಗಿ, ದಿನಾಂಕ 31.03.2024 ಕ್ಕೆ ಅನುತ್ಪಾದಕ ಸಾಲಗಳು ಒಟ್ಟು ಸಾಲಕ್ಕೆ ಶೇಕಡ 10.77 ಗಳಿಗೆ ಮತ್ತು ನಿವ್ವಳ ಅನುತ್ಪಾದಕ ಸಾಲಗಳು ಒಟ್ಟು ಸಾಲಕ್ಕೆ ಶೇಕಡ ಶೂನ್ಯವಾದ ಹಿನ್ನಲೆಯಲ್ಲಿ ವರದಿ ಸಾಲಿನಲ್ಲಿ ಒಟ್ಟು ಅನುತ್ಪಾದಕ ಸಾಲಗಳು ಶೇಕಡ 3.23 ರಷ್ಟು ಕಡಿಮೆಯಾಗಿ ಮತ್ತು ನಿವ್ವಳ ಅನುತ್ಪಾದಕ ಸಾಲಗಳು ಶೂನ್ಯದಲ್ಲಿ ಮುಂದುವರೆದಿವೆ ಎಂದು ತಿಳಿಸಲು ಇಚ್ಛಿಸುತ್ತೇವೆ.

ಮಾನ್ಯ ಸದಸ್ಯರುಗಳು ತಾವು ಪಡೆದ ಸಾಲದ ಕಂತುಗಳನ್ನು ಸಕಾಲದಲ್ಲಿ ಪಾವತಿಸಿ ಬ್ಯಾಂಕು ನೀಡುವ ಬಡ್ಡಿ ರಿಯಾಯಿತಿ ಸೌಲಭ್ಯವನ್ನು ಪಡೆಯಲು, ಅನುತ್ಪಾದಕ ಸಾಲ ಮತ್ತು ಸುಸ್ತಿ ಸಾಲಗಳನ್ನು ಕಡಿಮೆಗೊಳಿಸಲು ಸಹಕಾರಿಯಾಗಬೇಕೆಂದು ಕೋರುತ್ತೇವೆ. ಸದಸ್ಯರುಗಳಿಗೆ ಬಡ್ಡಿ ರಿಯಾಯಿತಿ ಸೌಲಭ್ಯವನ್ನು ಆರ್ಥಿಕ ವರ್ಷ ಪೂರ್ಣಗೊಂಡ ನಂತರವೇ ಪಾವತಿಸಲು ಆಡಳಿತ ಮಂಡಳಿಯು ತೀರ್ಮಾನ ಕೈಗೊಂಡಿದ್ದು, 2024–25ರ ಸಾಲಿನಲ್ಲಿ ಸುಸ್ತಿಯಿಲ್ಲದೆ ಸ್ಥಿರಾಸ್ತಿ ಆಧಾರದ ಸಾಲದ ಕಂತುಗಳನ್ನು ಪಾವತಿಸಿರುವ ಸದಸ್ಯರುಗಳು ಬಡ್ಡಿ ರಿಯಾಯಿತಿ ಸೌಲಭ್ಯ ಪಡೆಯಲು ಕೋರಿದೆ.

ಭಾರತೀಯ ರಿಸರ್ವ್ ಬ್ಯಾಂಕಿನವರು ಸುಸ್ತಿ ಸಾಲ ನಿರ್ವಹಣೆಯನ್ನು ಉತ್ತಮಪಡಿಸುವ ಸಲುವಾಗಿ ರಾಷ್ಟ್ರದ ಪಟ್ಟಣ ಸಹಕಾರ ಬ್ಯಾಂಕುಗಳಿಗೂ ಅನ್ವಯಿಸುವಂತೆ Stressed Assets ಗಳ ಬಗ್ಗೆ Compromise Settlements and Technical Write Offs ನೀತಿಯನ್ನು ಅಳವಡಿಸಿಕೊಳ್ಳಲು ಬ್ಯಾಂಕಿನ ಆಡಳಿತ ಮಂಡಳಿಗೆ ಅವಕಾಶ ಮಾಡಿದ್ದು ಅಗತ್ಯ ಸಂದರ್ಭಗಳಲ್ಲಿ ಅಂದರೆ ಅಡಮಾನ ಮಾಡಿದ ಸ್ಥಿರಾಸ್ತಿಯ ಮಾರಾಟದಿಂದ ಬಾಕಿ ಅಸಲು / ಬಡ್ಡಿಗೆ ಹೊಂದಾಣಿಕೆ ಮಾಡುವಾಗ್ಗೆ ಕ್ರಯದ ಮೊಬಲಗು ಕಡಿಮೆ ಬಂದಲ್ಲಿ, ವಂಚನೆ ಪ್ರಕರಣಗಳಲ್ಲಿ ಹಣ ವಸೂಲಿ ಸಾಧ್ಯವೇ ಇರದಿದ್ದ ಪಕ್ಷದಲ್ಲಿ, ಅಡಮಾನ ಮಾಡಿದ ಸ್ಥಿರಾಸ್ತಿಯ ಪ್ರಸ್ತುತ ಮೌಲ್ಯ ಸಾಲ ಬಾಕಿ ಮೊಬಲಗಿಗಿಂತ ಕಡಿಮೆಯಿದ್ದಲ್ಲಿ, ಭದ್ರತೆಯಿರದ ಸಾಲ ಪ್ರಕರಣಗಳಲ್ಲಿ ಮಾತ್ರವೇ ಅಳವಡಿಸಿಕೊಳ್ಳಲು ತೀರ್ಮಾನಿಸಿ ಇವುಗಳ ಬಗ್ಗೆ ಪರಿಶೀಲಿಸಿ ಶಿಫಾರಸ್ಸು ಮಾಡಲು Supervisory Action Committee ರಚಿಸಲಾಗಿದೆ ಎಂದು ತಿಳಿಸಲು ಇಚ್ಛಿಸುತ್ತೇವೆ.

ಸದರಿ ನಿರ್ದೇಶನಗಳನ್ನು ಅನುಸರಿಸಿ ವರದಿ ಸಾಲಿನಲ್ಲಿ ಬಹುವರ್ಷಗಳಿಂದ ಮುಂದುವರೆದಿದ್ದ ವೈಯಕ್ತಿಕ ಜಾಮೀನು ಸಾಲಗಳು 68 ಪ್ರಕರಣಗಳಲ್ಲಿ ಒಟ್ಟು ರೂ.19,40,245.00 ಗಳ ಅಸಲು ಮೊಬಲಗು, ವ್ಯಾಪಾರ ಸಾಲ 1 ಪ್ರಕರಣದಲ್ಲಿ ರೂ.47,906.00 ಗಳ ಅಸಲು ಮೊಬಲಗು ಮತ್ತು ಬ್ಯಾಂಕಿಗೆ ಆಧಾರವಾಗಿದ್ದ ಸ್ಥಿರಾಸ್ತಿಯನ್ನು ಕೆರೆ ಅಂಗಳಕ್ಕೆ ಸೇರಿದ ಸ್ವತ್ತೆಂದು ಬಿಡಿಎರವರು ವಶಕ್ಕೆ ಪಡೆದ ಸ್ವತ್ತಿನ ಆಧಾರ ಸಾಲ 1 ಪ್ರಕರಣದಲ್ಲಿ ರೂ.66,47,669.00ಗಳು ಅಸಲು ಮೊಬಲಗು ಸಾಲಗಳನ್ನು ಬಾಕಿ ನಿಂತ ಬಡ್ಡಿಯೊಂದಿಗೆ, ಸಾಲಗಾರರು / ಜಾಮೀನುದಾರರು ಪತ್ತೆಯಾಗದಿರುವ / ಮರಣ ಹೊಂದಿರುವ / ಅವರು ಕಾರ್ಯವೆಸಗುತ್ತಿದ್ದ ಸಂಸ್ಥೆಯು ಮುಚ್ಚಿಹೋಗಿರುವ / ಯಾವುದೇ ಭದ್ರತೆ ಇಲ್ಲದಿರುವ ಇತ್ಯಾದಿ ಕಾರಣಗಳಿಗಾಗಿ Technical Write Off ಮಾಡಲು ತೀರ್ಮಾನಿಸಿದೆ. ಬ್ಯಾಂಕು Technical Write Off ಮಾಡಿರುವ ಸಂದರ್ಭಗಳಲ್ಲಿ ಸಾಲಗಾರರ ವಿರುದ್ಧ ದಾವಾ ಕ್ರಮ / ಕ್ರಿಮಿನಲ್ ವ್ಯಾಜ್ಯ ಕ್ರಮ ಇತ್ಯಾದಿ ಮುಂದುವರೆಸಿ ಸಾಲ ವಸೂಲಿ ಪ್ರಯತ್ನ ಕ್ರಮವಿರಿಸಿದೆ. Technical Write Off ಆದ ಸಂದರ್ಭಗಳಲ್ಲಿ ಸಾಲಗಾರರು ಸಾಲ ಮರುಪಾವತಿಸಬೇಕಾದ ಜವಾಬ್ದಾರಿಯಿಂದ ಬಿಡುಗಡೆಯಾಗಿರುವುದಿಲ್ಲ ಎಂಬ ಅಂಶವನ್ನು ಸದಸ್ಯರುಗಳ ಗಮನಕ್ಕೆ ತರಲು ಇಚ್ಛಿಸುತ್ತೇವೆ.

ಬ್ಯಾಂಕು Technical Write Off / Write Off ಆದ ಸಾಲಗಳಿಗೆ ಸಂಬಂಧಿಸಿದಂತೆ ವಸೂಲಾತಿ ಕ್ರಮ ಮುಂದುವರೆಸಿ, ಹಣ ಬಂದಾಗ ಲಾಭವಾಗಿ ಪರಿಗಣಿಸಲಾಗುವುದೆಂದು ತಿಳಿಸಲು ಇಚ್ಛಿಸುತ್ತೇವೆ.

**12. ಅನುತ್ಪಾದಕ ಸಾಲಗಳ ವಸೂಲಾತಿಗೆ ಸಂಬಂಧಿಸಿದಂತೆ SARFAESIA-2002 ಕಾಯ್ದೆಯನ್ವಯ ಅಧಿಕೃತ ಅಧಿಕಾರಿ ನೇಮಕ:**

ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ಉಂಟಾಗುವ ಅನುತ್ಪಾದಕ ಸಾಲಗಳನ್ನು ತ್ವರಿತವಾಗಿ ವಸೂಲಿ ಮಾಡುವ ಉದ್ದೇಶದಿಂದ ಕೇಂದ್ರ ಕಾಯಿದೆ ಸೆಕ್ಯೂರಿಟೈಜೇಷನ್ ಅಂಡ್ ರೀಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆ್ಯಕ್ಟ್ 2002 (SARFAESIA-2002) ಜಾರಿಯಲ್ಲಿದ್ದು, ಸದರಿ ಕಾಯಿದೆಯು ಪಟ್ಟಣ ಸಹಕಾರಿ ಬ್ಯಾಂಕುಗಳಿಗೂ ದಿನಾಂಕ: 28–01–2003 ರಿಂದ ಅನ್ವಯಗೊಂಡಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ವಯ ಬ್ಯಾಂಕಿನ ಯಾವುದೇ ಸಾಲಗಳು ಅನುತ್ಪಾದಕ ಸಾಲಗಳೆಂದು ವಿಂಗಡಿಸಿದ್ದಲ್ಲಿ ಅಂತಹ ಸಾಲಗಳಿಗೆ ಸಂಬಂಧಿಸಿದಂತೆ ಪಡೆದಿರುವ ಭದ್ರತೆಗಳನ್ನು ಸೂಕ್ತ ನೋಟೀಸುಗಳನ್ನು ನೀಡುವುದರ ಮೂಲಕ ಮತ್ತು ವರ್ತಮಾನ ಪತ್ರಿಕೆಯಲ್ಲಿ ಜಾಹೀರಾತು ನೀಡುವುದರ ಮೂಲಕ ವಶಕ್ಕೆ ತೆಗೆದುಕೊಂಡು ವಿಲೇವಾರಿ ಮಾಡಿ ಸಾಲಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸದರಿ ಕಾಯ್ದೆಯಲ್ಲಿ ಅವಕಾಶಗಳಿವೆ.

ಈ ಕಾಯ್ದೆಯಡಿಯಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಜಾರಿಗೊಳಿಸಲು ಬ್ಯಾಂಕಿನಲ್ಲಿ ಉಪಪ್ರಧಾನ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಸಿ.ಎನ್. ಅಪ್ಪಾಜಯ್ಯರವರನ್ನು ಅಧಿಕೃತ ಅಧಿಕಾರಿ (Authorised Officer) ಯನ್ನಾಗಿ ಹಾಗೂ ಎಲ್ಲಾ ಶಾಖಾ ವ್ಯವಸ್ಥಾಪಕರುಗಳನ್ನು ಸಹಾಯಕ ಅಧಿಕೃತ ಅಧಿಕಾರಿ (Assistant Authorised Officer)ಗಳನ್ನಾಗಿ ನೇಮಕ ಮಾಡಿದೆ.

SARFAESIA-2002 ಕಾಯ್ದೆಯಡಿಯಲ್ಲಿ ಸಾಲಕ್ಕೆ ಭದ್ರತೆಯಾಗಿರುವ ಸ್ವತ್ತುಗಳನ್ನು ವಶಕ್ಕೆ ತೆಗೆದುಕೊಳ್ಳುವ ನೋಟೀಸ್ ಮತ್ತು ಹರಾಜು ಮಾಡಬೇಕಾದ್ದಲ್ಲಿ ಹರಾಜು ನೋಟೀಸ್‌ಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗಿದ್ದು ಈ ಸಂಬಂಧದಲ್ಲಿ ತಗಲುವ ವೆಚ್ಚಗಳನ್ನು ಮತ್ತು ಆಧಾರ ಸ್ವತ್ತುಗಳನ್ನು ನೈಜವಾಗಿ ವಶಕ್ಕೆ ತೆಗೆದುಕೊಳ್ಳುವ ನಿಟ್ಟಿನಲ್ಲಿ ವಕೀಲರ ರುಸುಂ, ಕೋರ್ಟ್ ವೆಚ್ಚ ಇತ್ಯಾದಿಗಳನ್ನು ಸಾಲಗಾರರೇ ಭರಿಸ ಬೇಕಾಗಿರುವುದರಿಂದ ಇಂತಹ ಅನಗತ್ಯ ವೆಚ್ಚಗಳಿಂದ ತಪ್ಪಿಸಿಕೊಳ್ಳಲು ಸಾಲಗಾರರು ತಮ್ಮ ಸಾಲದ ಕಂತುಗಳನ್ನು ಸಕಾಲದಲ್ಲಿ ಪಾವತಿಸಬೇಕೆಂದು ಕೋರುತ್ತೇವೆ.

ಹಾಗೆಯೇ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯಿದೆಯಡಿಯಲ್ಲಿ ಅಮುಲ್ಜಾರಿ ಕ್ರಮಗಳನ್ನು ಕೈಗೊಳ್ಳಲು ಸಹಾಯಕ ಲೆಕ್ಕ ಲೇಖಕರುಗಳಾದ ಶ್ರೀ ಹೆಚ್.ವಿ.ದಿವಾಕರ ಮತ್ತು ಶ್ರೀ ಎ.ಶಿವಣ್ಣ ರವರುಗಳನ್ನು ಸೇಲ್ ಆಫೀಸರ್‌ಗಳಾಗಿ ನೇಮಕ ಮಾಡಿದ್ದು ಸಂಬಂಧಿಸಿದಂತೆ ಸಹಾಯಕ ನಿಬಂಧಕರುಗಳ ಅನುಮತಿ ಪಡೆದಿದೆ.

**13. ಕ್ರೆಡಿಟ್ ಇನ್ಫರ್ಮೇಷನ್ ಸಂಸ್ಥೆಗಳಲ್ಲಿ ಸದಸ್ಯತ್ವ**

ಭಾರತೀಯ ರಿಸರ್ವ್ ಬ್ಯಾಂಕ್‌ನವರ ನಿರ್ದೇಶನಗಳ ರೀತ್ಯಾ ಬ್ಯಾಂಕಿಂಗ್ ಸಂಸ್ಥೆಗಳು ಕ್ರೆಡಿಟ್ ಇನ್‌ಫರ್‌ಮೇಷನ್ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆದು, ಸದಸ್ಯರು ಪಡೆದ ಸಾಲಗಳ ವಿವರಗಳನ್ನು ಅವರಿಗೆ ಒದಗಿಸುವುದು ಹಾಗೂ ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ಕ್ರೆಡಿಟ್ ಮಾಹಿತಿಗಳನ್ನು ಪಡೆದು ವಿಮರ್ಶೆಗೊಳಪಡಿಸಲು ಕೆಳಕಂಡ ಕ್ರೆಡಿಟ್ ಇನ್‌ಫರ್‌ಮೇಷನ್ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆದಿದೆ.

1) ಮೆ॥ ಕ್ರೆಡಿಟ್ ಇನ್‌ಫರ್‌ಮೇಷನ್ ಬ್ಯೂರೋ (ಇಂಡಿಯಾ) ಲಿ.,

2) ಮೆ॥ ಇಕ್ವಿಫ್ಯಾಕ್ಸ್ ಕ್ರೆಡಿಟ್ ಇನ್‌ಫರ್‌ಮೇಷನ್ ಸರ್ವಿಸಸ್ ಪ್ರೈ ಲಿ., ಮುಂಬಯಿ

3) ಮೆ॥ ಎಕ್ಸ್‌ಪೀರಿಯನ್ ಕ್ರೆಡಿಟ್ ಇನ್‌ಫರ್‌ಮೇಷನ್ ಕಂಪನಿ ಆಫ್ ಇಂಡಿಯಾ ಪ್ರೈ ಲಿ., ಮುಂಬಯಿ

4) ಮೆ॥ ಸಿಆರ್‌ಐಎಫ್ ಹೈ ಮಾರ್ಕ್ ಕ್ರೆಡಿಟ್ ಇನ್‌ಫರ್‌ಮೇಷನ್ ಸರ್ವಿಸಸ್ ಪ್ರೈ ಲಿ., ಮುಂಬಯಿ

ಸದಸ್ಯರು ತಮ್ಮ ಸಾಲ ಸೌಲಭ್ಯಗಳನ್ನು ಸುಸ್ತಿಯಿಲ್ಲದಂತೆ ಪಾವತಿಸಿದ್ದಲ್ಲಿ ಮಾತ್ರವೇ ಅವರ ಕ್ರೆಡಿಟ್ ರೇಟಿಂಗ್ ಹೆಚ್ಚಿ ಮುಂದಿನ ದಿನಗಳಲ್ಲಿ ಬ್ಯಾಂಕಿಂಗ್ ಸಂಸ್ಥೆಗಳಿಂದ ಅನುಕೂಲ ಹೊಂದಲು ಸಹಾಯಕವಾಗುವುದರಿಂದ ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಕಂತುಗಳನ್ನು ಸಕಾಲದಲ್ಲಿ ಪಾವತಿಸಲು ಕೋರಿದೆ.

**14. ಗುಂತಾಯಗಳು (Investments)**

ದಿನಾಂಕ: 31–03–2025 ಕ್ಕೆ ಕರೆ ಠೇವಣಿಯು ಒಳಗೊಂಡಂತೆ ಬ್ಯಾಂಕ್ ರೂ.1235,08,56,790.83 ಗಳ ವಿವಿಧ ಗುಂತಾಯಗಳನ್ನು ಹೊಂದಿದೆ.

ಬ್ಯಾಂಕ್ ವರದಿ ಸಾಲಿನಲ್ಲಿ ವಿನಿಯೋಗಿಸಿ ವರ್ಷಾಂತ್ಯದಲ್ಲಿ ಮುಂದುವರೆದ ಹೂಡಿಕೆಗಳ ವಿವರಗಳು ಮತ್ತು ವರದಿ ಸಾಲಾಂತ್ಯ ಮುಂದುವರೆದ ಎಲ್ಲಾ ಮ್ಯೂಚುಯಲ್ ಫಂಡ್‌ನ ಹೂಡಿಕೆ ಮತ್ತು ಅವುಗಳ ನಿವ್ವಳ ಆಸ್ತಿ ಮೌಲ್ಯದ ವಿವರಗಳು ಕೆಳಕಂಡಂತಿವೆ.

| ಕ್ರ ಸಂ. | ವಿವರ | ಬಡ್ಡಿ ದರ | ಹಣ ಹೂಡಿದ ದಿನಾಂಕ | ಮರುಪಾವತಿ ದಿನಾಂಕ | ಮೊಬಲಗು (ರೂ. ಗಳಲ್ಲಿ) |
|---|---|---|---|---|---|
| 1 | ಎಸ್.ಬಿ.ಐ, ಡಿ.ಎಫ್.ಹೆಚ್.ಐ ಬ್ಯಾಂಕಿನಲ್ಲಿ ಕರೆ ಠೇವಣಿ | 7.05% | 28.03.2025 | 02.04.2025 | 10,24,00,000–00 |
| 2. | ರಾಜಸ್ಥಾನ ರಾಜ್ಯ ಸರ್ಕಾರ ಸಾಲ ಪತ್ರಗಳು | 7.56% | 12.09.2024 | 19.04.2033 | 4,08,76,000–00 |
| | | 7.10% | 27.09.2024 | 25.09.2034 | 5,00,85,000–00 |
| | | 7.52% | 20.12.2024 | 02.05.2033 | 5,16,40,000–00 |
| 3 | ತಮಿಳುನಾಡು ರಾಜ್ಯ ಸರ್ಕಾರ ಸಾಲ ಪತ್ರಗಳು | 8.15% | 12.09.2024 | 09.05.2028 | 1,53,54,375–00 |
| | | 7.10% | 10.10.2024 | 19.09.2034 | 5,00,76,500–00 |
| | | 7.13% | 10.12.2024 | 30.10.2034 | 5,01,03,500–00 |
| | | 7.32% | 11.12.2024 | 24.05.2033 | 5,06,95,625–00 |
| | | 7,19% | 28.01.2025 | 02.03.2042 | 5,03,38,824–00 |
| | | 7.66% | 20.02.2025 | 27.12.2033 | 10,36,00,000–00 |
| | | 7.44% | 13.11.2024 | 20.03.2034 | 2,11,36,770–00 |
| 4 | ಪಂಜಾಬ್ ರಾಜ್ಯ ಸರ್ಕಾರ ಸಾಲ ಪತ್ರಗಳು | 7.49% | 04.12.2024 | 03.04.2032 | 10,18,94,286–00 |
| | | 7.59% | 04.10.2024 | 12.04.2033 | 5,14,60,000–00 |
| | | 7.41% | 09.12,2024 | 16.03.2042 | 5,14,45,000–00 |
| | | 7.37% | 10,12.2024 | 31.05.2038 | 5,10,90,000–00 |
| | | 7.69% | 10.01.2025 | 31.01.2036 | 5,20,92,500–00 |
| 5 | ಆಂಧ್ರ ಪ್ರದೇಶ ರಾಜ್ಯ ಸರ್ಕಾರ ಸಾಲ ಪತ್ರಗಳು | 7.70% | 04.09.2024 | 23.03.2030 | 5,10,41,667–00 |
| | | 7.70% | 12.09.2024 | 01.03.2028 | 1,51,66,000–00 |
| | | 7.70% | 25.09.2024 | 08.03.2029 | 5,09,63,750–00 |
| | | 7.53% | 17.12.2024 | 02.05.2036 | 5,14,81,818–00 |
| | | 7.51% | 09.12.2024 | 13.09.2037 | 2,06,66,000–00 |
| | | 7.71% | 09.12.2024 | 30.08.2037 | 5,02,79,711–00 |
| | | 7.38% | 11.12.2024 | 10.05.2040 | 5,12,20,000–00 |
| | | 7.36% | 20.12.2024 | 07.06.2037 | 5,09,95,000–00 |
| | | 7.27% | 22.01.2025 | 28.08.2041 | 5,06,95,000.00 |
| 6 | ಮಹಾರಾಷ್ಟ್ರ ರಾಜ್ಯ ಸರ್ಕಾರ ಸಾಲ ಪತ್ರಗಳು | 7.18% | 31.07.2024 | 28.06.2029 | 4,99,75,000–00 |
| | | 7.33% | 27.09.2024 | 31.05.2031 | 5,05,65,714–00 |
| | | 7.11% | 31.01.2025 | 08.01.2038 | 5,00,36,983–00 |
| | | 7.05% | 24.09.2024 | 07.10.2032 | 5,01,60,000–00 |
| | | 7.32% | 26.09.2024 | 31.05.2032 | 4,05,60,000–00 |
| | | 7.39% | 07.11.2024 | 03.07.2030 | 5,07,50,000–00 |

| | | | | | |
|---|---|---|---|---|---|
| 7 | ಕರ್ನಾಟಕ ರಾಜ್ಯ ಸರ್ಕಾರ ಸಾಲ ಪತ್ರಗಳು | 7.17% | 24.09.2024 | 27.11.2029 | 5,02,94,000–00 |
| | | 7.13% | 31.01.2025 | 23.02.2038 | 5,00,83,077–00 |
| | | 7.08% | 21.02.2025 | 14.12.2026 | 4,01,36,000–00 |
| | | 7.42% | 10.01.2025 | 06.03.2035 | 5,10,45,000–00 |
| 8 | ಮಧ್ಯಪ್ರದೇಶ ರಾಜ್ಯ ಸರ್ಕಾರ ಸಾಲ ಪತ್ರಗಳು | 7.26% | 05.02.2025 | 28.08.2038 | 5,05,75,714–00 |
| | | 7.19% | 17.02.2024 | 27.11.2038 | 4,03,28,000–00 |
| 9 | ಉತ್ತರ ಪ್ರದೇಶ ರಾಜ್ಯ ಸರ್ಕಾರ ಸಾಲ ಪತ್ರಗಳು | 7.38% | 09.09.2024 | 13.03.2036 | 5,05,04,167–00 |
| | | 7.19% | 23.12.2024 | 27.11.2036 | 5,02,79,583–00 |
| | | 7.62% | 04.10.2024 | 18.01.2035 | 5,17,00,000–00 |
| 10 | ಗುಜರಾತ್ ರಾಜ್ಯ ಸರ್ಕಾರ ಸಾಲ ಪತ್ರಗಳು | 7.27% | 24.09.2024 | 17.05.2031 | 5,06,08,571–00 |
| | | 7.27% | 26.09.2024 | 17.05.2031 | 5,05,65,714–00 |
| 11 | ಬಿಹಾರ ರಾಜ್ಯ ಸರ್ಕಾರ ಸಾಲ ಪತ್ರಗಳು | 7.17% | 26.09.2024 | 02.03.2032 | 5,01,80,000–00 |
| | | 7.11% | 30.10.2024 | 23.10.2033 | 5,00,35,556–00 |
| | | 7.12% | 23.12.2024 | 18.12.2034 | 5,00,58,500–00 |
| | | 7.68% | 04.10.2024 | 27.02.2033 | 5,17,55,000–00 |
| | | 7.15% | 06.12.2024 | 30.10.2034 | 5,01,50,000–00 |
| 12 | ಪಶ್ಚಿಮ ಬಂಗಾಲ ರಾಜ್ಯ ಸರ್ಕಾರ ಸಾಲ ಪತ್ರಗಳು | 7.72% | 04.10.2024 | 20.12.2027 | 5,06,78,333–00 |
| | | 7.67% | 09.12.2024 | 21.12.2037 | 1,57,09,500–00 |
| 13 | ಕೇರಳ ರಾಜ್ಯ ಸರ್ಕಾರ ಸಾಲ ಪತ್ರಗಳು | 7.10% | 10.10.2024 | 03.10.2034 | 5,00,49,500–00 |
| | | 8.32% | 27.12.2024 | 25.04.2030 | 5,21,88,000–00 |
| | | 7.15% | 05.02.2025 | 30.10.2039 | 7,01,96,000–00 |
| 14 | ಹರಿಯಾಣ ರಾಜ್ಯ ಸರ್ಕಾರ ಸಾಲ ಪತ್ರಗಳು | 7.14% | 24.01.2025 | 22.01.2038 | 5,00,60,000–00 |
| 15 | ಛತ್ತಿಸ್‌ಘಡ್ ರಾಜ್ಯ ಸರ್ಕಾರ ಸಾಲ ಪತ್ರಗಳು | 7.29% | 25.09.2024 | 07.06.2030 | 5,05,04,167–00 |
| | | 7.47% | 24.12.2024 | 20.03.2033 | 5,10,00,000–00 |
| | | 7.28% | 06.03.2025 | 05.03.2034 | 5,02,65,000–00 |
| 16 | ಉತ್ತರಕಾಂಡ ರಾಜ್ಯ ಸರ್ಕಾರ ಸಾಲ ಪತ್ರಗಳು | 7.50% | 06.08.2024 | 18.04.2029 | 5,04,40,000–00 |
| | | 7.50% | 12.08.2024 | 18.04.2029 | 5,05,00,000–00 |
| 17 | ಅಸ್ಸಾಂ ರಾಜ್ಯ ಸರ್ಕಾರ ಸಾಲ ಪತ್ರಗಳು | 7.37% | 13.11.2024 | 29.05.2034 | 3,60,52,182–00 |

| | | | | | |
|---|---|---|---|---|---|
| 18 | ಹಿಮಾಚಲ ರಾಜ್ಯ ಸರ್ಕಾರ ಸಾಲ ಪತ್ರಗಳು | 7.79% | 18.12.2024 | 29.03.2038 | 5,28,60,000–00 |
| 19 | ಬೆಂಗಳೂರು, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ | 7.60% | 30.08.2024 | 30.08.2025 | 5,00,000–00 |
| 20 | ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಲಿ., | 8.00% | 13.03.2025 | 07.04.2025 | 25,00,00,000–00 |
| | | 8.00% | 14.03.2025 | 02.04.2025 | 6,00,00,000–00 |
| | | 8.00% | 20.03.2025 | 03.04.2025 | 21,00,00,000–00 |
| | | 8.00% | 24.03.2025 | 08.04.2025 | 18,00,00,000–00 |
| 21 | ಜನಾ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ.,ನಲ್ಲಿ ನಿಶ್ಚಿತ ಠೇವಣಿ | 8.80% | 10.05.2024 | 10.05.2025 | 3,00,00,000–00 |
| | | 8.50% | 19.07.2024 | 23.07.2025 | 6,00,00,000–00 |
| | | 8.45% | 03.09.2024 | 04.09.2025 | 2,97,00,000–00 |
| | | 8.60% | 05.12.2024 | 10.12.2025 | 3,00,00,000–00 |
| 22 | ಎ.ಯು.ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ | 8.50% | 25.09.2024 | 26.09.2025 | 5,04,00,000–00 |
| 23 | ಎಸ್.ವಿ.ಸಿ ಬ್ಯಾಂಕ್ ನಲ್ಲಿ ನಿಶ್ಚಿತ ಠೇವಣಿ | 8.20% | 27.06.2024 | 27.06.2025 | 10,00,00,000.00 |
| | | 8.05% | 10.03.2025 | 11.04.2025 | 10,00,00,000.00 |
| 24 | ಆಕ್ಸಿಸ್ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ | 7.25% | 05.04.2024 | 06.04.2025 | 2,00,00,000.00 |
| | | 7.25% | 24.04.2024 | 24.04.2025 | 2,00,00,000.00 |
| | | 7.55% | 09.09.2024 | 09.09.2025 | 3,00,00,000.00 |
| | | 7.25% | 18.01.2025 | 18.04.2026 | 50,00,000.00 |
| 25 | ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ | 8.50% | 23.09.2024 | 11.12.2025 | 2,97,00,000–00 |
| | | 8.60% | 29.11.2024 | 02.12.2025 | 6,00,00,000.00 |
| | | 8.60% | 03.12.2024 | 03.12.2025 | 5,00,00,000.00 |
| 26 | ಸಾರಸ್ವತ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ | 8.00% | 07.03.2025 | 07.04.2025 | 15,00,00,000.00 |
| 27 | ಬಂಧನ್ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ | 8.50% | 03.11.2024 | 03.11.2025 | 3,00,00,000.00 |
| | | 8.50% | 21.12.2024 | 21.12.2025 | 4,00,00,000.00 |
| | | 8.70% | 26.12.2024 | 26.12.2025 | 5,00,00,000.00 |
| | | 8.90% | 27.03.2025 | 27.03.2026 | 3,00,00,000.00 |
| | | 8.90% | 27.03.2025 | 27.03.2026 | 3,00,00,000.00 |
| | | 8.90% | 27.03.2025 | 27.03.2026 | 3,00,00,000.00 |

| | | | | | |
|---|---|---|---|---|---|
| 28 | ಡಿ.ಸಿ.ಬಿ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ | 8.65% | 10.03.2025 | 10.03.2026 | 10,00,00,000.00 |
| 29 | ಕಾಸ್ಮೋಸ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ | 8.20% | 13.03.2025 | 28.04.2025 | 12,00,00,000.00 |
| 30 | ಐಸಿಐಸಿಐ ಡೆಬ್ಟ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ | ಬದಲಾಗುವ ಬಡ್ಡಿ ದರ | ವಿವಿಧ ದಿನಾಂಕಗಳಲ್ಲಿ | ಹೂಡಿಕೆ ಮೊಬಲಗು 11,49,94,250.28 | ವರ್ಷಾಂತ್ಯಕ್ಕೆ ನಿವ್ವಳ ಆಸ್ತಿ ಮೌಲ್ಯ 13,37,72,906.71 |
| 31 | ಹೆಚ್.ಡಿ.ಎಫ್.ಸಿ ಡೆಬ್ಟ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ | ಬದಲಾಗುವ ಬಡ್ಡಿ ದರ | ವಿವಿಧ ದಿನಾಂಕಗಳಲ್ಲಿ | 5,49,97,250.13 | 6,28,20,000.77 |
| 32 | ನಿಪ್ಪಾನ್ ಇಂಡಿಯಾ (ರಿಲೈಯನ್ಸ್) ಡೆಬ್ಟ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ | ಬದಲಾಗುವ ಬಡ್ಡಿ ದರ | ವಿವಿಧ ದಿನಾಂಕಗಳಲ್ಲಿ | 5,99,97,000.14 | 7,04,95,388.19 |
| 33 | ಬಿರ್ಲಾ ಸನ್ ಲೈಫ್ ಡೆಬ್ಟ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ | ಬದಲಾಗುವ ಬಡ್ಡಿ ದರ | ವಿವಿಧ ದಿನಾಂಕಗಳಲ್ಲಿ | 5,99,97,000.14 | 7,07,47,143.01 |
| 34 | ಕೋಟಕ್ ಮಹೀಂದ್ರ ಡೆಬ್ಟ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ | ಬದಲಾಗುವ ಬಡ್ಡಿ ದರ | ವಿವಿಧ ದಿನಾಂಕಗಳಲ್ಲಿ | 11,99,94,000.29 | 13,09,05,929.86 |
| 35 | ಟಾಟಾ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ | ಬದಲಾಗುವ ಬಡ್ಡಿ ದರ | ವಿವಿಧ ದಿನಾಂಕಗಳಲ್ಲಿ | 4,99,97,500.12 | 5,61,24,512.16 |
| 36 | ಎಸ್‌ಬಿಐ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ | ಬದಲಾಗುವ ಬಡ್ಡಿ ದರ | ವಿವಿಧ ದಿನಾಂಕಗಳಲ್ಲಿ | 4,99,97,500.12 | 5,71,51,592.71 |
| 37 | ಆಕ್ಸಿಸ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ | ಬದಲಾಗುವ ಬಡ್ಡಿ ದರ | ವಿವಿಧ ದಿನಾಂಕಗಳಲ್ಲಿ | 4,99,97,500.12 | 6,13,22,329.08 |
| 38 | ಡಿಎಸ್‌ಪಿ ಬ್ಲಾಕ್‌ರಾಕ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ | ಬದಲಾಗುವ ಬಡ್ಡಿ ದರ | ವಿವಿಧ ದಿನಾಂಕಗಳಲ್ಲಿ | 8,99,95,500.22 | 9,61,95,077.82 |
| 39 | ಫ್ರಾಂಕ್ಲಿನ್ ಟೆಂಪಲ್‌ಟನ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ | ಬದಲಾಗುವ ಬಡ್ಡಿ ದರ | ವಿವಿಧ ದಿನಾಂಕಗಳಲ್ಲಿ | 1,99,99,000.05 | 2,08,07,759.56 |
| 40 | ಬಂಧನ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ | ಬದಲಾಗುವ ಬಡ್ಡಿ ದರ | ವಿವಿಧ ದಿನಾಂಕಗಳಲ್ಲಿ | 8,99,95,500.22 | 9,58,64,555.89 |

ಆದಾಯ ತೆರಿಗೆ ನಿಯಮಗಳ ರೀತ್ಯಾ ಮೂರು ವರ್ಷಗಳ ಅವಧಿಗೂ ಮುಂದುವರೆಯುವ ಡೆಬ್ಟ್ ಮ್ಯೂಚುಯಲ್ ಫಂಡ್‌ಗಳ ಆದಾಯಗಳು ಧೀರ್ಘಾವಧಿ ಬಂಡವಾಳ ಲಾಭದಡಿಯಲ್ಲಿ ಆದಾಯ ತೆರಿಗೆ ಸಂಬಂಧದಲ್ಲಿ ವಿನಾಯಿತಿ ಸಿಗುವ ಕಾರಣ ಅಂತಹ ಕೆಲವು ಗುಂತಾಯಗಳನ್ನು ವರ್ಷಾಂತ್ಯದಲ್ಲಿ ಮುಂದುವರೆಸಿದೆ.

ರಾಜ್ಯ ಸಾಲ ಪತ್ರಗಳು ಕೇಂದ್ರ ಸರ್ಕಾರಿ ಸಾಲ ಪತ್ರಗಳಿಗಿಂತ ಹೆಚ್ಚು ಬಡ್ಡಿಯನ್ನು ನೀಡುವುದರಿಂದ ಮತ್ತು ರಾಜ್ಯ ಸಾಲ ಪತ್ರಗಳು ಸಹ ಅರ್ಹ ದ್ರವ್ಯಾಸ್ತಿಗಳಾಗಿರುವುದರಿಂದ ವಿವಿಧ ರಾಜ್ಯ ಸರ್ಕಾರ ಸಾಲ ಪತ್ರಗಳಲ್ಲಿ ಹಣ ಗುಂತಾಯಿಸಲಾಗಿದೆ.

ಬ್ಯಾಂಕ್ ತನ್ನ ಹೆಚ್ಚುವರಿ ಸಂಪನ್ಮೂಲಗಳನ್ನು ಖಾಸಗಿ ವಾಣಿಜ್ಯ ಬ್ಯಾಂಕುಗಳ ಮತ್ತು ಷೆಡ್ಯೂಲ್ಡ್ ಸಹಕಾರ ಬ್ಯಾಂಕುಗಳ ನಿಶ್ಚಿತ ಠೇವಣಿಯಲ್ಲಿ ಹಣ ಗುಂತಾಯಿಸಿದೆ.

ಬ್ಯಾಂಕಿನ ಎಲ್ಲಾ ವಿನಿಯೋಗಗಳು ಭಾರತೀಯ ರಿಸರ್ವ್ ಬ್ಯಾಂಕ್‌ನವರ ನಿರ್ದೇಶನಗಳಿಗೆ ಅನುಗುಣವಾಗಿರುತ್ತವೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನಗಳನ್ನು ಅನುಸರಿಸಿ ದಿನಾಂಕ: 31–03–2025 ಕ್ಕೆ ಬ್ಯಾಂಕ್ ಹೊಂದಿರುವ ಗುಂತಾಯಗಳನ್ನು ಕೆಳಕಂಡಂತೆ ವಿಂಗಡಿಸಿದೆ.

| | |
|---|---|
| 1. Held to maturity | ರೂ. 519,90,03,493.00 |
| 2. Held for trading | ರೂ. – |
| 3. Available for sale | ರೂ. 514,04,48,314.83 |
| **ಒಟ್ಟು** | **ರೂ. 1033,94,51,807.83** |

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ವಯ ಬ್ಯಾಂಕು ಹೊಂದಿರುವ Held for Trading ಮತ್ತು Available for Saleಗಳಲ್ಲಿರುವ ಗುಂತಾಯಗಳ ಮಾರುಕಟ್ಟೆ ದರಗಳು ಮಾರುಕಟ್ಟೆಯಲ್ಲಿನ ಬಡ್ಡಿ ದರಗಳೊಂದಿಗೆ ಏರಿಳಿತವಾಗುವ ಸಂಭವವಿರುವುದರಿಂದ ಅಂತಹ ಏರಿಳಿತದಿಂದ ನಷ್ಟ ಉಂಟಾದಲ್ಲಿ ವ್ಯತ್ಯಾಸ ಭರಿಸುವ ಸಲುವಾಗಿ ಗುಂತಾಯ ಸವಕಳಿ ನಿಧಿ ಹೊಂದಿರಬೇಕಾಗಿದೆ. ಬ್ಯಾಂಕು ವರ್ಷಾಂತ್ಯದಲ್ಲಿ Available for Saleನಲ್ಲಿ ಹೊಂದಿರುವ ಒಟ್ಟು ಗುಂತಾಯಗಳು ರೂ.514,04,48,314.83 ಗಳ ಸರ್ಕಾರ ಸಾಲ ಪತ್ರಗಳು, ಮ್ಯೂಚುಯಲ್ ಫಂಡ್ಸ್, ತೆರಿಗೆ ರಹಿತ ಬಾಂಡ್ ಇತ್ಯಾದಿ ಒಟ್ಟಾರೆ ಪುಸ್ತಕ ಮೌಲ್ಯದ ವಿನಿಯೋಗಗಳನ್ನು ಹೊಂದಿದ್ದು ಅವುಗಳ ಮಾರುಕಟ್ಟೆ ಮೌಲ್ಯಗಳು ರೂ.525,89,49,823.00 ಗಳಿರುತ್ತವೆ. ವಿಕ್ರಯಕ್ಕಾಗಿ ಲಭ್ಯವಿರುವ ವರ್ಗದಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಸಾಲ ಪತ್ರಗಳಲ್ಲಿ ರೂ.432,81,68,313.00 ಗಳ ಪುಸ್ತಕ ಮೌಲ್ಯದ ಹೂಡಿಕೆಗಳನ್ನು ಹೊಂದಿದ್ದು ಅವುಗಳ ಮಾರುಕಟ್ಟೆ ಮೌಲ್ಯವು ರೂ.434,39,82,386.00 ಗಳಿರುವ ಕಾರಣ ಮತ್ತು ಇತರೆ ಹೂಡಿಕೆಗಳ ಪುಸ್ತಕ ಮೌಲ್ಯ ರೂ.81,22,80,001.83ಗಳಿದ್ದು, ಅವುಗಳ ಮಾರುಕಟ್ಟೆ ಮೌಲ್ಯ ರೂ.91,49,67,436–76 ಗಳಿರುವ ಕಾರಣ ಗುಂತಾಯ ಸವಕಳಿ ಅವಕಾಶಗಳು ಅಗತ್ಯ ಇರುವುದಿಲ್ಲ. ಆದ್ದರಿಂದ 2024–25 ಸಾಲಾರಂಭದಲ್ಲಿ ಗುಂತಾಯ ಸವಕಳಿ ನಿಧಿ ಬಾಬ್ತು ರೂ.8,45,60,091.00ಗಳಿದ್ದ ಮೊಬಲಗನ್ನು ವರದಿ ವರ್ಷದಲ್ಲಿ ಲಾಭವಾಗಿ ಪರಿಗಣಿಸಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ನವರ ನಿರ್ದೇಶನಗಳ ರೀತ್ಯಾ ಬ್ಯಾಂಕು ಮಾರಾಟಕ್ಕೆ ಲಭ್ಯವಿರುವ ಒಟ್ಟು ಗುಂತಾಯಗಳ ಕನಿಷ್ಠ ಶೇಕಡ 5 ರಷ್ಟು ಅಂದರೆ ರೂ.2570.23 ಲಕ್ಷ ಗುಂತಾಯಗಳ ಆಕಸ್ಮಿಕ ನಿಧಿ ಕಡ್ಡಾಯ ಹೊಂದಿರಬೇಕಾಗಿದ್ದು, ವರದಿ ಸಾಲಾಂತ್ಯ ರೂ.2839.21 ಲಕ್ಷಗಳ ಗುಂತಾಯ ಆಕಸ್ಮಿಕ ನಿಧಿ ಹೊಂದಿದೆ.

ಕಾವೇರಿ ಪಟ್ಟಣ ಸಹಕಾರ ಬ್ಯಾಂಕಿನಲ್ಲಿ ಗುಂತಾಯಿಸಿದ್ದ ಠೇವಣಿ ಬಾಬ್ತು ರೂ.59,18,493.00 ಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ ಹಿಂದಿನ ವರ್ಷದಲ್ಲಿ Technical Write off ಮಾಡಿದ್ದ ಮೊಬಲಗನ್ನು ಅವರುಗಳಿಂದ ಹಿಂಪಡೆಯಲು ಅಗತ್ಯ ಕ್ರಮ ಮುಂದುವರೆಸಲಾಗಿದೆ.

ಕರ್ನಾಟಕ ಸಹಕಾರ ಕಾಯಿದೆ ಸೆಕ್ಷನ್ 58 ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನವರ ನಿರ್ದೇಶನಗಳನ್ನು ಅನುಸರಿಸಿ ಆಗಿಂದಾಗ್ಗೆ ಹೂಡಿಕೆ ಮಾಡಲು/ನವೀಕರಿಸಲು/ಹಿಂತೆಗೆಯಲು/ಮಾರಾಟ ಮಾಡಲು ಸರ್ವಸದಸ್ಯರ ಅನುಮತಿ ಕೋರಿದೆ.

**15. ನ್ಯಾಷನಲ್ ಕೋ-ಆಪರೇಟಿವ್ ಫೈನಾನ್ಸ್ ಅಂಡ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನಲ್ಲಿ ಸದಸ್ಯತ್ವ :**

ದೇಶದಲ್ಲಿ ಸಹಕಾರ ಬ್ಯಾಂಕುಗಳ ಸಧೃಡವಾಗಿ ಕಾರ್ಯನಿರ್ವಹಿಸಲು ಸಹಕಾರಿಯಾಗುವಂತೆ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಒಂದು Umbrella Organization ಅಗತ್ಯತೆ ಇರುವುದನ್ನು ಮನಗಂಡು National Co-operative Finance and Development Corporation Ltd., New Delhi ಸಂಸ್ಥೆ ರಚಿತವಾಗಿದ್ದು, ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳನ್ನು ಅನುಸರಿಸಿ ಸದರಿ ಸಂಸ್ಥೆಯಲ್ಲಿ ಬ್ಯಾಂಕು ರೂ. 10 ಮುಖ ಬೆಲೆಯ 1000000 ಷೇರುಗಳನ್ನು ಖರೀದಿಸಿದೆ.

**16. ನಿವ್ವಳ ಲಾಭ :**

ಬ್ಯಾಂಕ್ 2024-25 ನೇ ಸಾಲಿನಲ್ಲಿ ಆದಾಯ ತೆರಿಗೆ ಪಾವತಿಗೆ ಅವಕಾಶ ಮತ್ತು ಇನ್ನಿತರ ಅವಶ್ಯಕ ಅವಕಾಶಗಳ ನಂತರ ರೂ.28,77,68,538.52 ಗಳ ನಿವ್ವಳ ಲಾಭ ಗಳಿಸಿದ್ದು, ಲಾಭ ವಿಂಗಡಣೆಗಳ ವಿಷಯದಲ್ಲಿ ವಿವರವಾಗಿ ತಿಳಿಸಿರುವಂತೆ ವಿಲೇವಾರಿ ಮಾಡಲು ಶಿಫಾರಸ್ಸು ಮಾಡಿದೆ.

**17. ಬಜೆಟ್ ಮೀರಿದ ವೆಚ್ಚಗಳು**

ದಿನಾಂಕ: 15.09.2024 ನೇ ಭಾನುವಾರ ನಡೆದ ಬ್ಯಾಂಕಿನ 118ನೇ ವಾರ್ಷಿಕ ಮಹಾಸಭೆಯಲ್ಲಿ 2024-25 ನೇ ಸಾಲಿಗೆ ರೂ.247.12.20.000.00 ಗಳ ವೆಚ್ಚ ಅಂದಾಜು ಮಾಡಲಾಗಿದ್ದು, ವಿವಿಧ ಬಾಬ್ತುಗಳಲ್ಲಿ ಆಗಿರುವ ವೆಚ್ಚ ಮತ್ತಿತರ ವಿವರಗಳನ್ನು ಆಯ-ವ್ಯಯ ಅಂದಾಜು ಪಟ್ಟಿಯಲ್ಲಿ ನೀಡಿದೆ.

ವರದಿ ಸಾಲಿನಲ್ಲಿ ಯಾವುದೇ ಬಾಬ್ತು ಅಂದಾಜಿಗಿಂತ ಹೆಚ್ಚಿಗೆ ಖರ್ಚಾಗಿರುವುದಿಲ್ಲ ಎಂದು ತಿಳಿಸಲು ಇಚ್ಛಿಸುತ್ತೇವೆ.

**18. ಶಾಖೆಗಳು**

ಬ್ಯಾಂಕ್ ವರದಿ ಸಾಲಿನ ಅಂತ್ಯದಲ್ಲಿ ಬೆಂಗಳೂರಿನ ವಿವಿಧ ಭಾಗಗಳಲ್ಲಿ ಇಪ್ಪತ್ತು ಶಾಖೆಗಳು ಮತ್ತು ಆಡಳಿತ ಕಛೇರಿಯನ್ನು, ರಾಮನಗರ ಜಿಲ್ಲಾ ಕೇಂದ್ರದಲ್ಲಿ ಒಂದು ಶಾಖೆಯನ್ನು ಮತ್ತು ಮೈಸೂರು ಕುವೆಂಪುನಗರದಲ್ಲಿ ಒಂದು ಶಾಖೆಯನ್ನು ಹೊಂದಿದ್ದು, ಶಾಖಾವಾರು ಠೇವಣಿ, ಸಾಲಗಳು ಮತ್ತು ನಿವ್ವಳ ಲಾಭ ಈ ಕೆಳಕಂಡಂತಿವೆ.

(ರೂ. ಸಾವಿರಗಳಲ್ಲಿ)

| ಕ್ರ ಸ | ಶಾಖೆಗಳು | ಪ್ರಾರಂಭ ಗೊಂಡ ದಿನಾಂಕ | ಒಟ್ಟು ಠೇವಣಿಗಳು | ಒಟ್ಟು ಸಾಲ ಮತ್ತು ಮುಂಗಡಗಳು | ನಿವ್ವಳ ಲಾಭ | ಸಿಬ್ಬಂದಿ ಸಂಖ್ಯೆ |
|---|---|---|---|---|---|---|
| 1 | ಆಡಳಿತ ಕಛೇರಿ | --- | 0 | 205483 | 205483 | 44 |
| 2 | ಪ್ರಧಾನ ಕಛೇರಿ | 06.04.1907 | 2934557 | 2287011 | 5221567 | 20 |
| 3 | ವಿಜಯನಗರ | 24.02.1980 | 2631207 | 1642962 | 4274169 | 13 |
| 4 | ಜಯನಗರ 9ನೇ ಬ್ಲಾಕ್ | 25.01.1981 | 1616847 | 675273 | 2292119 | 9 |
| 5 | ಇಂದಿರಾನಗರ | 09.12.1983 | 2403972 | 710148 | 3114120 | 9 |
| 6 | ಚಾಮರಾಜಪೇಟೆ ಪಶ್ಚಿಮ | 07.02.1988 | 764696 | 894154 | 1658850 | 9 |
| 7 | ಶಾಂತಿನಗರ | 03.09.1992 | 559241 | 710683 | 1269925 | 8 |

| | | | | | | |
|---|---|---|---|---|---|---|
| 8 | ಮಹಾಲಕ್ಷ್ಮೀಪುರ | 07.07.1994 | 1211709 | 501203 | 1712912 | 8 |
| 9 | ಸಂಜಯನಗರ | 11.08.1994 | 1070652 | 449728 | 1520381 | 9 |
| 10 | ಪದ್ಮನಾಭನಗರ | 04.09.1995 | 816844 | 404410 | 1221254 | 7 |
| 11 | ಕೋರಮಂಗಲ | 30.10.1996 | 889431 | 1251349 | 2140780 | 8 |
| 12 | ಆವಲಹಳ್ಳಿ | 16.01.2002 | 1171021 | 747008 | 1918029 | 9 |
| 13 | ಆರ್.ಟಿ.ನಗರ | 15.02.2002 | 587900 | 517451 | 1105351 | 9 |
| 14 | ಜ್ಞಾನಜ್ಯೋತಿನಗರ | 22.03.2009 | 874257 | 347549 | 1221806 | 8 |
| 15 | ಹೆಚ್.ಆರ್.ಬಿ.ಆರ್.ಲೇಔಟ್ | 10.06.2012 | 576665 | 380710 | 957375 | 8 |
| 16 | ಕೃಷ್ಣರಾಜಪುರಂ | 29.10.2012 | 1159316 | 242757 | 1402073 | 7 |
| 17 | ರಾಮನಗರ ಟೌನ್ | 19.12.2012 | 87194 | 248546 | 335740 | 6 |
| 18 | ಟಿ.ದಾಸರಹಳ್ಳಿ | 02.03.2014 | 333459 | 232931 | 566390 | 5 |
| 19 | ಕುವೆಂಪುನಗರ–ಮೈಸೂರು | 28.06.2014 | 457480 | 504900 | 962380 | 7 |
| 20 | ಹೊಸೂರು ರಸ್ತೆ–ಎಲೆಕ್ಟ್ರಾನಿಕ್ ಸಿಟಿ ಶಾಖೆ | 05.08.2014 | 265565 | 258376 | 523940 | 6 |
| 21 | ಯಲಹಂಕ ಶಾಖೆ | 15.05.2016 | 555884 | 209008 | 764892 | 6 |
| 22 | ಅಂಜನಾನಗರ ಶಾಖೆ | 12.10.2016 | 335166 | 134821 | 469987 | 4 |
| 23 | ಕೋಣನಕುಂಟೆ ಶಾಖೆ | 27.08.2017 | 285826 | 258701 | 544527 | 6 |

ಗ್ರಾಹಕರುಗಳಿಗೆ ಉತ್ತಮ ಸೇವೆ ಒದಗಿಸುವ ನಿಟ್ಟಿನಲ್ಲಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಜಾರಿಗೊಳಿಸಿ **"ಯಾವುದೇ ಶಾಖೆಯಲ್ಲಿ ವ್ಯವಹಾರ"** (Any Branch Banking), ಪ್ರಮುಖ ಶಾಖೆಗಳಲ್ಲಿ ಟೆಲ್ಲರ್ ವ್ಯವಸ್ಥೆ, Rupay ATM Card ಸೌಲಭ್ಯ, POS ಸೌಲಭ್ಯ, SMS ಬ್ಯಾಂಕಿಂಗ್ ಸೌಲಭ್ಯ, IMPS ಸೌಲಭ್ಯ, BBPS ಸೌಲಭ್ಯ, ಮೊಬೈಲ್ ಬ್ಯಾಂಕಿಂಗ್ ಮತ್ತು UPI ಸೌಲಭ್ಯ ಒದಗಿಸಲಾಗಿದೆ. ಸದಸ್ಯರು ತಮ್ಮ ಹತ್ತಿರದ ಶಾಖೆಗಳಲ್ಲಿ ವ್ಯವಹರಿಸಿ ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಬೇಕೆಂದು ಕೋರುತ್ತೇವೆ.

**19. ಬ್ಯಾಂಕಿನ ಶಾಖೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಸಹಕಾರಿಯಾಗುವಂತೆ ಯೋಜನೆಗಳು :**

ಬ್ಯಾಂಕಿನ ಶಾಖೆಗಳನ್ನು ಸ್ವಂತ ಕಟ್ಟಡದಲ್ಲಿ ನೆಲೆಗೊಳಿಸುವ ನಿಟ್ಟಿನಲ್ಲಿ ಪ್ರಧಾನ ಕಛೇರಿ ಕಟ್ಟಡ ಹೊರತುಪಡಿಸಿ ಇತರೆ ಕೆಳಕಂಡ ನಿವೇಶನಗಳನ್ನು ಹೊಂದಿದೆ.

1) ಇಂದಿರಾನಗರ ಶಾಖೆಗೆ ಸಂಬಂಧಿಸಿದಂತೆ ನಂ. 29, ಎನ್‌ಜಿಇಎಫ್ ಕ್ವಾರ್ಟರ್ಸ್, ಬಿನ್ನಮಂಗಲ 1ನೇ ಹಂತ, ಇಂದಿರಾನಗರ 1ನೇ ಘಟ್ಟ, ಬೆಂಗಳೂರು–38, 1449.00 ಚದರ ಅಡಿಯ ನಿವೇಶನ ಹಾಗೂ ಕಟ್ಟಡ.

2) ಮೈಸೂರು ಶಾಖೆಗೆ ಅನುಕೂಲವಾಗವಂತೆ ನಂ. 1804, ಜೆ.ಸಿ.ಎಸ್.ಟಿ 'ಕೆ' ಬ್ಲಾಕ್ (ಕುವೆಂಪುನಗರ) ಮೈಸೂರು ರಲ್ಲಿ 323.76 ಚದರ ಮೀಟರ್‌ಗಳ ನಿವೇಶನ.

3) ಆವಲಹಳ್ಳಿ ಶಾಖೆಗೆ ಅನುಕೂಲವಾಗುವಂತೆ ನಂ. 8, ಹಳೆ ಸಂಖ್ಯೆ 7 ಮತ್ತು 8, ಪಿ.ಐ.ಡಿ ಸಂಖ್ಯೆ 41–119–08, ಹೊಸ ಪಿ.ಐ.ಡಿ. ನಂ. 158–W0405–47, ಸರ್ವೆ ನಂ. 3/4 ಮತ್ತು 3/5, ಆವಲಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, 50 ಅಡಿ ರಸ್ತೆ, ಬೆಂಗಳೂರು ರಲ್ಲಿ 2224.00 ಚದರ ಅಡಿ ನಿವೇಶನ.

4) ಜ್ಞಾನಜ್ಯೋತಿನಗರ ಶಾಖೆಗೆ ಅನುಕೂಲವಾಗುವಂತೆ ನಂ. 445, ನಾಗರಭಾವಿ 2ನೇ ಘಟ್ಟ, 14ನೇ ಬ್ಲಾಕ್, ಬೆಂಗಳೂರು ರಲ್ಲಿ 222.30 ಚದರ ಮೀಟರ್‌ಗಳ ನಿವೇಶನ.

ಬ್ಯಾಂಕು ಬಿಡಿಎ ರವರು ನಾಗರೀಕ ಸೌಲಭ್ಯಕ್ಕಾಗಿ ಮೀಸಲಿರಿಸಿದ್ದ ನಿವೇಶನ ಸಂಖ್ಯೆ ನಂ. 1, ಸರ್ವೆ ನಂ. 73ಪಿ, 74/2, 76/1, 2, 78/1 ಮತ್ತು 2, ಹರಳೂರು ಗ್ರಾಮ ರಿಲೈಯಬಲ್ ಡೆವಲಪರ್ಸ್ 2ನೇ ಫೇಸ್, ಬೆಂಗಳೂರು ನಿವೇಶನವನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ಪಡೆದಿದ್ದನ್ನು, ಸದರಿ ಸ್ಥಳದಲ್ಲಿ ವೆಚ್ಚ ಮಾಡಿ ಕಟ್ಟಡ ನಿರ್ಮಿಸಿ ಶಾಖೆ ತೆರೆದಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕೋರಮಂಗಲ ಶಾಖೆ ಮತ್ತು ಎಲೆಕ್ಟ್ರಾನಿಕ್ ಸಿಟಿ ಶಾಖೆಗಳ ಬೆಳವಣಿಗೆಗೆ ಪೂರಕವಲ್ಲವೆಂದು ಗಮನಿಸಿ ಸದರಿ ನಿವೇಶನವನ್ನು ಬಿಡಿಎ ರವರಿಗೆ ಹಿಂದಿರುಗಿಸಿದೆ ಎಂದು ತಿಳಿಸಲು ಇಚ್ಛಿಸುತ್ತೇವೆ.

ಶಾಖೆಗಳಿಗೆ ಸ್ವಂತ ಕಟ್ಟಡ ಹೊಂದಲು ಸೂಕ್ತ ಕ್ರಮವಿರಿಸಲಾಗುವುದು ಎಂದು ತಿಳಿಸಲು ಇಚ್ಛಿಸುತ್ತೇವೆ.

**20. ಪ್ರಶಸ್ತಿ ಮತ್ತು ಪಾರಿತೋಷಕಗಳು**

ಬ್ಯಾಂಕ್ ತನ್ನ ಪ್ರಾರಂಭದ ದಿನಗಳಿಂದಲೂ ಅತ್ಯುತ್ತಮವಾಗಿ ಗ್ರಾಹಕ ಸೇವೆಯನ್ನು ಒದಗಿಸುವ ಮೂಲಕ ಇಂದು ಬೃಹದಾಕಾರವಾಗಿ ಬೆಳೆದು ನಿಂತಿದೆ. ಬ್ಯಾಂಕು ತನ್ನ ಉತ್ತಮ ಕಾರ್ಯಾಚರಣೆಗಾಗಿ 1926, 1927 ಮತ್ತು 1928 ರಲ್ಲಿ ಸತತ ಮೂರು ವರ್ಷಗಳ ಕಾಲ ಮೈಸೂರು ಸಂಸ್ಥಾನದ "ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್" ಪ್ರಶಸ್ತಿಗೆ ಪಾತ್ರವಾಗಿ ಅಂದಿನ ಮೈಸೂರು ಸಂಸ್ಥಾನದ ಯುವರಾಜರಾದ ಶ್ರೀ ಶ್ರೀ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್ ರವರಿಂದ ಪ್ರಶಸ್ತಿ ಪತ್ರ ಹಾಗೂ ಪರ್ಯಾಯ ಪಾರಿತೋಷಕ ಪಡೆದಿದೆ.

ಕರ್ನಾಟಕ ರಾಜ್ಯ ಸರ್ಕಾರವು ಸಹ 2002 ರಲ್ಲಿ, 2004 ರಲ್ಲಿ ಮತ್ತು 2008 ರಲ್ಲಿ ನಮ್ಮ ಬ್ಯಾಂಕನ್ನು "ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್" (Best Urban Co-operative Bank) ಎಂದು ಗುರುತಿಸಿ, ಪ್ರಶಸ್ತಿ ಪತ್ರ ಹಾಗೂ ನೆನೆಪಿನ ಕಾಣಿಕೆಯನ್ನು ನೀಡಿ ಗೌರವಿಸಿದೆ.

ಹಾಗೆಯೇ ಕರ್ನಾಟಕ ರಾಜ್ಯ ಸರ್ಕಾರವು ಜುಲೈ 2007ರಲ್ಲಿ ಮೈಸೂರಿನಲ್ಲಿ ಆಯೋಜಿಸಿದ್ದ ಸಹಕಾರ ಚಳುವಳಿ ಶತಮಾನೋತ್ಸವ ಕಾರ್ಯಕ್ರಮದಲ್ಲಿ ನಮ್ಮ ಬ್ಯಾಂಕನ್ನು "ಶತಮಾನೋತ್ಸವ ಪೂರೈಸಿದ ಸಹಕಾರ ಬ್ಯಾಂಕ್" ಎಂಬ ಪ್ರಶಸ್ತಿಗೆ ಆಯ್ಕೆ ಮಾಡಿ ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಿದೆ.

ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ನವದೆಹಲಿ ರವರು ಅಂತರಾಷ್ಟ್ರೀಯ ಸಹಕಾರ ವರ್ಷ 2012 ರ ಸಂಬಂಧ ನಮ್ಮ ಬ್ಯಾಂಕನ್ನು "ಶತಮಾನೋತ್ಸವ ಪೂರೈಸಿದ ಕರ್ನಾಟಕ ರಾಜ್ಯದ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್" ಎಂಬ ಪ್ರಶಸ್ತಿಗೆ ಆಯ್ಕೆ ಮಾಡಿ ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಿ ಗೌರವಿಸಿದೆ.

ಕರ್ನಾಟಕ ರಾಜ್ಯ ಸಹಕಾರಿ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿಯಮಿತ, ಬೆಂಗಳೂರು ರವರು ಸಹ ಅಂತರ ರಾಷ್ಟ್ರೀಯ ಸಹಕಾರ ವರ್ಷ–2012 ರ ಸಂಬಂಧ ನಮ್ಮ ಬ್ಯಾಂಕನ್ನು "ಶತಮಾನೋತ್ಸವ ಪೂರೈಸಿದ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್" ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ.

ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ಬೆಂಗಳೂರು ರವರು ಗದಗ ದಲ್ಲಿ 59ನೇ ಅಖಿಲ ಭಾರತ ಸಹಕಾರ ಸಪ್ತಾಹ–2013 ದಿನಾಂಕ 17.11.2012 ರಂದು ನಡೆಸಿ ನಮ್ಮ ಬ್ಯಾಂಕನ್ನು "ಕರ್ನಾಟಕ ರಾಜ್ಯದ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್" ಪ್ರಶಸ್ತಿಗೆ ಆಯ್ಕೆ ಮಾಡಿ ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಿ ಗೌರವಿಸಿದೆ.

ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ಬೆಂಗಳೂರು ರವರು 2012–13, 2013–14 ಮತ್ತು 2014–15 ರ ಸಾಲುಗಳಿಗೆ ನಮ್ಮ ಬ್ಯಾಂಕ್‌ನ್ನು ಕರ್ನಾಟಕ ರಾಜ್ಯದ "ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್" ಪ್ರಶಸ್ತಿಗೆ ಆಯ್ಕೆ ಮಾಡಿ ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಿದೆ.

ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ಬೆಂಗಳೂರು ರವರು 2015–16, 2016–17, 2017–18 ಮತ್ತು 2018–19 ರ ಸಾಲಿಗೆ ನಮ್ಮ ಬ್ಯಾಂಕನ್ನು ಕರ್ನಾಟಕ ರಾಜ್ಯದ ಅತ್ಯುನ್ನತ ಮೂರು ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಒಂದು ಎಂದು ಆಯ್ಕೆ ಮಾಡಿ ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಿದೆ.

ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ನವದೆಹಲಿ ರವರು ದಿನಾಂಕ 23.06.2022 ರಂದು ನವದೆಹಲಿಯಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಬ್ಯಾಂಕು 100 ವರ್ಷಗಳನ್ನು ಪೂರೈಸಿರುವ ಹಿನ್ನಲೆಯಲ್ಲಿ **"ಶತಮಾನ ದಾಟಿದ ಬ್ಯಾಂಕ್"** ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ.

ತಮ್ಮೆಲ್ಲರ ಸಹಕಾರದಿಂದ ನಮ್ಮ ಬ್ಯಾಂಕ್ 2024–25 ರ ಸಾಲಾಂತ್ಯದಲ್ಲೂ ಕರ್ನಾಟಕ ರಾಜ್ಯದ ಅತ್ಯುನ್ನತ ಪಟ್ಟಣ ಸಹಕಾರ ಬ್ಯಾಂಕ್ ಆಗಿ ಮತ್ತು ದೇಶದ ಅತ್ಯುತ್ತಮ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ಒಂದಾಗಿ (One among the top urban co-operative banks of the country) ಮುಂದುವರೆದಿದೆ ಎಂದು ತಿಳಿಸಲು ಹರ್ಷಿಸುತ್ತೇವೆ.

ಇಂತಹ ಸಾಧನೆಗಳು ಮಾನ್ಯ ಸದಸ್ಯರುಗಳ, ಠೇವಣಿದಾರರುಗಳ, ಗ್ರಾಹಕರ ಬೆಂಬಲದಿಂದ ಮಾತ್ರ ಸಾಧ್ಯವಾಯಿತೆಂದು ಅರಿಕೆ ಮಾಡಿಕೊಳ್ಳುತ್ತಾ ತಮ್ಮ ಸಹಕಾರ ಎಂದಿಗೂ ಹೀಗೆಯೇ ಮುಂದುವರೆಯಲೆಂದು ಅಶಿಸುತ್ತೇವೆ.

**21. ಬ್ಯಾಂಕ್‌ನ ಲಕ್ಷ್ಮಿ ಚಿತ್ರವನ್ನು ವ್ಯಾಪಾರ ಚಿಹ್ನೆಯಾಗಿ ನೋಂದಾಯಿಸಿರುವುದು :**

ಬ್ಯಾಂಕ್‌ನ ಲಕ್ಷ್ಮಿ ಚಿತ್ರವನ್ನು ವ್ಯಾಪಾರ ಚಿಹ್ನೆಯಾಗಿ ನೋಂದಾಯಿಸಲು ಸಲ್ಲಿಸಿದ್ದ ಅರ್ಜಿಯನ್ನು ಭಾರತ ಸರ್ಕಾರದವರು ಪರಿಗಣಿಸಿ, ವ್ಯಾಪಾರ ಚಿಹ್ನೆ ಕಾಯಿದೆ 1959 ಸೆಕ್ಷನ್ 23(2), ನಿಯಮ 62(1) ರನ್ವಯ ವ್ಯಾಪಾರ ಚಿಹ್ನೆ ಸಂಖ್ಯೆ 943843 ದಿನಾಂಕ 31–07–2000 ರಂತೆ ಬ್ಯಾಂಕಿನ ಲಕ್ಷ್ಮಿ ಚಿಹ್ನೆಯನ್ನು ವ್ಯಾಪಾರ ಚಿಹ್ನೆಯಾಗಿ ನೋಂದಾಯಿಸಿದ್ದು ಅದು ದಿನಾಂಕ 30.07.2030 ರವರೆಗೆ ಜಾರಿಯಲ್ಲಿರುತ್ತದೆ.

**22. ಬ್ಯಾಂಕ್‌ನ ಉತ್ಸವಗಳ ಆಚರಣೆ :**

118 ವರ್ಷಗಳ ಬ್ಯಾಂಕಿಂಗ್ ಸೇವೆಯನ್ನು ಗ್ರಾಹಕರುಗಳಿಗೆ ಒದಗಿಸಿ ಸಾಗುತ್ತಿರುವ ನಮ್ಮ ಬ್ಯಾಂಕ್ ತನ್ನ ಮೈಲುಗಲ್ಲುಗಳ ಸವಿನೆನಪುಗಳನ್ನು ಚಿರಸ್ಥಾಯಿಯಾಗಿ ಉಳಿಸುವ ಉದ್ದೇಶದಿಂದ 1932 ರಲ್ಲಿ ರಜತ ಮಹೋತ್ಸವ, 1957 ರಲ್ಲಿ ಸ್ವರ್ಣ ಮಹೋತ್ಸವ, 1967 ರಲ್ಲಿ ವಜ್ರ ಮಹೋತ್ಸವ, 1977 ರಲ್ಲಿ ಪ್ಲಾಟಿನಂ ಮಹೋತ್ಸವ ಹಾಗೂ 2007 ರಲ್ಲಿ ಶತಮಾನೋತ್ಸವಗಳನ್ನು ಆಚರಿಸಿದೆ. ಸದಸ್ಯರುಗಳ ಮತ್ತು ಗ್ರಾಹಕರ ಸಹಕಾರ ಪ್ರೋತ್ಸಾಹಗಳು ಎಂದಿಗೂ ಮುಂದುವರೆದು ಬ್ಯಾಂಕ್ ಸಹಸ್ರಮಾನ ಕಾಣಲೆಂದು ಆಶಿಸುತ್ತೇವೆ.

**23. ಮರಣ ಪರಿಹಾರ ಮೊಬಲಗು ಪಾವತಿಗಳು :**

ಬ್ಯಾಂಕಿನ ಬೈಲಾಗಳಲ್ಲಿ ಸೂಚಿಸಿರುವಂತೆ ಬ್ಯಾಂಕಿನ ಕನಿಷ್ಠ ಸೌಲಭ್ಯ ಉಪಯೋಗಿಸಿದ ಸದಸ್ಯರು ಮರಣವಾದಲ್ಲಿ ಅವರ ವಾರಸುದಾರರಿಗೆ ಮರಣ ಪರಿಹಾರ ಮೊಬಲಗು ರೂ. 8,000–00 ಗಳನ್ನು ಪಾವತಿಸಲಾಗುತ್ತಿದೆ. ಮರಣ ಹೊಂದಿದ ಅಂತಹ ಸದಸ್ಯರು ಐಚ್ಛಿಕ ಮರಣ ನಿಧಿಗೆ ವಂತಿಕೆದಾರರಾಗಿದ್ದಲ್ಲಿ, ಹೆಚ್ಚುವರಿ ರೂ. 2000–00 ಮೊಬಲಗು ಸೇರಿ ಒಟ್ಟು ರೂ. 10,000–00 ಗಳ ಮರಣ ಪರಿಹಾರ ಪಾವತಿ ಮಾಡಲಾಗುತ್ತಿದೆ.

ಹಾಲಿ ಜಾರಿಯಲ್ಲಿರುವ ನಿಯಮಾವಳಿಗನ್ವಯ ಸದಸ್ಯರು ಮರಣ ಹೊಂದಿದ ದಿನಾಂಕದಿಂದ ಒಂದು ವರ್ಷದೊಳಗೆ ಅಥವಾ ಮರಣ ಹೊಂದಿದ ಸದಸ್ಯರು ಪಡೆದ ಸಾಲ ಪೂರ್ತಿಯಾಗಿ ತಿರುವಳಿ ಮಾಡಿದ ದಿನಾಂಕದಿಂದ ಒಂದು ವರ್ಷದೊಳಗೆ ಕ್ಲೇಮು ಮಾಡಿದ್ದಲ್ಲಿ ಮರಣ ಪರಿಹಾರವನ್ನು ಮಂಜೂರು ಮಾಡಲಾಗುತ್ತಿದೆ.

ಬದಲಾವಣೆಗೊಂಡ ಸಹಕಾರ ಕಾನೂನುಗಳ ಅನ್ವಯ ಪ್ರತಿಯೊಬ್ಬ ಸದಸ್ಯನು ಸಹಕಾರ ಸಂಘಗಳ ವ್ಯವಹಾರದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗಿದ್ದು, ಎಲ್ಲಾ ಸದಸ್ಯರು ಕನಿಷ್ಠ ಸೇವೆ ಅಥವಾ ಸೌಲಭ್ಯ ಪಡೆಯುವುದನ್ನು ಉತ್ತೇಜಿಸುವ ಸಲುವಾಗಿ ಬ್ಯಾಂಕಿನ ಬೈಲಾಗಳಲ್ಲಿ ನಿಗದಿಪಡಿಸಿರುವಂತೆ ಕನಿಷ್ಠ ಸೇವೆ/ಸೌಲಭ್ಯ ಬಳಸಿಕೊಂಡಿರುವ ಸದಸ್ಯರು ಮರಣ ಹೊಂದಿದ್ದಲ್ಲಿ ಮಾತ್ರ ಅಂತಹ ಸದಸ್ಯರುಗಳ ವಾರಸುದಾರರಿಗೆ ಮರಣ ಪರಿಹಾರ ಮೊಬಲಗು ಮಂಜೂರು ಮಾಡಲು ಹಿಂದಿನ ಸರ್ವಸದಸ್ಯರ ಸಭೆಯು ತೀರ್ಮಾನಿಸಿರುವುದರಿಂದ ಅದು ದಿನಾಂಕ 01.10.2014 ರಿಂದ ಕಾರ್ಯರೂಪಕ್ಕೆ ತಂದಿದೆ. ಸದಸ್ಯರು ಬೈಲಾಗಳಲ್ಲಿ ನಿಗದಿಪಡಿಸಿರುವಂತೆ ಕನಿಷ್ಠ ಷೇರು ಮೊಬಲಗು ರೂ. 1000–00 ಗಳು, ಕನಿಷ್ಠ ಠೇವಣಿ

ರೂ. 1000-00 ಅಥವಾ ಸಾಲ ಸೌಲಭ್ಯ ಹೊಂದಿರುವುದು, ಸಹಕಾರ ವರ್ಷದಲ್ಲಿ ಐದು ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುವುದು ಮತ್ತು ಕಳೆದ ಐದು ಸರ್ವಸದಸ್ಯರ ಸಭೆಗಳಲ್ಲಿ ಎರಡು ಸರ್ವಸದಸ್ಯರ ಸಭೆಗೆ ಹಾಜರಾತಿ ಇವುಗಳನ್ನು ಪಾಲಿಸಲು ಕೋರಿದೆ.

"ಸದಸ್ಯರ ಐಚ್ಛಿಕ ಮರಣ ಪರಿಹಾರ ನಿಧಿ" ಗೆ ವಂತಿಗೆ ಮಾಡಿಲ್ಲದ ಸದಸ್ಯರುಗಳು ಒಮ್ಮೆ ರೂ. 200-00 ಗಳನ್ನು ಪಾವತಿಸಿ ಸದರಿ ನಿಧಿಗೆ ವಂತಿಗೆದಾರರಾಗಲು ಕೋರಿದೆ.

2024-25 ರ ಸಾಲಿನಲ್ಲಿ ಮರಣ ಪರಿಹಾರ ಪಾವತಿ ಬಾಬ್ತು, ಸದಸ್ಯರ ವೈದ್ಯಕೀಯ ವೆಚ್ಚ ಬಾಬ್ತು ಮತ್ತು ಸದಸ್ಯರ ಮಕ್ಕಳ ವಿದ್ಯಾರ್ಜನೆ ಸಂಬಂಧ ಪ್ರೋತ್ಸಾಹ ಧನ ಒಟ್ಟು ರೂ.21,68,049-00 ಗಳನ್ನು ಸದಸ್ಯರ ಕ್ಷೇಮಕ್ಕಾಗಿ ವೆಚ್ಚ ಮಾಡಿದೆ.

**24. ಸದಸ್ಯರುಗಳ ವೈದ್ಯಕೀಯ ವೆಚ್ಚ ಭರಿಸುವ ನಿಧಿ :**

ಬ್ಯಾಂಕಿನ ಸದಸ್ಯರು ಕ್ಯಾನ್ಸರ್, ಹೃದಯ ಕಾಯಿಲೆ, ಮೂತ್ರ ಪಿಂಡ ಕಾಯಿಲೆ ಅಥವಾ ಆಡಳಿತ ಮಂಡಳಿಯವರ ಅಭಿಪ್ರಾಯದಲ್ಲಿ ತೀವ್ರ ಕಾಯಿಲೆಗೆ ತುತ್ತಾದಲ್ಲಿ ವೈದ್ಯಕೀಯ ವೆಚ್ಚ ಭರಿಸುವ ದೃಷ್ಟಿಯಿಂದ "ಸದಸ್ಯರ ಕ್ಷೇಮ ನಿಧಿ" ಯನ್ನು ಸ್ಥಾಪಿಸಿದ್ದು, ಸದರಿ ನಿಧಿಗೆ ಸದಸ್ಯರು ರೂ. 200-00 ಗಳನ್ನು ಪಾವತಿಸಿ ವಂತಿಕೆದಾರರಾಗಿದ್ದಲ್ಲಿ ಅಂತಹ ಸದಸ್ಯರು ಮೇಲೆ ಸೂಚಿಸಿದ ಕಾಯಿಲೆಗೆ ತುತ್ತಾದಲ್ಲಿ ರೂ. 5,000-00 ಗಳವರೆಗೆ ವೈದ್ಯಕೀಯ ವೆಚ್ಚ ಭರಿಸಲಾಗುತ್ತದೆ. 2024-25ರ ಸಾಲಿನಲ್ಲಿ ಈ ಸಂಬಂಧ ಒಟ್ಟು ರೂ. 19,200-00 ಗಳನ್ನು ಪಾವತಿಸಿದೆ.

"ಸದಸ್ಯರ ಕ್ಷೇಮ ನಿಧಿ" ಗೆ ವಂತಿಗೆ ಮಾಡಿಲ್ಲದ ಸದಸ್ಯರುಗಳು ಒಮ್ಮೆ ರೂ. 200-00 ಗಳನ್ನು ಪಾವತಿಸಿ ಸದರಿ ನಿಧಿಗೆ ವಂತಿಕೆದಾರರಾಗಲು ಕೋರಿದೆ.

**25. ಹಿರಿಯ ನಾಗರೀಕ ಗ್ರಾಹಕರಿಗೆ ಉಚಿತ ಚೆಕ್ ಪುಸ್ತಕ, ಉಚಿತ ಡಿಮ್ಯಾಂಡ್ ಡ್ರಾಫ್ಟ್/ಧನಾದೇಶ ಸೌಲಭ್ಯ :**

ಬ್ಯಾಂಕು ಉಳಿತಾಯ ಖಾತೆ ಹೊಂದಿರುವ ಹಿರಿಯ ನಾಗರೀಕ ಗ್ರಾಹಕರಿಗೆ ಉಚಿತ ಚೆಕ್ ಪುಸ್ತಕ ಸೌಲಭ್ಯ, ಕಮೀಷನ್ ಇಲ್ಲದೆ ಧನಾದೇಶ ಮತ್ತು ಡಿಮ್ಯಾಂಡ್ ಡ್ರಾಫ್ಟ್ ನೀಡುತ್ತಿದ್ದು ಮಾನ್ಯ ಹಿರಿಯ ಸದಸ್ಯರು ತಮ್ಮ ದೈನಂದಿನ ಅವಶ್ಯಕತೆಗಳಿಗೆ ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಲು ಕೋರಿದೆ.

**26. ಜೀವ ವಿಮಾ ವ್ಯವಹಾರ ಮತ್ತು ಜನರಲ್ ಇನ್ಸೂರೆನ್ಸ್ ವ್ಯವಹಾರವನ್ನು ಕ್ರಮವಾಗಿ ಕಾರ್ಪೊರೇಟ್ ಏಜೆನ್ಸಿ ಮತ್ತು ರೆಫರಲ್ ಏಜನ್ಸಿ ವ್ಯವಸ್ಥೆಯಲ್ಲಿ ಕೈಗೊಂಡಿರುವುದು:**

ಉತ್ತಮ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಕಾರ್ಪೊರೇಟ್ ಏಜೆನ್ಸಿ/ರೆಫರಲ್ ಏಜೆನ್ಸಿ ವ್ಯವಸ್ಥೆ ಯಡಿಯಲ್ಲಿ ವಿಮಾ ವ್ಯವಹಾರ ನಡೆಸಲು ಭಾರತೀಯ ರಿಸರ್ವ್ ಬ್ಯಾಂಕ್‌ನವರು ಅನುಮತಿ ನೀಡುತ್ತಿದ್ದು, ನಮ್ಮ ಬ್ಯಾಂಕ್ ಭಾರತೀಯ ರಿಸರ್ವ್ ಬ್ಯಾಂಕ್ ನವರ ಅನುಮತಿಯೊಂದಿಗೆ ಭಾರತೀಯ ಜೀವ ವಿಮಾ ಕಾರ್ಪೊರೇಷನ್‌ರವರ ಕಾರ್ಪೊರೇಟ್ ಏಜೆನ್ಸಿ ಪಡೆದು ಅವರ ಜೀವ ವಿಮಾ ಪಾಲಿಸಿಗಳನ್ನು ಗ್ರಾಹಕರಿಗೆ ಒದಗಿಸುತ್ತಿದೆ. ಬ್ಯಾಂಕಿನಲ್ಲಿ ಸಾಲ ಪಡೆದ ಸದಸ್ಯರು/ಸಾಲ ಮರುಪಾವತಿಸಲು ಜವಾಬ್ದಾರಿ ಹೊಂದಿರುವ ಸಾಲಗಾರ ಕುಟುಂಬ ಸದಸ್ಯರು ಮರಣ ಹೊಂದಿದ್ದಲ್ಲಿ ಮರಣ ದಿನಾಂಕಕ್ಕೆ ಬಾಕಿ ಇರಬೇಕಾದ ಸಾಲವನ್ನು ವಿಮೆ ಮೂಲಕ ಭರಿಸುವ Term Assurance ವಿಮೆ ಸೌಲಭ್ಯ ಜಾರಿಯಲ್ಲಿದ್ದು ಸಾಲ ಸೌಲಭ್ಯ ಪಡೆಯುವ ಸದಸ್ಯರುಗಳು ಅಂತಹ ವಿಮೆ ಹೊಂದಬೇಕೆಂದು ಮನವಿ ಮಾಡುತ್ತೇವೆ.

ಹಾಗೆಯೇ ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆಯಡಿಯಲ್ಲಿ ಅರ್ಹ ವ್ಯಕ್ತಿಯೊಬ್ಬರು ವಾರ್ಷಿಕ ರೂ. 436/- ಗಳನ್ನು ಪಾವತಿಸುವ ಮೂಲಕ ರೂ. 2.00 ಲಕ್ಷಗಳ ಜೀವ ವಿಮಾ ಸೌಲಭ್ಯ ಹೊಂದುವುದನ್ನು ಭಾರತೀಯ ಜೀವ ವಿಮಾ ಕಾರ್ಪೋರೇಷನ್ ಮುಖಾಂತರ ನೀಡಲಾಗುತ್ತಿದೆ.

ಹಾಗೆಯೇ ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಯಡಿಯಲ್ಲಿ ಅರ್ಹ ವ್ಯಕ್ತಿಯೊಬ್ಬರು ವಾರ್ಷಿಕ ರೂ. 20/– ಗಳನ್ನು ಪಾವತಿಸುವ ಮೂಲಕ ರೂ. 2.00 ಲಕ್ಷಗಳ ವೈಯಕ್ತಿಕ ಅಪಘಾತ ವಿಮಾ ಸೌಲಭ್ಯವನ್ನು ಇಫ್ಕೋ ಟೋಕಿಯೊ ಇನ್ಸೂರೆನ್ಸ್ ಕಂಪನಿ ಮುಖಾಂತರ ಒದಗಿಸಲಾಗುತ್ತಿದೆ. ಬ್ಯಾಂಕಿನಲ್ಲಿ ಕನಿಷ್ಠ ರೂ. 5000–00ಗಳ ಶಿಲ್ಕು ನಿರ್ವಹಿಸುವ ಉಳಿತಾಯ ಖಾತೆದಾರರಿಗೆ ಅಥವಾ ಯಾವುದೇ ಸಾಲ ಸೌಲಭ್ಯ ಪಡೆಯುವ ಗ್ರಾಹಕರಿಗೆ ಪ್ರಧಾನ ಸುರಕ್ಷಾ ಭೀಮಾ ಪಾಲಿಸಿಯನ್ನು ಉಚಿತವಾಗಿ ನೀಡಲು ಆಡಳಿತ ಮಂಡಳಿಯು ತೀರ್ಮಾನಿಸಿದ್ದು ಅಂತಹ ಸದಸ್ಯರು ನಿಗದಿತ ಅರ್ಜಿಗಳನ್ನು ನೀಡಲು ಶಾಖೆಯನ್ನು ಸಂಪರ್ಕಿಸಲು ಕೋರಿದೆ.

ಹಾಗೆಯೇ ಜನರಲ್ ಇನ್ಸೂರೆನ್ಸ್ ವ್ಯವಹಾರವನ್ನು ಇಫ್ಕೋ ಟೋಕಿಯೊ ಇನ್ಸೂರೆನ್ಸ್ ಕಂಪನಿಯೊಂದಿಗೆ ನಡೆಸಲು ಕ್ರಮಕೈಗೊಂಡಿದ್ದು ಸದಸ್ಯರುಗಳು ತಮ್ಮ ವಾಹನ ವಿಮೆ, ಕಟ್ಟಡ ವಿಮೆ, ಆರೋಗ್ಯ ವಿಮೆ ಮತ್ತು ಲಾಕರ್ ವಿಮೆ ಮುಂತಾದವುಗಳನ್ನು ಬ್ಯಾಂಕಿನ ಮುಖಾಂತರ ಪಡೆಯಬಹುದಾಗಿದೆ.

ಮಾನ್ಯ ಸದಸ್ಯರುಗಳು ತಮ್ಮ ಹಾಗೂ ತಮ್ಮ ಕುಟುಂಬದವರ ಜೀವ ವಿಮಾ ಮತ್ತು ಜನರಲ್ ಇನ್ಸೂರೆನ್ಸ್ ಅವಶ್ಯಕತೆಗಳನ್ನು ನಮ್ಮ ಬ್ಯಾಂಕಿನ ಮುಖಾಂತರ \ಪಡೆಯಬೇಕೆಂದು ಕೋರಿದೆ.

**27. 'ಇ' ಸ್ಟಾಂಪಿಂಗ್ ಸೌಲಭ್ಯ ಜಾರಿ :**

ಬ್ಯಾಂಕಿನ ಗ್ರಾಹಕರುಗಳಿಗೆ 'ಇ' ಸ್ಟಾಂಪಿಂಗ್ ಸೌಲಭ್ಯ ಒದಗಿಸುವ ಸಲುವಾಗಿ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿಯಮಿತ ಮತ್ತು ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವ ರೊಂದಿಗೆ ಕರಾರು ಮಾಡಿಕೊಂಡು 'ಇ' ಸ್ಟಾಂಪಿಂಗ್ ಸೌಲಭ್ಯ ನೀಡಲಾಗುತ್ತಿದೆ. ಮಾನ್ಯ ಸದಸ್ಯರುಗಳು ನೋಂದಣಿ/ ಕರಾರು ಇತ್ಯಾದಿಗಳ 'ಇ ಸ್ಟಾಂಪ್' ಪತ್ರಗಳ ಅವಶ್ಯಕತೆಗಳಿಗೆ ನಮ್ಮೊಂದಿಗೆ ವ್ಯವಹರಿಸಬೇಕೆಂದು ಕೋರುತ್ತೇವೆ.

**28. ಕನಿಷ್ಠ ಕಮೀಷನ್ ದರದಲ್ಲಿ ಪೇ ಆರ್ಡರ್ / ಡಿಮ್ಯಾಂಡ್ ಡ್ರಾಫ್ಟ್ ಸೌಲಭ್ಯ :**

ಬ್ಯಾಂಕಿನ ಸದಸ್ಯರುಗಳಿಗೆ/ಗ್ರಾಹಕರುಗಳಿಗೆ ಕನಿಷ್ಠ ಕಮೀಷನ್ ದರದಲ್ಲಿ ಪೇ ಆರ್ಡರ್‌ಗಳನ್ನು ಮತ್ತು ರಾಜ್ಯದ ಹಾಗೂ ದೇಶದ ಆಯ್ದ ನಗರಗಳ ಮೇಲೆ ಅಪೆಕ್ಸ್ ಬ್ಯಾಂಕ್/ಹೆಚ್.ಡಿ.ಎಫ್.ಸಿ/ಐ.ಡಿ.ಬಿ.ಐ ಬ್ಯಾಂಕುಗಳ ಸಹಯೋಗದೊಂದಿಗೆ ಡಿಮ್ಯಾಂಡ್ ಡ್ರಾಫ್ಟ್ ಸೌಲಭ್ಯ ಒದಗಿಸಲಾಗಿದೆ. ಮಾನ್ಯ ಸದಸ್ಯರುಗಳು ತಮ್ಮ ಅವಶ್ಯಕತೆಗಳಿಗೆ ಸದರಿ ಸೌಲಭ್ಯ ಉಪಯೋಗಿಸಲು ಕೋರಿದೆ.

**29. RTGS (Real Time Gross Settlement) ಮತ್ತು NEFT (National Electronic Fund Transfer)/ IMPS (Immediate Payment System) ಸೌಲಭ್ಯ :**

ಬ್ಯಾಂಕು ಗ್ರಾಹಕರಿಗೆ ದೇಶಾದ್ಯಂತ ಹಣ ಪಾವತಿ/ಸ್ವೀಕೃತಿ ಸೌಲಭ್ಯವನ್ನು RTGS/ NEFT / IMPS ಮುಖಾಂತರ ನೀಡುತ್ತಿದೆ. ಈ ಸೌಲಭ್ಯದಲ್ಲಿ ಗ್ರಾಹಕರ ಕೋರಿಕೆಯ ಮೇರೆಗೆ ಹಣ ವರ್ಗಾವಣೆಯು ದೇಶದಲ್ಲಿನ ಯಾವುದೇ ಬ್ಯಾಂಕಿನ ಯಾವುದೇ ಖಾತೆಗೆ ಶೀಘ್ರವಾಗಿ ಆಗುವುದರಿಂದ ಸದಸ್ಯರು ಈ ಸೌಲಭ್ಯ ಉಪಯೋಗಿಸಿಕೊಳ್ಳಲು ಕೋರಿದೆ.

ಈ ಸಂಬಂಧ ಬ್ಯಾಂಕು ಇಂಡಸ್‌ಇಂಡ್ ಬ್ಯಾಂಕ್, ಆಕ್ಸಿಸ್ ಬ್ಯಾಂಕ್ ಮತ್ತು ಐ.ಡಿ.ಬಿ.ಐ ಬ್ಯಾಂಕ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ ಎಂದು ತಿಳಿಸಲು ಇಚ್ಛಿಸುತ್ತೇವೆ.

**30. Rupay ATM Card/SMS ಬ್ಯಾಂಕಿಂಗ್/BBPS ಮೊಬೈಲ್ ಬ್ಯಾಂಕಿಂಗ್ ಮತ್ತು UPI ಸೌಲಭ್ಯ ಜಾರಿ :**

ಬ್ಯಾಂಕ್ HDFC ಬ್ಯಾಂಕ್‌ನ ಸಹಯೋಗದೊಂದಿಗೆ "Rupay ATM Card" ಸೌಲಭ್ಯ ಒದಗಿಸಿದ್ದು ಸದಸ್ಯರುಗಳು/ ಠೇವಣಿದಾರರುಗಳು ತಮ್ಮ ಉಳಿತಾಯ/ಚಾಲ್ತಿ ಖಾತೆಗೆ ಸಂಬಂಧಿಸಿದಂತೆ ATM Card ಪಡೆದು ದೇಶಾದ್ಯಂತ ಯಾವುದೇ ಬ್ಯಾಂಕಿನ Rupay Card ಸೌಲಭ್ಯವಿರುವ ATM ನಿಂದ ಹಣ ಪಡೆಯಲು ಅಥವಾ ಮಳಿಗೆಗಳಲ್ಲಿ ಖರೀದಿ ಉದ್ದೇಶಗಳಿಗೆ ಈ ಕಾರ್ಡ್ ಬಳಸಬಹುದಾಗಿದೆ.

ನಮ್ಮ ಬ್ಯಾಂಕ್‌ನ ATM ಗಳಲ್ಲಿನ ಎಲ್ಲಾ ವ್ಯವಹಾರಗಳು ಉಚಿತವಾಗಿದ್ದು, HDFC ಬ್ಯಾಂಕ್‌ನ ATM ಗಳಲ್ಲಿ ತಿಂಗಳ ಮೊದಲ 5 ವ್ಯವಹಾರಗಳು (ಆರ್ಥಿಕ ಮತ್ತು ಆರ್ಥಿಕೇತರ) ಮತ್ತು ಇತರೆ ಬ್ಯಾಂಕುಗಳ ATM ಗಳಲ್ಲಿ ತಿಂಗಳ ಮೊದಲ 3 ವ್ಯವಹಾರಗಳು (ಆರ್ಥಿಕ ಮತ್ತು ಆರ್ಥಿಕೇತರ) ಉಚಿತವಾಗಿರುತ್ತದೆ. ಎಲ್ಲಾ ಸದಸ್ಯರುಗಳು / ಠೇವಣಿದಾರರುಗಳು ATM Card ಗಳನ್ನು ಪಡೆಯಲು ಕೋರಿದೆ.

ಬ್ಯಾಂಕು ಪ್ರಧಾನ ಕಛೇರಿ, ಜಯನಗರ, ಯಲಹಂಕ, ಕೋಣನಕುಂಟೆ, ವಿಜಯನಗರ, ಪದ್ಮನಾಭನಗರ, ಟಿ. ದಾಸರಹಳ್ಳಿ ಮತ್ತು ಸಂಜಯನಗರ ಶಾಖೆಗಳಲ್ಲಿ ತನ್ನದೇ ATM ಯಂತ್ರಗಳನ್ನು ಅಳವಡಿಸಿದ್ದು ಗ್ರಾಹಕರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಲು ಕೋರಿದೆ.

ಬ್ಯಾಂಕು ಗ್ರಾಹಕ ಸೇವೆ ಉತ್ತಮಪಡಿಸುವ ನಿಟ್ಟಿನಲ್ಲಿ Dombivali Nagarik Sahakari Bank, ಪುಣೆ ರವರ ಸಹಕಾರದೊಂದಿಗೆ BBPS ಸೌಲಭ್ಯ ಅಳವಡಿಸಿಕೊಂಡಿದ್ದು ಗ್ರಾಹಕರು ತಮ್ಮ ವಿದ್ಯುತ್ ಬಿಲ್ಲು, ಅಡುಗೆ ಅನಿಲ ಬಿಲ್ಲು, ನೀರಿನ ಬಿಲ್ಲು, ದೂರವಾಣಿ ಬಿಲ್ಲು, ಮನೆ ಕಂದಾಯ ಮತ್ತು ವಿಮೆ ಕಂತು ಇತ್ಯಾದಿಗಳನ್ನು ಸುಲಭವಾಗಿ ನಮ್ಮ ಬ್ಯಾಂಕಿನ ಮೂಲಕ ಪಾವತಿಸಬಹುದಾಗಿದ್ದು ಸದರಿ ಸೌಲಭ್ಯವನ್ನು ಉಪಯೋಗಿಸಿಕೊಳ್ಳಲು ಕೋರಿದೆ.

ಬ್ಯಾಂಕು ಭಾರತೀಯ ರಿಸರ್ವ್ ಬ್ಯಾಂಕಿನ ಅನುವತಿಯೊಂದಿಗೆ Mobile Banking ಮತ್ತು UPI ಸೌಲಭ್ಯ ಒದಗಿಸುತ್ತಿದ್ದು ಗ್ರಾಹಕರು ಈ ಸೌಲಭ್ಯ ಪಡೆಯಲು ಕೋರಿದೆ.

**31. CTS (Cheque Truncation System) ಅಳವಡಿಕೆ :**

2012–13ರ ಸಾಲಿನಲ್ಲಿ ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಸುಗಮ ಚೆಕ್ಕುಗಳ ಕ್ಲಿಯರಿಂಗ್ ವ್ಯವಸ್ಥೆಗೆ ಸಂಬಂಧಿಸಿದಂತೆ CTS (Cheque Truncation System) ಜಾರಿ ಮಾಡಿದ್ದು, ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ಸದರಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಬ್ಯಾಂಕು ಈ ಸಂಬಂಧದಲ್ಲಿ ವಿ ಸಾಫ್ಟ್ ಟೆಕ್ನಾಲಜೀಸ್, ಹೈದರಾಬಾದ್ ಮತ್ತು ಇಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಸಹಯೋಗದೊಂದಿಗೆ CTS ಕಾರ್ಯವೆಸಗಲಾಗುತ್ತಿದೆ ಎಂದು ತಿಳಿಸಲು ಇಚ್ಛಿಸುತ್ತೇವೆ.

**32. ಖಾತಾದಾರರ ಹೆಸರಿನೊಂದಿಗೆ (Personalized Cheque) ಚೆಕ್ಕು ನೀಡುವ ಸೌಲಭ್ಯ :**

ಉತ್ತಮ ಗ್ರಾಹಕ ಸೇವೆ ಒದಗಿಸುವ ನಿಟ್ಟಿನಲ್ಲಿ ಬ್ಯಾಂಕಿನ ಎಲ್ಲಾ ಖಾತೆದಾರರಿಗೆ ಕೇಳಿದ ಕೂಡಲೆ ಖಾತಾದಾರರ ಹೆಸರು ಮುದ್ರಿಸಿ (Personalized Cheque) ಚೆಕ್ಕು ಪುಸ್ತಕ ನೀಡಲು ಅವಶ್ಯ ಸಾಫ್ಟ್‌ವೇರ್/ಮುದ್ರಣ ಯಂತ್ರಗಳನ್ನು ಎಲ್ಲಾ ಶಾಖೆಗಳಲ್ಲಿ ಅಳವಡಿಸಿದ್ದು, ಗ್ರಾಹಕರು ಈ ಸೌಲಭ್ಯ ಪಡೆಯಲು ಕೋರಿದೆ.

**33. ಉತ್ತಮ ಗ್ರಾಹಕರನ್ನು ಸನ್ಮಾನಿಸುವ ಸಂಪ್ರದಾಯ ಅಳವಡಿಕೆ :**

ಬ್ಯಾಂಕ್ 118 ವರ್ಷಗಳಿಗೂ ಮೀರಿ ಬ್ಯಾಂಕಿಂಗ್ ಸೇವೆಯನ್ನು ಸಲ್ಲಿಸುತ್ತಿರುವುದು ಪ್ರಶಂಸನೀಯ. ಬ್ಯಾಂಕ್ ತನ್ನ ಗ್ರಾಹಕರ ಸಹಕಾರ ಮತ್ತು ಬೆಂಬಲದಿಂದ ರಾಜ್ಯದ ಅತ್ಯುನ್ನತ ಪಟ್ಟಣ ಸಹಕಾರಿ ಬ್ಯಾಂಕಾಗಿ ಮತ್ತು ರಾಷ್ಟ್ರದ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಒಂದಾಗಿ ಬೆಳೆದು ನಿಂತಿದೆ. ಈ ಸಾಧನೆಗೆ ಸಹಕರಿಸಿದ ಗ್ರಾಹಕರುಗಳಿಗೆ ಕೃತಜ್ಞತೆ ಸಲ್ಲಿಸುವ ಸಲುವಾಗಿ ಉತ್ತಮ ಗ್ರಾಹಕರನ್ನು ಆಯ್ದು ಸನ್ಮಾನಿಸುವ ಸಂಪ್ರದಾಯವನ್ನು ಬ್ಯಾಂಕಿನ ಶತಮಾನೋತ್ಸವ ವರ್ಷ–2007 ರಿಂದ ಅಳವಡಿಸಿಕೊಂಡಿದ್ದು, ರಾಷ್ಟ್ರದ ಸ್ವಾತಂತ್ರ ದಿನಾಚರಣೆ ಮತ್ತು ಗಣರಾಜ್ಯೋತ್ಸವ ದಿನಗಳಂದು ನಡೆಸಲಾಗುತ್ತಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. ಹಾಗೆಯೇ ಬ್ಯಾಂಕಿನ ಸದಸ್ಯರಾಗಿ 50 ವರ್ಷಗಳನ್ನು ಪೂರೈಸಿರುವ ಸದಸ್ಯರುಗಳನ್ನು ಸರ್ವಸದಸ್ಯರ ಸಭೆಯಲ್ಲಿ ಸನ್ಮಾನಿಸುವ ಕಾರ್ಯಕ್ರಮ ಅಳವಡಿಸಿಕೊಂಡಿದ್ದು, ಅಂತಹ ಸದಸ್ಯರುಗಳು ಮುಂಚಿತವಾಗಿ ಬ್ಯಾಂಕಿನ ಆಡಳಿತದ ಗಮನಕ್ಕೆ ತರಲು ಕೋರುತ್ತೇವೆ.

**34. ಸೇಫ್ ಡಿಪಾಸಿಟ್ ಲಾಕರ್‌ಗಳು ಸೌಲಭ್ಯ ಒದಗಿಸಿರುವುದು :**

ಬ್ಯಾಂಕ್ ತನ್ನ ಎಲ್ಲಾ ಶಾಖೆಗಳಲ್ಲಿ ಗ್ರಾಹಕರುಗಳಿಗೆ ಸೇಫ್ ಡಿಪಾಸಿಟ್ ಲಾಕರ್ ಸೌಲಭ್ಯಗಳನ್ನು ಕನಿಷ್ಠ ಬಾಡಿಗೆ ದರಗಳಲ್ಲಿ ಒದಗಿಸಿದೆ. ಬ್ಯಾಂಕಿನ ರಾಮನಗರ ಶಾಖೆ, ಟಿ. ದಾಸರಹಳ್ಳಿ ಶಾಖೆ, ಮೈಸೂರು ಶಾಖೆ, ಅಂಜನಾನಗರ ಶಾಖೆ, ಎಲೆಕ್ಟ್ರಾನಿಕ್ ಸಿಟಿ ಶಾಖೆ ಮತ್ತು ಯಲಹಂಕ ಶಾಖೆಗಳಲ್ಲಿ ಖಾಲಿ ಇರುವ ಸೇಫ್ ಡಿಪಾಸಿಟ್ ಲಾಕರ್‌ಗಳನ್ನು ಭರ್ತಿ ಮಾಡುವ ಸಲುವಾಗಿ ಮೊದಲ ವರ್ಷದ ಬಾಡಿಗೆಯಲ್ಲಿ ಶೇಕಡ 50 ರಷ್ಟು ಸೋಡಿ ನೀಡಲು ತೀರ್ಮಾನಿಸಿದೆ. ಸದಸ್ಯರು ಇದರ ಪ್ರಯೋಜನ ಪಡೆಯಲು ಕೋರುತ್ತೇವೆ.

**35. ಸಿಬ್ಬಂದಿ ಸಂಬಳ ಮತ್ತು ಇತರೆ ಸೌಲಭ್ಯಗಳು :**

ಬ್ಯಾಂಕಿನ ಸಿಬ್ಬಂದಿಯವರುಗಳಿಗೆ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಬೆಂಗಳೂರು ರವರು ಪಟ್ಟಣ ಸಹಕಾರ ಬ್ಯಾಂಕುಗಳ ನೌಕರರುಗಳಿಗೆ ತನ್ನ 9ನೇ ವೇತನ ವರದಿಯಲ್ಲಿ ಶಿಫಾರಸ್ಸು ಮಾಡಿದ ನಮ್ಮ ಬ್ಯಾಂಕಿನ ಆರ್ಥಿಕ ಸ್ಥಿತಿಗಳಿಗೆ ಅನ್ವಯಿಸುವ ವೇತನ ಶ್ರೇಣಿಗಳನ್ನು ದಿನಾಂಕ 01.07.2024 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಿದೆ. ಹಾಗೆಯೇ ಕರ್ನಾಟಕ ರಾಜ್ಯ ಸರ್ಕಾರ ತನ್ನ ನೌಕರರಿಗೆ ಮಂಜೂರು ಮಾಡಿರುವ ದರದಲ್ಲಿ ಮನೆ ಬಾಡಿಗೆ ಭತ್ಯೆ / ತುಟ್ಟಿ ಭತ್ಯೆ / ನಗರ ಪರಿಹಾರ ಭತ್ಯೆಗಳನ್ನು ಸಹ ಮಂಜೂರು ಮಾಡಿದೆ. ಹಾಗೆಯೇ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಬೆಂಗಳೂರು ರವರು ತನ್ನ 7ನೇ ವೇತನ ವರದಿಯಲ್ಲಿ ಶಿಫಾರಸ್ಸು ಮಾಡಿದಂತೆ ಸಿಬ್ಬಂದಿಯವರುಗಳು ಸೇವೆಯಿಂದ ನಿವೃತ್ತಿಯಾದ ಮೇಲೆ ನಿವೃತ್ತಿ ವೇತನ ಪಡೆಯುವಂತೆ ಸಹಕಾರಿಯಾಗಲು ಬಿರ್ಲಾ ಸನ್ ಲೈಫ್ ವಿಮಾ ಕಂಪನಿ ಮತ್ತು ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ ದಿನಾಂಕ 01.09.2012 ರಿಂದ ಜಾರಿಯಾಗುವಂತೆ ಪಿಂಚಣಿ ನಿಧಿಯನ್ನು ಸ್ಥಾಪಿಸಿದ್ದು ಸದರಿ ಯೋಜನೆಗೆ ಸಿಬ್ಬಂದಿಯವರ ಸಂಬಳದಿಂದ ಅವರ ಉಳಿಕೆ ಸೇವಾವಧಿ ಆಧಾರದ ಮೇಲೆ ಮೂಲ ವೇತನದ ಶೇಕಡ 5 ರಷ್ಟು ವೇತನ ಕಡಿತಗೊಳಿಸಿ ಅಷ್ಟೆ ಮೊತ್ತವನ್ನು ಬ್ಯಾಂಕಿನ ವತಿಯಿಂದ ಪಾವತಿಸಲು ಕ್ರಮಕೈಗೊಂಡಿದೆ. ಈ ವೆಚ್ಚಗಳು ಆದಾಯ ತೆರಿಗೆ ನಿಯಮಾವಳಿಗಳನ್ವಯ Allowable ಖರ್ಚುಗಳಾಗಿದ್ದು ಆದಾಯ ತೆರಿಗೆ ಹೊರೆ ಕಡಿಮೆಯಾಗುವುದರೊಂದಿಗೆ ಸಿಬ್ಬಂದಿಗಳ ಸಾಮಾಜಿಕ ಭದ್ರತೆ ಸಾಧಿಸಿದಂತಾಗಿದೆ ಎಂದು ತಿಳಿಸಲು ಇಚ್ಛಿಸುತ್ತೇವೆ.

ಬ್ಯಾಂಕಿನ ಆಡಳಿತ ಕಛೇರಿ ಮತ್ತು ಪ್ರಧಾನ ಕಛೇರಿ ಆವರಣಗಳ ಶುಭ್ರತೆ ಮತ್ತು ಇನ್ನಿತರ ಅಗತ್ಯಗಳಿಗಾಗಿ ಐದು ಮಂದಿ ಸಿಬ್ಬಂದಿಗಳನ್ನು ಹೌಸ್ ಕೀಪಿಂಗ್ ಉದ್ದೇಶ ಮೆ॥ ವಿ ಅಂಡ್ ವಿ ಅಸೋಸಿಯೇಟ್ಸ್, ಬೆಂಗಳೂರು ರ ಮೂಲಕ ನೇಮಕ ಮಾಡಿಕೊಂಡಿದ್ದು ವರ್ಷಾಂತ್ಯದಲ್ಲಿ ಮುಂದುವರೆದಿದ್ದು, ಪ್ರತಿ ಸಿಬ್ಬಂದಿಗೆ ಆರೋಗ್ಯ ವಿಮೆ, ಭವಿಷ್ಯ ನಿಧಿ ವೆಚ್ಚ ಸೇರಿದಂತೆ ಮಾಸಿಕ ರೂ.19,172.30 ಗಳ ವೆಚ್ಚ ಭರಿಸಲಾಗಿದೆ.

ಬ್ಯಾಂಕು ಕರ್ನಾಟಕ ರಾಜ್ಯ ಸರ್ಕಾರದಿಂದ, ಸಹಕಾರ ಸಂಘಗಳ ನಿಬಂಧಕರುಗಳಿಂದ ಆಗಾಗ್ಗೆ ಹೊರಡಿಸಿರುವ ಆದೇಶಗಳಂತೆ 225 ವಿವಿಧ ಹುದ್ದೆಗಳ ಮಂಜೂರಾತಿಯನ್ನು ಪಡೆದುಕೊಂಡಿದೆ. ನಂತರದ ದಿನಗಳಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯು ಜ್ಞಾನಜ್ಯೋತಿನಗರ, ಹೆಚ್.ಆರ್.ಬಿ.ಆರ್.ಲೇಔಟ್, ಕೃಷ್ಣರಾಜಪುರಂ ಮತ್ತು ರಾಮನಗರ ಜಿಲ್ಲಾ ಕೇಂದ್ರಗಳಲ್ಲಿ ಶಾಖೆಗಳನ್ನು ತೆರೆದಿದ್ದು ಈ ಶಾಖೆಗಳಿಗೆ ಅವಶ್ಯಕ ಸಿಬ್ಬಂದಿ ಒದಗಿಸುವ ಸಲುವಾಗಿ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳಲ್ಲಿ ಅವಕಾಶ ವಿರುವಂತೆ ದಿನಾಂಕ 22.09.2013 ರಂದು ನಡೆದ ಸರ್ವಸದಸ್ಯರ ಸಭೆಯ ಆಯವ್ಯಯ ಮಂಜೂರಾತಿಯ ಮಿತಿಗೊಳಪಟ್ಟು ಅಧಿಕ 31 ಹುದ್ದೆಗಳನ್ನು ಸೃಷ್ಟಿಸಿದೆ. ಹಾಗೆಯೇ ಬ್ಯಾಂಕು ಟಿ.ದಾಸರಹಳ್ಳಿ, ಹೊಸೂರು ರಸ್ತೆ-ಎಲೆಕ್ಟ್ರಾನಿಕ್ ಸಿಟಿ, ಯಲಹಂಕ, ಮೈಸೂರು ಕುವೆಂಪುನಗರ ಮತ್ತು ಮಾಗಡಿ ರಸ್ತೆಯ ಅಂಜನಾನಗರ ಶಾಖೆಗಳಿಗೆ ಸಿಬ್ಬಂದಿ ಒದಗಿಸುವ ಸಲುವಾಗಿ ದಿನಾಂಕ 25.09.2016 ರಂದು ನಡೆದ ಸರ್ವಸದಸ್ಯರ ಸಭೆಯು ಅಧಿಕ 30 ಹುದ್ದೆಗಳನ್ನು ಸೃಷ್ಟಿಸಿದೆ.

ಬ್ಯಾಂಕಿನ 22ನೇ ಶಾಖೆಯನ್ನು ಬೆಂಗಳೂರು ನಗರದ ಕನಕಪುರ ರಸ್ತೆಯ ಕೋಣನಕುಂಟೆಯಲ್ಲಿ ದಿನಾಂಕ 27.08.2017 ರಂದು ಪ್ರಾರಂಭಿಸಲಾಗಿದ್ದು, ಈ ಶಾಖೆಗೆ ಸಂಬಂಧಿಸಿದಂತೆ ಐದು ಸಿಬ್ಬಂದಿ ಹುದ್ದೆಗಳನ್ನು ಸೃಷ್ಟಿಸಿದ್ದು ಸರ್ಕಾರ ಅನುಮತಿ ನೀಡಿದೆ.

ಬ್ಯಾಂಕಿನ ಸಿಬ್ಬಂದಿಯವರಲ್ಲಿ ವೃತ್ತಿ ಪರತೆ ಮತ್ತು ಕೆಲಸದಲ್ಲಿ ನೈಪುಣ್ಯತೆ ಹೆಚ್ಚಿಸುವ ದೃಷ್ಟಿಯಿಂದ ಅವರುಗಳು ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಪರೀಕ್ಷೆ ತೆಗೆದುಕೊಂಡು ತೇರ್ಗಡೆ ಹೊಂದಿದಲ್ಲಿ ಅವರುಗಳಿಗೆ ವಿಶೇಷ ಭತ್ಯೆ ಮಂಜೂರು ಮಾಡಲಾಗುತ್ತದೆ.

ಬ್ಯಾಂಕಿನ ಸಿಬ್ಬಂದಿಯವರಲ್ಲಿ ಸಮತಾಭಾವನೆ ಮತ್ತು ಐಕ್ಯತೆ ತರುವ ನಿಟ್ಟಿನಲ್ಲಿ ಎಲ್ಲಾ ಸಿಬ್ಬಂದಿಯವರುಗಳಿಗೆ ಸಮವಸ್ತ್ರ, ಸಹಾಯಕ ಲೆಕ್ಕ ಲೇಖಕರುಗಳು ಮತ್ತು ಮೇಲ್ಪಟ್ಟ ಅಧಿಕಾರಿಗಳಿಗೆ ಕೋಟುಗಳನ್ನು ನೀಡಲಾಗಿದೆ.

ಸಿಬ್ಬಂದಿಯವರುಗಳಿಗೆ ನಗದು ರೂಪದಲ್ಲಿ ನೀಡುತ್ತಿದ್ದ ವೈದ್ಯಕೀಯ ಭತ್ಯೆಗೆ ಬದಲಾಗಿ ಸಿಬ್ಬಂದಿಯ ಕುಟುಂಬದ ಸದಸ್ಯರನ್ನೊಳಗೊಂಡಂತೆ ರೂ. 2.00 ಲಕ್ಷಗಳವರವಿಗೆ ಗುಂಪು ವೈದ್ಯಕೀಯ ವಿಮೆ ಸೌಲಭ್ಯ (Group Mediclaim Policy) ಅಳವಡಿಸಿದೆ.

2024-25ರ ಸಾಲಿನಲ್ಲಿ ಸಿಬ್ಬಂದಿ ವೆಚ್ಚಗಳು ದುಡಿಯುವ ಬಂಡವಾಳದ ಶೇಕಡ 1.42 ರಷ್ಟಿದ್ದು ಸಹಕಾರ ಸಂಘಗಳ ನಿಬಂಧಕರುಗಳು ನಿಗದಿಪಡಿಸಿದ ಮಿತಿಯಲ್ಲಿದ್ದು ಮಾನ್ಯ ಸದಸ್ಯರುಗಳು ಅನುಮೋದಿಸಬೇಕೆಂದು ಕೋರಿದೆ.

ಬ್ಯಾಂಕು ಈಗಾಗಲೇ ಸಹಕಾರ ಸಂಘಗಳ ನಿಬಂಧಕರುಗಳಿಂದ ಅನುಮೋದನೆಗೊಂಡಿರುವ ಸಿಬ್ಬಂದಿ ಸೇವಾ ನಿಯಮಗಳನ್ನು ಅಳವಡಿಸಿಕೊಂಡಿದ್ದು ಬೈಲಾಗಳಲ್ಲಿ ವಿಧಿಸಿರುವ ನಿಯಮಗಳೊಂದಿಗೆ ಸಿಬ್ಬಂದಿ ಸೇವಾ ನಿಯಮಗಳನ್ನು ಮುಂದುವರೆಸಲು, ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ತನ್ನ ನೌಕರರುಗಳಿಗೆ ಮಂಜೂರು ಮಾಡಲಾಗುವ ವೇತನ ಪರಿಷ್ಕರಣೆ, ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ಮಧ್ಯಂತರ ಪರಿಹಾರ ಮತ್ತು ನಗರ ಪರಿಹಾರ ಭತ್ಯೆ ಇತ್ಯಾದಿಗಳನ್ನು ಆಯವ್ಯಯ ಮಂಜೂರಾತಿ ಮಿತಿಯೊಳಗೆ ಮಂಜೂರು ಮಾಡಲು ಸರ್ವಸದಸ್ಯರ ಅನುಮತಿ ಕೋರಿದೆ.

**36. ಕಾನೂನು ಸಲಹೆಗಾರರು/ಸ್ಥಿರಾಸ್ತಿ ಮೌಲ್ಯಮಾಪಕರು/ಆಂತರಿಕ ಲೆಕ್ಕ ಪರಿಶೋಧಕರು/ಮುಖ್ಯ ಸಲಹೆಗಾರರು/ ಮತ್ತಿತರರ ನೇಮಕಗಳನ್ನು ಖಾಯಂಗೊಳಿಸುವ ಬಗ್ಗೆ:**

ಬ್ಯಾಂಕಿನ ಸದಸ್ಯರುಗಳು ಸ್ಥಿರಾಸ್ತಿ ಸಾಲಕ್ಕಾಗಿ ಸಲ್ಲಿಸುವ ಸ್ಥಿರಾಸ್ತಿ ದಾಖಲಾತಿಗಳ ಪರಿಶೀಲನೆಗಾಗಿ ಹಾಗೂ ಇತರೆ ವ್ಯಾಜ್ಯಗಳ ಕಾನೂನು ಸಲಹೆಗಳ ಸಂಬಂಧವಾಗಿ ನೇಮಿಸಿಕೊಂಡಿರುವ ವಕೀಲರುಗಳಾದ ಶ್ರೀಮತಿ ಹೆಚ್.ಆರ್. ಉಮಾದೇವಿ, ಶ್ರೀ ಜಿ. ಸುರೇಶ್, ಶ್ರೀ ಎಸ್. ಕೇಶವರಾವ್, ಶ್ರೀ ಎಸ್. ಪ್ರಮೋದ್, ಶ್ರೀ ಹೆಚ್.ಪಿ. ಮಧು, ಶ್ರೀ ಎಂ. ಶ್ರೀರಾಮರೆಡ್ಡಿ, ಶ್ರೀ ಜಿ. ಚಂದ್ರಶೇಖರಯ್ಯ, ಶ್ರೀ ಆರ್. ಪುರುಷೋತ್ತಮ, ಶ್ರೀ ದೇವಿಪ್ರಸಾದ್ ಶೆಟ್ಟಿ ಹಾಗೂ ಶ್ರೀ ಕೆ.ವಿ. ಲೋಕೇಶ್ ರವರುಗಳನ್ನು, ಸ್ಥಿರಾಸ್ತಿಗಳ ಮೌಲ್ಯ ಮಾಪನಕ್ಕಾಗಿ ನೇಮಿಸಿಕೊಂಡಿರುವ ಸಿವಿಲ್ ಇಂಜಿನಿಯರ್‌ಗಳಾದ ಶ್ರೀ ಎನ್.ಎ.ಆನಂದಕುಮಾರ್, ಶ್ರೀ ಎಂ.ವಿ.ಲಕ್ಷ್ಮಿ ನಾರಾಯಣ, ಶ್ರೀ ಕೆ.ಎಲ್.ರಾಜು, ಶ್ರೀ ರಮೇಶ್ ಬಾಬು ಹಾಗೂ ಶ್ರೀ ಕೆ. ಶ್ರೀನಿವಾಸ್ ರವರನ್ನು, ಬ್ಯಾಂಕ್‌ನ ಸಿವಿಲ್ / ಕೌಂಟರ್ ಇತ್ಯಾದಿ ಮೇಲ್ವಿಚಾರಣಾ ಉದ್ದೇಶಗಳಿಗೆ ಸಿವಿಲ್ ಇಂಜಿನಿಯರ್ ಆಗಿ ಶ್ರೀ ಬಿ.ಎನ್.ಭಾನುಪ್ರಕಾಶ್ ಮತ್ತು ಹೆಚ್.ಲೋಹಿತ್ ರವರುಗಳನ್ನು, ದಿನಾಂಕ 01.09.2024 ರಿಂದ ಅನ್ವಯವಾಗುವಂತೆ ಹನ್ನೊಂದು ತಿಂಗಳ ಅವಧಿಗೆ ಬ್ಯಾಂಕಿನ ಮುಖ್ಯ ಸಲಹೆಗಾರರಾಗಿ ನೇಮಕ ಮಾಡಿರುವ ನಿವೃತ್ತ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಬಿ. ಗಂಗಾಧರ ರವರನ್ನು ಹಾಗೂ 2023-24ನೇ ಸಾಲಿನ ಆಂತರಿಕ ಲೆಕ್ಕ ಪರಿಶೋಧನೆಗಾಗಿ ಚಾರ್ಟರ್ಡ್ ಅಕೌಂಟೆಂಟ್‌ರವರುಗಳಾದ ಮೆ॥ ಲಿಂಗರಾಜು ಅಂಡ್ ಕೋ., ಡಾ.ಆರ್.ರಾಜೇಶ್ವರಿ, ಚಾರ್ಟರ್ಡ್ ಅಕೌಂಟೆಂಟ್, ಮೆ॥ ಕಮಲಾಕ್ಷ ಅಂಡ್ ಅಸೋಸಿಯೇಟ್ಸ್, ಮೆ॥ ಎಂ.ವಿ.ರೆಡ್ಡಿ ಅಂಡ್ ಅಸೋಸಿಯೇಟ್ಸ್, ಮೆ॥ ಎಂ.ಯು.ವಿ ಅಂಡ್ ಕೋ., ಮೆ॥ ಗೀತಾ ಚಂದ್ರಕಾಂತ್ ಅಂಡ್ ಕೋ ರವರುಗಳನ್ನು, ಚಾರ್ಟರ್ಡ್ ಅಕೌಂಟೆಂಟ್‌ರವರಾದ ಮೆ॥ ಎಂ.ಎಸ್.ಎಸ್.ವಿ ಅಂಡ್ ಕೋ., ರವರನ್ನು ಆದಾಯ ತೆರಿಗೆ ಸಲಹೆಗಾರರಾಗಿ, ಚಾರ್ಟರ್ಡ್ ಅಕೌಂಟೆಂಟ್, ಮೆ॥ ಲಿಂಗರಾಜು ಅಂಡ್ ಕೋ., ರವರನ್ನು ಜಿ.ಎಸ್.ಟಿ ಸಂಬಂಧ ಸಲಹೆಗಾರರಾಗಿ, ಸುಸ್ತಿ ಸಾಲ ವಸೂಲಾತಿಗೆ ಸಂಬಂಧಿಸಿದಂತೆ ವಶಪಡಿಸಿಕೊಳ್ಳುವ ಚರಾಸ್ತಿಗಳ ಮೌಲ್ಯ ಮಾಡಲು ಮೆ॥ ಎಸ್.ಕೆ. ಅಸೋಸಿಯೇಟ್ಸ್, ಬೆಂಗಳೂರು ರವರನ್ನು ಬ್ಯಾಂಕಿನ ಆಡಳಿತ ಮಂಡಳಿಯು ನೇಮಿಸಿಕೊಂಡಿದ್ದು, ಈ ನೇಮಕಾತಿಗಳನ್ನು ಅನುಮೋದಿಸಲು ಸರ್ವಸದಸ್ಯರ ಮಹಾಸಭೆಯ ಅಂಗೀಕಾರ ಕೋರಿದೆ.

**37. ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಬಗ್ಗೆ :**

ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅನ್ವಯವಾಗುವಂತೆ ತಿದ್ದುಪಡಿಗೊಂಡ ಬ್ಯಾಂಕಿಂಗ್ ಕಾಯಿದೆ ಅನ್ವಯ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ ಅವರ ಪೂರ್ವಾನುಮತಿಯೊಂದಿಗೆ ಬ್ಯಾಂಕಿನ ಆರ್ಥಿಕ ತಃಖ್ತೆಗಳ ಶಾಸನಬದ್ಧ ಲೆಕ್ಕ ಪರಿಶೋಧನೆ ನಡೆಸಲು ಚಾರ್ಟರ್ಡ್ ಅಕೌಂಟೆಂಟ್‌ರವರುಗಳನ್ನು ನೇಮಕ ಮಾಡಬೇಕಿದೆ.

2025–26ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧನೆ ನಡೆಸಲು ಕೆಳಕಂಡ ಚಾರ್ಟರ್ಡ್ ಅಕೌಂಟೆಂಟ್ ರವರನ್ನು ಆಡಳಿತ ಮಂಡಳಿಯು ಗೊತ್ತುಪಡಿಸಿ ಅನುಮತಿ ಕೋರಿ ಪ್ರಸ್ತಾವನೆಯನ್ನು ಭಾರತೀಯ ರಿಸರ್ವ್ ಬ್ಯಾಂಕಿನವರಿಗೆ ಸಲ್ಲಿಸಲಾಗಿದೆ.

M/s B P S S Y & CO
Chartered Accountant
No. 277, Habitat House Unit 201, 1st Floor
1st Main Road Chamarajpet, Bengaluru-560 018

ಆಡಳಿತ ಮಂಡಳಿಯ ತೀರ್ಮಾನವನ್ನು ಅನುಮೋದಿಸಲು ಸರ್ವಸದಸ್ಯರ ಸಭೆಯನ್ನು ಕೋರಿದೆ.

**38. ಆಡಳಿತ ಮಂಡಳಿಗೆ ನಿರ್ದೇಶಕರುಗಳ ಚುನಾವಣೆ ಮತ್ತು ವೃತ್ತಿಪರ ನಿರ್ದೇಶಕರುಗಳನ್ನು ಕೋ–ಆಪ್ಟ್ ಮಾಡಿರುವುದು**

ದಿನಾಂಕ 05.01.2025 ರಂದು ಮುಂದಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಳಿ ನಿರ್ದೇಶಕರುಗಳ ಚುನಾವಣೆ ನಡೆದು ಕೆಳಕಂಡಂತೆ ನಿರ್ದೇಶಕರುಗಳು ಚುನಾಯಿತರಾಗಿದ್ದು, ನೂತನ ಆಡಳಿತ ಮಂಡಳಿ ಕಾರ್ಯವೆಸಗುತ್ತಿದೆ.

| ಸಾಮಾನ್ಯ ಸ್ಥಾನ |
|---|
| ಶ್ರೀ ಆವಲಹಳ್ಳಿ ಚಂದ್ರಪ್ಪ.ಆರ್ |
| ಡಾ॥ ದೇವರಾಜ್.ಟಿ.ಎಂ |
| ಶ್ರೀ ಆಂಜನಪ್ಪ |
| ಶ್ರೀ ಕೃಷ್ಣಪ್ಪ.ಕೆ |
| ಶ್ರೀ ಚಿಕ್ಕಣ್ಣಯ್ಯ ಕೆ ಸಿ |
| ಶ್ರೀಮತಿ. ಪಂಕಜ ಹನುಮಂತಯ್ಯ |
| ಶ್ರೀ ರಾಧಕೃಷ್ಣ ಎನ್ |
| ಶ್ರೀ ರಘುನಾಥ್.ಸಿ |
| ಶ್ರೀ ಸುರೇಶ್.ಕೆ.ಪಿ |

| ಹಿಂದುಳಿದ ಪ್ರವರ್ಗ 'ಎ' ಮೀಸಲು ಸ್ಥಾನ |
|---|
| ಶ್ರೀ ಬಸವರಾಜು (ಅವಿರೋಧ ಆಯ್ಕೆ) |
| ಹಿಂದುಳಿದ ಪ್ರವರ್ಗ 'ಬಿ' ಮೀಸಲು ಸ್ಥಾನ |
| ಶ್ರೀ ನಾರಾಯಣಪ್ಪ ಬಿ.ಆರ್ (ಅವಿರೋಧ ಆಯ್ಕೆ) |
| **ಮಹಿಳಾ ಮೀಸಲು ಸ್ಥಾನ** |
| ಶ್ರೀಮತಿ.ಅಶ್ವಿನಿ ಸತೀಶ್ |
| ಕುಮಾರಿ.ಮೀನಾಕುಮಾರಿ.ಕೆ.ಪಿ |
| **ಪರಿಶಿಷ್ಟ ಜಾತಿ ಮೀಸಲು ಸ್ಥಾನ** |
| ಶ್ರೀ ವೆಂಕಟೇಶ್ |
| **ಪರಿಶಿಷ್ಟ ಪಂಗಡ ಮೀಸಲು ಸ್ಥಾನ** |
| ಶ್ರೀ ಹನುಮಂತಪ್ಪ.ಟಿ.ವಿ (ಅವಿರೋಧ ಆಯ್ಕೆ) |

ನೂತನ ಆಡಳಿತ ಮಂಡಳಿ ಅವಧಿಗೆ ಶ್ರೀ. ಕೆ.ಶಿವಣ್ಣ, ಬಿ.ಕಾಂ., ಎಲ್.ಎಲ್.ಬಿ., ಸಿ.ಎ.ಐ.ಐ.ಬಿ, ನಿವೃತ್ತ ಚೀಫ್ ಮ್ಯಾನೇಜರ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ರವರು ಮತ್ತು ಶ್ರೀ. ಯತೀಶ್.ಬಿ, ಬಿ.ಎ.ಬಿ.ಎಲ್., ವಕೀಲರು ರವರುಗಳನ್ನು ವೃತ್ತಿಪರ ನಿರ್ದೇಶಕರಾಗಿ ಕೋ–ಆಪ್ಟ್ ಮಾಡಲಾಗಿದೆ ಎಂದು ತಿಳಿಸಲು ಇಚ್ಛಿಸುತ್ತೇವೆ.

**39. ವ್ಯವಸ್ಥಾಪನಾ ಸಮಿತಿ (Board of Management) ರಚನೆ :**

ಭಾರತೀಯ ರಿಸರ್ವ್ ಬ್ಯಾಂಕಿನವರು ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ವಹಣೆಯಲ್ಲಿ ವೃತ್ತಿಪರತೆ ತರುವ ನಿಟ್ಟಿನಲ್ಲಿ ಅರ್ಹ ವಿದ್ಯಾರ್ಹತೆ ಹೊಂದಿರುವ ವ್ಯಕ್ತಿಗಳಿರುವ ವ್ಯವಸ್ಥಾಪನಾ ಸಮಿತಿ (Board of Management) ಹೊಂದಿರಬೇಕೆಂದು ನಿರ್ದೇಶಿಸಿದ ಹಿನ್ನಲೆಯಲ್ಲಿ ಬ್ಯಾಂಕಿನ ಬೈಲಾ ಅನುಮೋದನೆ ಪಡೆದಿದೆ. ಬ್ಯಾಂಕು ಕೆಳಕಂಡ ಸದಸ್ಯರನ್ನೊಳಗೊಂಡ ವ್ಯವಸ್ಥಾಪನಾ ಸಮಿತಿಯನ್ನು ಆಡಳಿತ ಮಂಡಳಿಯು ರಚಿಸಿದ್ದು ಅನುಮೋದನೆಗಾಗಿ ಪ್ರಸ್ತಾವನೆಯನ್ನು ಭಾರತೀಯ ರಿಸರ್ವ್ ಬ್ಯಾಂಕಿಗೆ ಸಲ್ಲಿಸಲಾಗಿದೆ ಮತ್ತು ರಚನೆಯಾಗಿರುವ ವ್ಯವಸ್ಥಾಪನಾ ಸಮಿತಿಯು ಬೈಲಾ ನಿಯಮಗಳಲ್ಲಿ ಉಲ್ಲೇಖಿಸಿರುವ ಕರ್ತವ್ಯಗಳನ್ನು ನಿರ್ವಹಿಸುತ್ತಿದೆ ಎಂದು ಸದಸ್ಯರ ಗಮನಕ್ಕೆ ತರಲು ಇಚ್ಛಿಸುತ್ತೇವೆ.

**ಆಡಳಿತ / ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳು**

1. **Sri. Raghunath C, BAL LLB,**
   Director of this bank since 23.05.2011 and Practicing Advocate — **Chairman**
2. **Sri. Shivanna K, B.Com., LLB., C.A.I.I.B,**
   Retd. Chief Manager (SBM) SBI.
   Co-opted Professional Director of this bank since 21.11.2014. — **Member**
3. **Sri. Muniraju R, BSc., LLB,** — **Member**
   Director in Sri Vayutanaya Co-operative Society Ltd., Bangalore
4. **Smt. Hampana C, B.E., in Information Science** — **Member**
   Intern in BARICODE Company. — **(ದಿನಾಂಕ 04.01.2025**
   Asst. Professor & Academic Coordinator at — **ರವರೆಗೆ)**
   "Trisha PU College". Lecturer at BES Institute of Technology.
5. **Smt. Chaitra .M.T** — **Member**
   BE in Information Sceince MBA — **(ದಿನಾಂಕ 20.01.2025**
   Sr. Customer Success Manager — **ರಿಂದ)**
   Sprinter India Pvt., Ltd., Bangalore
6. **Sri. Yathish B, LLB,**
   Practicing Advocate — **Member**
7. **Sri. Arunkumar.R, B.Com.,**
   MBA in Finance — **Member**
8. **Sri. Manjunatha.P, B.Com., ADCB**
   General Manager (I/c) — **Non-Voting Member**

**40. ಸಭೆಗಳು :**

2024–25ನೇ ಸಾಲಿನಲ್ಲಿ 27 (ಇಪ್ಪತ್ತೇಳು) ಆಡಳಿತ ಮಂಡಳಿ ಸಭೆಗಳು ನಡೆದಿರುತ್ತವೆ ಮತ್ತು ಬ್ಯಾಂಕಿನ ಕೆಲವು ಪ್ರಮುಖ ಕೆಲಸಗಳ ನಿರ್ವಹಣೆಗಾಗಿ ಈ ಕೆಳಕಂಡ ಮಂಡಳಿ ಉಪಸಮಿತಿಗಳೂ ಸಹ ಕಾರ್ಯ ನಿರ್ವಹಿಸಿರುತ್ತವೆ.

| ಉಪಸಮಿತಿಗಳ ಹೆಸರು ಮತ್ತು ಸದಸ್ಯರುಗಳು | 2024–25ರ ಸಾಲಿನಲ್ಲಿ ನಡೆದ ಒಟ್ಟು ಸಭೆಗಳು |
|---|---|
| **1) ಗಣಕೀಕರಣ (Computerisation) ಉಪಸಮಿತಿ**<br>**(ದಿನಾಂಕ 04.01.2025 ರವರೆಗೆ)**<br>ಶ್ರೀ ಆವಲಹಳ್ಳಿ ಚಂದ್ರಪ್ಪ. ಆರ್, ಅಧ್ಯಕ್ಷರು, ಡಾ॥ ದೇವರಾಜ್.ಟಿ.ಎಂ,<br>ಶ್ರೀ ಚಿಕ್ಕಣ್ಣಯ್ಯ ಕೆ.ಸಿ, ಶ್ರೀ ರಘುನಾಥ್.ಸಿ ಮತ್ತು ಶ್ರೀ ಆಂಜನಪ್ಪ<br>**(ದಿನಾಂಕ 20.01.2025 ರ ನಂತರ)**<br>ಶ್ರೀ ಆವಲಹಳ್ಳಿ ಚಂದ್ರಪ್ಪ.ಆರ್, ಅಧ್ಯಕ್ಷರು, ಡಾ॥ ದೇವರಾಜ್.ಟಿ.ಎಂ<br>ಶ್ರೀಮತಿ. ಪಂಕಜ ಹನುಮಂತಯ್ಯ, ಶ್ರೀ ಚಿಕ್ಕಣ್ಣಯ್ಯ.ಕೆ.ಸಿ ಮತ್ತು ಶ್ರೀ ರಘುನಾಥ್.ಸಿ | **5 (ಐದು) ಸಭೆಗಳು** |
| **2) ಮರಮುಟ್ಟು ಪೀಠೋಪಕರಣ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ಉಪಸಮಿತಿ**<br>**(ದಿನಾಂಕ 04.01.2025 ರವರೆಗೆ)**<br>ಶ್ರೀ ಆವಲಹಳ್ಳಿ ಚಂದ್ರಪ್ಪ ಆರ್, ಅಧ್ಯಕ್ಷರು, ಡಾ॥ ದೇವರಾಜ್.ಟಿ.ಎಂ,<br>ಶ್ರೀ ಕೃಷ್ಣಪ್ಪ ಕೆ, ಶ್ರೀ ಬಸವರಾಜು ಮತ್ತು ಶ್ರೀ ಸುರೇಶ್ ಕೆ.ಪಿ.<br>**(ದಿನಾಂಕ 20.01.2025 ರ ನಂತರ)**<br>ಶ್ರೀ ಆವಲಹಳ್ಳಿ ಚಂದ್ರಪ್ಪ.ಆರ್, ಅಧ್ಯಕ್ಷರು, ಡಾ॥ ದೇವರಾಜ್.ಟಿ.ಎಂ<br>ಶ್ರೀ ಕೃಷ್ಣಪ್ಪ.ಕೆ, ಶ್ರೀ ಸುರೇಶ್.ಕೆ.ಪಿ, ಶ್ರೀ ಆಂಜನಪ್ಪ | **4 (ನಾಲ್ಕು) ಸಭೆಗಳು** |
| **3) ಸುಸ್ತಿ ಸಾಲಗಳ ವಸೂಲಾತಿ ಉಪಸಮಿತಿ :**<br>**(ದಿನಾಂಕ 04.01.2025 ರವರೆಗೆ)**<br>ಶ್ರೀ ಆವಲಹಳ್ಳಿ ಚಂದ್ರಪ್ಪ.ಆರ್, ಅಧ್ಯಕ್ಷರು, ಶ್ರೀ ನಾರಾಯಣಪ್ಪ ಬಿ.ಆರ್,<br>ಶ್ರೀಮತಿ ವಿಜಯ ಜಿ.ಎಸ್, ಕು. ಮೀನಾಕುಮಾರಿ ಕೆ.ಪಿ ಮತ್ತು ಶ್ರೀ ಹನುಮಂತಪ್ಪ ಟಿವಿ<br>**(ದಿನಾಂಕ 20.01.2025 ರ ನಂತರ)**<br>ಶ್ರೀ ಆವಲಹಳ್ಳಿ ಚಂದ್ರಪ್ಪ.ಆರ್, ಅಧ್ಯಕ್ಷರು, ಶ್ರೀ ನಾರಾಯಣಪ್ಪ.ಬಿ.ಆರ್, ಶ್ರೀಮತಿ. ಅಶ್ವಿನಿ ಸತೀಶ್, ಕುಮಾರಿ ಮೀನಾಕುಮಾರಿ ಕೆ.ಪಿ, ಶ್ರೀ ರಾಧಾಕೃಷ್ಣ.ಎನ್ | **11 (ಹನ್ನೊಂದು) ಸಭೆಗಳು** |
| **4) ಲೆಕ್ಕ ಪರಿಶೋಧನಾ ಉಪಸಮಿತಿ :**<br>**(ದಿನಾಂಕ 04.01.2025 ರವರೆಗೆ)**<br>ಶ್ರೀ ಆವಲಹಳ್ಳಿ ಚಂದ್ರಪ್ಪ.ಆರ್, ಅಧ್ಯಕ್ಷರು, ಶ್ರೀ ಶಿವಣ್ಣ .ಕೆ, ಶ್ರೀ ಹನುಮದಾಸಯ್ಯ,<br>ಶ್ರೀ ಎನ್. ರಾಧಕೃಷ್ಣ ಮತ್ತು ಶ್ರೀ ಯತೀಶ್.ಬಿ<br>**(ದಿನಾಂಕ 20.01.2025 ರ ನಂತರ)**<br>ಶ್ರೀ ಆವಲಹಳ್ಳಿ ಚಂದ್ರಪ್ಪ.ಆರ್, ಅಧ್ಯಕ್ಷರು, ಶ್ರೀ ಶಿವಣ್ಣ.ಕೆ, ಶ್ರೀ ವೆಂಕಟೇಶ್<br>ಶ್ರೀ ಬಸವರಾಜು ಮತ್ತು ಶ್ರೀ ಯತೀಶ್.ಬಿ | **9 (ಒಂಬತ್ತು) ಸಭೆಗಳು** |
| **5) ವ್ಯವಸ್ಥಾಪನಾ ಉಪಸಮಿತಿ :**<br>**(ದಿನಾಂಕ 04.01.2025 ರವರೆಗೆ)**<br>ಶ್ರೀ ರಘುನಾಥ್.ಸಿ, ಛೇರ್‌ಮಾನ್, ಶ್ರೀ ಶಿವಣ್ಣ .ಕೆ, ಶ್ರೀ ಮುನಿರಾಜು.ಆರ್, ಶ್ರೀಮತಿ. ಹಂಪನ.ಸಿ, ಶ್ರೀ ಯತೀಶ್.ಬಿ ಮತ್ತು ಶ್ರೀ ಅರುಣ್‌ಕುಮಾರ್.ಆರ್<br>**(ದಿನಾಂಕ 20.01.2025 ರ ನಂತರ)**<br>ಶ್ರೀ ರಘುನಾಥ್.ಸಿ, ಛೇರ್‌ಮಾನ್, ಶ್ರೀ ಶಿವಣ್ಣ ಕೆ., ಶ್ರೀ ಮುನಿರಾಜು.ಆರ್,<br>ಶ್ರೀಮತಿ.ಚೈತ್ರ. ಎಂ.ಟಿ, ಶ್ರೀ ಯತೀಶ್.ಬಿ ಮತ್ತು ಶ್ರೀ ಅರುಣ್‌ಕುಮಾರ್.ಆರ್ | **23 (ಇಪ್ಪತ್ಮೂರು) ಸಭೆಗಳು** |

| | |
|---|---|
| **6) ವಂಚನಾ ಪರಿಶೀಲನಾ ಉಪಸಮಿತಿ**<br>**(ದಿನಾಂಕ 04.01.2025 ರವರೆಗೆ)**<br>ಶ್ರೀ ಆವಲಹಳ್ಳಿ ಚಂದ್ರಪ್ಪ ಆರ್, ಅಧ್ಯಕ್ಷರು, ಡಾ॥ ದೇವರಾಜ್.ಟಿ.ಎಂ,<br>ಶ್ರೀ ಶಿವಣ್ಣ .ಕೆ, ಶ್ರೀ ಕೃಷ್ಣಪ್ಪ ಕೆ<br>**(ದಿನಾಂಕ 20.01.2025 ರ ನಂತರ)**<br>ಶ್ರೀ ಆವಲಹಳ್ಳಿ ಚಂದ್ರಪ್ಪ.ಆರ್, ಅಧ್ಯಕ್ಷರು, ಡಾ॥ ದೇವರಾಜ್.ಟಿ.ಎಂ,<br>ಶ್ರೀ ಶಿವಣ್ಣ.ಕೆ ಮತ್ತು ಶ್ರೀ ಯತೀಶ್.ಬಿ | – |
| 7) **OTS ಸಂಬಂಧ ಸಲಹಾ ಸಮಿತಿ**<br>**(ದಿನಾಂಕ 04.01.2025 ರವರೆಗೆ)**<br>ಶ್ರೀ ಆವಲಹಳ್ಳಿ ಚಂದ್ರಪ್ಪ .ಆರ್, ಅಧ್ಯಕ್ಷರು, ಡಾ॥ ದೇವರಾಜ್.ಟಿ.ಎಂ,<br>ಶ್ರೀ ಶಿವಣ್ಣ ಕೆ, ಶ್ರೀ ಮಂಜುನಾಥ.ಪಿ, ಪ್ರಧಾನ ವ್ಯವಸ್ಥಾಪಕರು<br>ಶ್ರೀ ಅಪ್ಪಾಜಯ್ಯ.ಸಿ.ಎನ್, ಉಪ ಪ್ರಧಾನ ವ್ಯವಸ್ಥಾಪಕರು<br>**(ದಿನಾಂಕ 20.01.2025 ರ ನಂತರ)**<br>ಶ್ರೀ ಆವಲಹಳ್ಳಿ ಚಂದ್ರಪ್ಪ.ಆರ್, ಅಧ್ಯಕ್ಷರು, ಡಾ॥ ದೇವರಾಜ್.ಟಿ.ಎಂ,<br>ಶ್ರೀ ಶಿವಣ್ಣ.ಕೆ, ಟಿ.ವಿ.ಹನುಮಂತಪ್ಪ,<br>ಶ್ರೀ ಮಂಜುನಾಥ.ಪಿ, ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ಮತ್ತು<br>ಶ್ರೀ ಅಪ್ಪಾಜಯ್ಯ ಸಿ.ಎನ್, ಉಪ ಪ್ರಧಾನ ವ್ಯವಸ್ಥಾಪಕರು | **1** (ಒಂದು)<br>**ಸಭೆ** |
| **8) ಉದ್ದೇಶ ಪೂರ್ವಕ ಸಾಲ ಸುಸ್ತಿದಾರ ಗುರುತಿಸುವುದಕ್ಕೆ ಉಪಸಮಿತಿ**<br>**(ದಿನಾಂಕ 20.01.2025 ರ ನಂತರ)**<br>ಶ್ರೀ ಮಂಜುನಾಥ.ಪಿ, ಚೇರ್‌ಮನ್, ಶ್ರೀ ಶಿವಣ್ಣ.ಕೆ ಮತ್ತು ಶ್ರೀ ಯತೀಶ್.ಬಿ | **1**<br>**(ಒಂದು)**<br>**ಸಭೆ** |

ಸದಸ್ಯರು ಆಡಳಿತ ಮಂಡಳಿ ಮತ್ತು ಉಪಸಮಿತಿ ಸಭೆಗಳ ವಿವರಗಳನ್ನು ಅನುಮೋದಿಸಬೇಕೆಂದು ಕೋರುತ್ತೇವೆ.

**41. ಆರ್ಥಿಕ ತಃಖ್ತೆಗಳ ಲೆಕ್ಕ ಪರಿಶೋಧನೆ :**

2025ನೇ ಮಾರ್ಚ್ 31ಕ್ಕೆ ಆಖೈರಾದ (ದಿನಾಂಕ 01–04–2024 ರಿಂದ 31–03–2025ರ ಅವಧಿಯ) ಲೆಕ್ಕ ಪತ್ರಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿಯೊಂದಿಗೆ ಆಡಳಿತ ಮಂಡಳಿಯು ನೇಮಿಸಲ್ಪಟ್ಟಿರುವ ಚಾರ್ಟರ್ಡ್ ಅಕೌಂಟೆಂಟ್‌ರವರಾದ ಮೆ॥ ಬಿ.ಪಿ.ಎಸ್.ಎಸ್.ವೈ ಅಂಡ್ ಕೋ., ಬೆಂಗಳೂರುರವರು ಲೆಕ್ಕ ಪರಿಶೋಧನೆ ಮಾಡಿ ಲೆಕ್ಕ ಪರಿಶೋಧಕರ ದೃಢೀಕರಣ ಪತ್ರ (ಪ್ರಮಾಣ ಪತ್ರ) ನೀಡಿರುತ್ತಾರೆ. ಇವರುಗಳ ಲೆಕ್ಕ ಪರಿಶೋಧನಾ ವರದಿಯನ್ನು ಆಡಳಿತ ಮಂಡಳಿಯವರ ಸಮಜಾಯಿಷಿಯೊಂದಿಗೆ ತಮ್ಮಗಳ ಮುಂದೆ ಒಪ್ಪಿಗೆಗಾಗಿ ಮಂಡಿಸಿದ್ದು ಒಪ್ಪಿ ಅನುಮೋದಿಸಬೇಕೆಂದು ಮನವಿ ಮಾಡುತ್ತೇವೆ.

**42. ಭಾರತೀಯ ರಿಸರ್ವ್ ಬ್ಯಾಂಕಿನ ತಪಾಸಣೆ**

ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ 31.03.2024ಕ್ಕೆ ಅನ್ವಯವಾಗುವಂತೆ ಬ್ಯಾಂಕಿನ ತಪಾಸಣೆಯನ್ನು ದಿನಾಂಕ 30.12.2024 ರಿಂದ ದಿನಾಂಕ 15.01.2025 ರವರೆಗೆ ನಡೆಸಿದ್ದು ಸಂಬಂಧಿಸಿದಂತೆ ತಪಾಸಣೆ ವರದಿಯನ್ನು ಬ್ಯಾಂಕಿಗೆ ಸಲ್ಲಿಸಿದ್ದು, ತಪಾಸಣಾ ವರದಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲಾಗಿರುವ ವಿಷಯವನ್ನು ಮಹಾಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇವೆ.

ಭಾರತೀಯ ರಿಸರ್ವ್ ಬ್ಯಾಂಕಿನ ತಪಾಸಣಾಧಿಕಾರಿಗಳು ದಿನಾಂಕ 31.03.2024 ರಂದಿಗೆ ಸಂಸ್ಥೆಯ ನಿವ್ವಳ

ಅನುತ್ಪಾದಕ ಸಾಲಗಳು ಒಟ್ಟು ಸಾಲಕ್ಕೆ ಶೂನ್ಯ ಇರುವುದನ್ನು ದೃಢೀಕರಿಸಲಾಗಿ ಬ್ಯಾಂಕಿಗೆ ವಿಧಿಸಿದ್ದ Supervisory Action Frame Work (SAF) ನಿಯಮವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನವರು ತಮ್ಮ ಪತ್ರ ಸಂಖ್ಯೆ : BLR. DOS.SSMS.No.S114/12.08.012/2025-26, ದಿನಾಂಕ 05.05.2025 ರ ಮೂಲಕ ಹಿಂತೆಗೆದಿರುತ್ತಾರೆ ಎಂದು ತಿಳಿಸಲು ಇಚ್ಛಿಸುತ್ತೇವೆ.

ದಿನಾಂಕ 31.03.2025 ರ ಅಂತ್ಯಕ್ಕೆ ಬ್ಯಾಂಕು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನಗಳ ರೀತ್ಯಾ ಬ್ಯಾಂಕು Financially Sound and Well Managed Bank Status ಪಡೆಯಲು ಅರ್ಹವಾಗಿದ್ದು, ಸದರಿ ಮಾಹಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿನವರಿಗೆ ಸಲ್ಲಿಸಲಾಗಿದೆ ಎಂದು ತಿಳಿಸಲು ಇಚ್ಛಿಸುತ್ತೇವೆ.

**43. ಆಡಳಿತ ಮಂಡಳಿ ಸದಸ್ಯರುಗಳಿಗೆ ಸಂಭಾವನೆ ಇತ್ಯಾದಿ :**

ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರುಗಳ ಮತ್ತು ಪದಾಧಿಕಾರಿಗಳ ಸೇವೆ ಉಚಿತವಾಗಿದೆ. ಆದರೆ ಅವರು ಆಡಳಿತ ಮಂಡಳಿ/ಉಪಸಮಿತಿ ಸಭೆಗಳಿಗೆ ಹಾಜರಾದಾಗ ಬೈಲಾ ನಿಬಂಧನೆಗಳ ರೀತ್ಯಾ ಸಿಟ್ಟಿಂಗ್ ಫೀ ರೂ. 2,000/– ಗಳನ್ನು ಮತ್ತು ಪ್ರಯಾಣ ಭತ್ಯೆ ರೂ. 1,200/– ಗಳನ್ನು ಪಾವತಿಸಲಾಗುತ್ತಿದೆ.

**44. ಸಿಬ್ಬಂದಿ ಭವಿಷ್ಯ ನಿಧಿ ಟ್ರಸ್ಟ್‌ಗೆ ಟ್ರಸ್ಟಿಗಳು:**

ಬ್ಯಾಂಕಿನ ಸಿಬ್ಬಂದಿಯವರ ಭವಿಷ್ಯ ನಿಧಿ ನಿರ್ವಹಣೆಗೆ ಸಂಬಂಧಿಸಿದಂತೆ ಅವಕಾಶಗಳ ರೀತ್ಯಾ ವಿನಾಯಿತಿ ಪಡೆದು ಭವಿಷ್ಯ ನಿಧಿ ಟ್ರಸ್ಟ್ ರಚಿಸಿಕೊಂಡಿದ್ದು, ದಿನಾಂಕ 22.07.2020 ರಿಂದ ದಿನಾಂಕ 21.07.2025ರ ಅವಧಿಗೆ ಅನ್ವಯವಾಗುವಂತೆ ಸದರಿ ಟ್ರಸ್ಟ್‌ಗೆ ಬ್ಯಾಂಕಿನ ಪರವಾಗಿ ಶ್ರೀ ಸಿ.ಎಸ್ ರಮೇಶ್, ಉಪ ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ಮತ್ತು ಶ್ರೀ ಎ.ವಿ. ವಲ್ಲಭರಾಜು, ಲೆಕ್ಕ ಲೇಖಕರು ರವರುಗಳು ಮತ್ತು ಸಿಬ್ಬಂದಿ ಪರವಾಗಿ ಅವಿರೋಧವಾಗಿ ಚುನಾಯಿತರಾಗಿರುವ ಶ್ರೀ ವಿನಯ್ ಎಸ್ ರವರು ಮತ್ತು ಶ್ರೀ ಕುಮಾರ್ ಹೆಚ್.ಸಿ ರವರು ಟ್ರಸ್ಟಿಗಳಾಗಿ ಕಾರ್ಯನಿರ್ವಹಿಸಿರುತ್ತಾರೆ. ಹಾಗೆಯೇ ಶ್ರೀ ಸಿ.ಎನ್. ಶೇಷಾದ್ರಿ, ಸಹಾಯಕ ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ಸದರಿ ಟ್ರಸ್ಟ್‌ನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿರುತ್ತಿರುತ್ತಾರೆ.

**45. ಸಾಮಾಜಿಕ ಕಾರ್ಯಗಳಿಗೆ ಬ್ಯಾಂಕಿನ ವತಿಯಿಂದ ದಾನ ಧರ್ಮಗಳು :**

ಬ್ಯಾಂಕು ಎಂದಿನಿಂದಲೂ ಸಾಮಾಜಿಕ ಕಳಕಳಿಯನ್ನು ಹೊಂದಿ ದೇಶ ವಿಪತ್ತು ಎದುರಿಸಿದ ಸಂದರ್ಭಗಳಲ್ಲಿ ಮತ್ತು ಸಾಮಾಜಿಕ ಕಾರ್ಯಗಳಿಗೆ ಧನಸಹಾಯವನ್ನು ನೀಡುತ್ತಾ ಬಂದಿದ್ದು, ಪ್ರಮುಖ ದಾನದ ವಿವರಗಳು ಕೆಳಕಂಡಂತಿವೆ.

i) 1991–92ರ ಸಾಲಿನಲ್ಲಿ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಸ್ವಂತ ಕಟ್ಟಡ ಹೊಂದಲು ರೂ. 1,00,000/–ಗಳ ದಾನ

ii) 1992–93ರ ಸಾಲಿನಲ್ಲಿ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ವಾರ್ಡ್ ಕಟ್ಟಲು ರೂ. 1,00,000/– ದಾನ

iii) 2002–03 ರಲ್ಲಿ ರಾಜೀವ್‌ಗಾಂಧಿ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಲ್ಲಿ ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲ್ಲೂಕು, ಚೀರನಹಳ್ಳಿ ಗ್ರಾಮಕ್ಕೆ ಕುಡಿಯುವ ನೀರು ಯೋಜನೆಗೆ ರೂ. 60,000/– ದಾನ

iv) 2009–10ರ ಸಾಲಿನಲ್ಲಿ ಉತ್ತರ ಕರ್ನಾಟಕದಲ್ಲಿ ಉಂಟಾದ ಪ್ರವಾಹ ಸಂಬಂಧ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ರೂ. 10,00,000/– ಗಳ ದಾನ

v) 2012–13ರಲ್ಲಿ ಬಡವರ ಹೃದ್ರೋಗ ಚಿಕಿತ್ಸೆ ಸಂಬಂಧ ಜಯದೇವ ಹೃದ್ರೋಗ ಆಸ್ಪತ್ರೆಗೆ ರೂ. 10,00,000/– ಗಳ ದಾನ

vi) 2014–15ರ ಸಾಲಿನಲ್ಲಿ ನೇಪಾಳದ ಭೂಕಂಪ ಸಂತ್ರಸ್ತರಿಗೆ ನೆರವಾಗಲು ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ರೂ. 5,00,000/– ಗಳ ದಾನ

vii) 2017–18ರ ಸಾಲಿನಲ್ಲಿ ಹಿಂದುಳಿದ ಪ್ರದೇಶ ಮಾಗಡಿ ರಸ್ತೆ, ಚಲುವಪ್ಪ ಗಾರ್ಡನ್‌ನಲ್ಲಿ ಕುಡಿಯುವ ನೀರಿನ ಘಟಕಕ್ಕೆ ರೂ. 13,94,900/– ದಾನ

viii) 2018–19ರ ಸಾಲಿನಲ್ಲಿ ಕೊಡಗು ಜಿಲ್ಲಾ ಪ್ರವಾಹ ಸಂಬಂಧ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ. 10,00,000/–ಗಳ ದಾನ

ix) 2018–19ರ ಸಾಲಿನಲ್ಲಿ ಕೇರಳ ರಾಜ್ಯ ಪ್ರವಾಹ ಸಂಬಂಧ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ರೂ. 5,00,000/–ಗಳ ದಾನ

x) 2018–19ರ ಸಾಲಿನಲ್ಲಿ ಬಡ ಶಾಲಾ ಮಕ್ಕಳಿಗೆ ಮಧ್ಯಾಹ್ನ ಊಟ ಸರಬರಾಜು ಮಾಡಲು ಮತ್ತು ಒಂದು ವರ್ಷದ ಅವಧಿಗೆ 500 ಮಕ್ಕಳಿಗೆ ಮಧ್ಯಾಹ್ನ ಊಟ ನೀಡಲು ಬೆಂಗಳೂರಿನ ಇಸ್ಕಾನ್ ದೇವಸ್ಥಾನಕ್ಕೆ ರೂ. 15,34,478/–ಗಳ ದಾನ

xi) 2019–20ರ ಸಾಲಿನಲ್ಲಿ ಉತ್ತರ ಕರ್ನಾಟಕದಲ್ಲಿ ಪ್ರವಾಹ ಸಂಬಂಧ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ. 15,00,000/–ಗಳ ದಾನ

xii) 2020–21 ರ ಸಾಲಿನಲ್ಲಿ ಕೋವಿಡ್–19 ಸಂಬಂಧ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ರೂ. 10,00,000/–ಗಳ ದಾನ

xiii) 2021–22ರ ಸಾಲಿನಲ್ಲಿ ಕೋವಿಡ್–19 ಸಂಬಂಧ ಸಂತ್ರಸ್ತರಿಗೆ ಆಹಾರ ಕಿಟ್ ಒದಗಿಸಲು ರಾಜ್ಯ ಸಹಕಾರ ಮಾರಾಟ ಮಹಾಮಂಡಳಕ್ಕೆ ರೂ. 7,50,000/– ದಾನ

xiv) 2022–23ರ ಸಾಲಿನಲ್ಲಿ ರಾಜ್ಯ ಸರ್ಕಾರವು ಆಯೋಜಿಸಿದ ಸಹಕಾರ ಸಪ್ತಾಹ ಕಾರ್ಯಕ್ರಮಕ್ಕೆ ರೂ. 7,00,000/–ಗಳ ದಾನ ನೀಡಿದೆ.

ಈ ರೀತಿ ದಾನಗಳಿಂದ ಬ್ಯಾಂಕು ಸಾಮಾಜಿಕ ಕಳಕಳಿಯಿಂದ ಹೊರತಾಗಿಲ್ಲ ಎಂದು ತಿಳಿಸಲು ಹರ್ಷಿಸುತ್ತೇವೆ. ದೇಶ ವಿಪತ್ತು ಕಾಣದಿರಲಿ ಮತ್ತು ಸರ್ವ ಜನರು ಸುಖವಾಗಿರಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

**46. 2025–26ರ ಸಾಲಿನಲ್ಲಿ ಸಾಧಿಸಬೇಕೆಂದಿರುವ ಗುರಿ ಹಾಗೂ ಯೋಜನೆಗಳು**

i) ಠೇವಣಾತಿಗಳನ್ನು 2400 ಕೋಟಿ ರೂಪಾಯಿಗಳಿಗೆ, ಸಾಲ ಮತ್ತು ಮುಂಗಡಗಳನ್ನು 1500 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲು ಕ್ರಮವಿಡುವುದು.

ii) ಅವಕಾಶಗಳು ಮತ್ತು ಸವಕಳಿ ನಂತರ ನಿವ್ವಳ ಲಾಭವನ್ನು 32 ಕೋಟಿ ರೂಪಾಯಿಗಳಿಗೆ ಹೆಚ್ಚಿಸುವುದು.

iii) ನಿವ್ವಳ ಅನುತ್ಪಾದಕ ಆಸ್ತಿಗಳನ್ನು ಶೇಕಡ ಶೂನ್ಯರಷ್ಟರ ಮಿತಿಯಲ್ಲಿ ಮುಂದುವರೆಸುವುದು.

iv) ಗ್ರಾಹಕರುಗಳಿಗೆ AEPS ಸೌಲಭ್ಯ ಒದಗಿಸಲು ಕ್ರಮವಹಿಸುವುದು.

v) ಅನುಕೂಲವಿರುವ ಶಾಖೆಗಳಲ್ಲಿ ಸ್ವಂತ ATM ಹೊಂದಲು ಕ್ರಮ ವಹಿಸುವುದು.

vi) ಶಾಖೆಗಳಿಗೆ ಸ್ವಂತ ಕಟ್ಟಡ ಹೊಂದಲು ಕ್ರಮವಿಡುವುದು.

vii) ಸಹಕಾರ ತತ್ವ ಪ್ರಚಾರಕ್ಕಾಗಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

viii) ಸಿಬ್ಬಂದಿಯವರುಗಳು ವೃತ್ತಿ ನೈಪುಣ್ಯತೆ ಹೊಂದಲು ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು.

ix) ಹೆಚ್ಚಿನ ಪ್ರಗತಿ ಸಾಧಿಸಿರುವ ಸಹಕಾರ ಸಂಸ್ಥೆಗಳನ್ನು ಸಂದರ್ಶಿಸಲು ಕಾರ್ಯಕ್ರಮವಿಡುವುದು.

x) ಹೊಸ ಶಾಖೆಗಳನ್ನು ಬೆಂಗಳೂರು ನಗರದ ರಾಜರಾಜೇಶ್ವರಿನಗರ, ಮೈಸೂರು ನಗರದ ವಿಜಯನಗರ ಮತ್ತು ಸಿದ್ಧಾರ್ಥ ಬಡಾವಣೆಗಳಲ್ಲಿ ತೆರೆಯುವುದು.

xi) RBIನಿಂದ Financially Sound and Well Managed Bank ಎಂದು ಪರಿಗಣಿಸಲು ಕ್ರಮವಿಡುವುದು.

**47. ಶಾಖಾ ವಿಸ್ತರಣೆಗಳು**

ಬ್ಯಾಂಕ್ 2025–26ನೇ ಸಾಲಿನಲ್ಲಿ ಬೆಂಗಳೂರು ಮಹಾನಗರದ ರಾಜರಾಜೇಶ್ವರಿ ನಗರ, ಮೈಸೂರು ನಗರದ ವಿಜಯನಗರ ಮತ್ತು ಸಿದ್ದಾರ್ಥ ಬಡಾವಣೆಗಳಲ್ಲಿ ಶಾಖೆಯನ್ನು ತೆರೆಯಲು ಇಚ್ಛಿಸಿದ್ದು ಈ ಸಂಬಂಧ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸರ್ವಸದಸ್ಯರ ಸಭೆಯ ಅನುಮತಿ ಕೋರಿದೆ.

**48. ಕೃತಜ್ಞತೆಗಳು**

ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರಾದ ಎಲ್ಲಾ ಸದಸ್ಯರುಗಳಿಗೆ, ಠೇವಣಿದಾರರುಗಳಿಗೆ, ಗ್ರಾಹಕರುಗಳಿಗೆ, ಕಾಲಕಾಲಕ್ಕೆ ಉಪಯುಕ್ತವಾದ ಸಲಹೆ ಸೂಚನೆಗಳನ್ನು ನೀಡುತ್ತಾ ಬಂದಿರುವ ಸಹಕಾರ ಸಂಘಗಳ ನಿಬಂಧಕರು ಮತ್ತು ಅವರ ಅಧಿಕಾರಿಗಳು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ನಿರ್ದೇಶಕರು ಮತ್ತು ಅವರ ಅಧಿಕಾರಿಗಳು, ಭಾರತೀಯ ರಿಸರ್ವ್ ಬ್ಯಾಂಕ್ ಅಧಿಕಾರಿಗಳಿಗೆ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ರಾಷ್ಟ್ರೀಯ ಹಾಗೂ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರುಗಳಿಗೆ ಬ್ಯಾಂಕಿನ ಆಡಳಿತ ಮಂಡಳಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

2024–25ನೇ ಸಾಲಿನ ಲೆಕ್ಕ ಪತ್ರಗಳನ್ನು ಸಕಾಲಕ್ಕೆ ಆಡಿಟ್ ಮಾಡಿ ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿರುವ ಮೆ॥ ಬಿ.ಪಿ.ಎಸ್.ಎಸ್.ವೈ ಅಂಡ್ ಕೋ., ಚಾರ್ಟರ್ಡ್ ಅಕೌಂಟೆಂಟ್ಸ್ ಬೆಂಗಳೂರು ರವರಿಗೂ, ಬ್ಯಾಂಕಿನ ಕಾನೂನು ಸಲಹೆಗಾರರಿಗೆ, ಸ್ಥಿರಾಸ್ತಿ ಮತ್ತು ಒಡವೆ ಮೌಲ್ಯಮಾಪಕರುಗಳಿಗೆ, ಕೋರ್ ಬ್ಯಾಂಕಿಂಗ್ ತಂತ್ರಾಂಶ ಒದಗಿಸಿರುವ ಮೆ॥ ಡೆಟಾವಿಷನ್ ಲಿ., ಪುಣೆ ರವರಿಗೆ, ಸಿವಿಲ್ ಮತ್ತು ಪೀಠೋಪಕರಣ ಕೆಲಸಗಳ ಉಸ್ತುವಾರಿ ವಹಿಸಿದ ಇಂಜಿನಿಯರ್ ರವರಿಗೆ, ಬ್ಯಾಂಕಿನ ಕೆಲಸ ಕಾರ್ಯಗಳನ್ನು ಸುಸೂತ್ರವಾಗಿ ನಡೆಸಿಕೊಟ್ಟಿರುವ ಬ್ಯಾಂಕಿನ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ, ಬ್ಯಾಂಕಿನ ಪ್ರಗತಿ ಹಾಗೂ ಶ್ರೇಯೋಭಿವೃದ್ಧಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ದುಡಿಯುತ್ತಿರುವ ಎಲ್ಲಾ ಮಹನೀಯರುಗಳಿಗೆ ಆಡಳಿತ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಬ್ಯಾಂಕಿನ ಅಭಿವೃದ್ಧಿಗೆ ತಮ್ಮೆಲ್ಲರ ಸಹಕಾರವನ್ನು ಸದಾ ಮುಂದುವರಿಸಿಕೊಂಡು ಹೋಗಬೇಕೆಂದು ಹೃತ್ಪೂರ್ವಕವಾಗಿ ಪ್ರಾರ್ಥಿಸಿಕೊಳ್ಳಲಾಗಿದೆ.

ಆಡಳಿತ ಮಂಡಳಿಯ ಪರವಾಗಿ
**ಆವಲಹಳ್ಳಿ ಚಂದ್ರಪ್ಪ ಆರ್.**
ಅಧ್ಯಕ್ಷರು

**ಸ್ಥಾಪನೆ : 1907**

## ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18

ಕಛೇರಿ ☎ : **26678572 : 26600512 : 26609066**

ಅಧ್ಯಕ್ಷರು: **26606377**: ಪ್ರಧಾನ ವ್ಯವಸ್ಥಾಪಕರು: **26617980** : ಟೆಲಿಫ್ಯಾಕ್ಸ್: **(080) 26617980**

# 2024-2025ನೇ ಸಾಲಿನ ಲಾಭ-ನಷ್ಟ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆ (ಶಾಖೆಗಳ ಲೆಕ್ಕಗಳು ಸೇರಿದಂತೆ)

# ದಿ ಬೆಂಗಳೂರು ಸಿಟಿ ಕೋ. ಆಪರೇಟಿವ್
# The Bangalore City Co-operative

## ದಿನಾಂಕ: 01.04.2024 ರಿಂದ 31.03.2025 ರವರೆಗಿನ ಲಾಭ ಮತ್ತು ನಷ್ಟದ ತಃಖ್ತೆ

| 2023–24 ಆರ್ಥಿಕ ವರ್ಷ Financial year | ನಷ್ಟ / Loss | ಮೊಬಲಗು Amount ರೂ. ಪೈ Rs. Ps. | ಮೊಬಲಗು Amount ರೂ. ಪೈ Rs. Ps. |
|---|---|---|---|
| **141,18,99,755.00** | **1. i) ಠೇವಣಿಗಳ ಮೇಲೆ ಬಡ್ಡಿ ಪಾವತಿಸಿದ್ದು Interest paid on deposits** | | **147,03,67,582.00** |
| | **2. ಸಿಬ್ಬಂದಿ ವೇತನ, ಸಿಬ್ಬಂದಿ ಭವಿಷ್ಯ ನಿಧಿ ಮತ್ತು ಇತರೆ Staff salary, PF & others** | | |
| 25,48,53,020.00 | 1) ಸಿಬ್ಬಂದಿ ಸಂಬಳ / Staff Salaries | 29,68,14,192.00 | |
| 2,79,11,664.00 | 2) ಸಿಬ್ಬಂದಿ ಭವಿಷ್ಯ ನಿಧಿಗೆ ಬ್ಯಾಂಕಿನ ವಂತಿಗೆ Bank contribution to PF | 2,68,52,850.00 | |
| 20,80,000.00 | 3) ಸಿಬ್ಬಂದಿ ಎಫ್.ಪಿ.ಎಫ್‌ಗೆ ಬ್ಯಾಂಕಿನ ವಂತಿಗೆ Bank contribution to FPF | 19,66,250.00 | |
| 5,61,728.00 | 4) ಇ.ಡಿ.ಎಲ್.ಐ.ಗೆ ಬದಲಾಗಿ ಸಾಮೂಹಿಕ ವಿಮೆ ವೆಚ್ಚ Group Insurance Premium in Lieu of ED LI | 3,70,067.00 | |
| 3,73,161.00 | 5) ಇ.ಡಿ.ಎಲ್.ಐ ಮತ್ತು ಪಿ.ಎಫ್ ತನಿಖಾ ವೆಚ್ಚ EDLI & PF Inspection charges | 3,97,730.00 | |
| 1,65,00,000.00 | 6) ಸಾಮೂಹಿಕ ಉಪದಾನ ವಿಮಾ ವೆಚ್ಚ Group Gratuity Premium Expenses | 1,13,00,000.00 | |
| 1,70,84,587.00 | 7) ಸಿಬ್ಬಂದಿ ಎಕ್ಸ್‌ಗ್ರೇಷಿಯಾ ಪಾವತಿಗೆ ಅವಕಾಶ Provision for Exgratia to Staffs | 1,97,37,701.00 | |
| 88,53,942.32 | 8) ಭದ್ರತಾ ಸಿಬ್ಬಂದಿ ವೆಚ್ಚ / Security Staff Expenses | 1,01,11,188.90 | |
| 35,60,000.00 | 9) ಸಿಬ್ಬಂದಿ ಸಾಮೂಹಿಕ ಆರೋಗ್ಯ ವಿಮೆ ವೆಚ್ಚ Staff Group Health Insurance Expenses | 46,31,183.00 | |
| 1,00,29,476.00 | 10) ಸಿಬ್ಬಂದಿ ಪಿಂಚಣಿ ಯೋಜನೆಗೆ ವಂತಿಗೆ Contribution to Staff Pension Scheme | 1,09,65,037.00 | |
| 6,40,000.00 | 11) ಗಳಿಕೆ ರಜೆ ನಗದೀಕರಣ ಸಂಬಂಧ ವಿಮೆ ಕಂತು Leave Encashment Premium Expenses | 1,06,00,000.00 | |
| **34,24,47,578.32** | | | **39,37,46,198.90** |
| **13,88,660.00** | **3. ನಿರ್ದೇಶಕರ ಸಭಾ ಭತ್ಯೆ ಹಾಗೂ ಇತರೆ ಭತ್ಯೆಗಳು Directors Sitting Fees & other expenses** | | **15,10,740.00** |

# ಬ್ಯಾಂಕ್ ಲಿಮಿಟೆಡ್, ಚಾಮರಾಜಪೇಟೆ, ಬೆಂಗಳೂರು–18
# Bank Limited, Chamarajpet, Bengaluru - 18

## Profit & Loss a/c for the period from 01.04.2024 to 31.03.2025

| 2023–24 ಆರ್ಥಿಕ ವರ್ಷ Financial year | ಲಾಭ / Profit | ಮೊಬಲಗು Amount ರೂ. ಪೈ Rs. Ps. | ಮೊಬಲಗು Amount ರೂ. ಪೈ Rs. Ps. |
|---|---|---|---|
| | **1. ಬಡ್ಡಿ ಆದಾಯ/ Interest Income** | | |
| | 1) ಸಾಲಗಳ ಮೇಲೆ ಬಂದ ಬಡ್ಡಿ ಮತ್ತು ದಂಡಶುಲ್ಕ | | |
| 175,86,67,227.30 | Net Interest & Penal Charges received on Loans | 1,63,89,14,007.75 | |
| 5,49,812.00 | 2) ಠೇವಣಿ ಬಡ್ಡಿ ಅವಕಾಶ ಲೆಕ್ಕ / Provisions for Interest payable on Deposits | 14,86,999.00 | |
| 14,67,448.00 | 3) ಉತ್ಪಾದಕ ಸಾಲಗಳ ಮೇಲೆ ಬಡ್ಡಿ ಅವಕಾಶಗಳು Provision for Interest Receivables on Standard Assets | 1,62,76,010.00 | |
| **176,06,84,487.30** | | | **165,66,77,016.75** |
| 79,90,66,466.88 | **2. 1) ಗುಂತಾಯಗಳ ಮೇಲಿನ ಬಡ್ಡಿ** Interest on Investments | 81,11,90,461.40 | |
| 4,00,000.00 | 2) ಗುಂತಾಯಗಳ ಮೇಲಿನ ಡಿವಿಡೆಂಡ್ ಆದಾಯ Dividend Income on Investments | 4,00,000.00 | |
| 4,04,57,357.36 | 3) ದೀರ್ಘಾವಧಿ ಬಂಡವಾಳ ಲಾಭ Long Term Capital Gains | - | |
| 1,03,23,714.99 | 4) ಅಲ್ಪಾವಧಿ ಬಂಡವಾಳ ಲಾಭ Short Term Capital Gains | - | |
| 28,81,163.00 | 5) ತೆರಿಗೆ ರಹಿತ ಬಂಡವಾಳ ಮೇಲೆ ಬಡ್ಡಿ ಆದಾಯ Interest on Tax Free Bonds | 28,65,909.00 | |
| **85,31,28,702.23** | | | **81,44,56,370.40** |
| | **3. ದಳ್ಳಾಳಿ ವಿನಿಮಯ ಮತ್ತು ದಳ್ಳಾಳಿ ರುಸುಂ** Brokerage & Commissions Income | | |
| **40,60,573.94** | ಕಮೀಷನ್ ಬಂದಿದ್ದು/ commission received | | **40,52,468.25** |
| | **4. ಇತರೆ ಆದಾಯಗಳು /** Other Incomes | | |
| 9,38,597.14 | 1. ಫಾರಂಗಳ ಮಾರಾಟದಿಂದ/Sale of Forms | 10,41,727.94 | |
| 8,27,458.86 | 2. ಅಂಚೆ ವೆಚ್ಚ ಜಮಾ / Postage received | 6,64,614.90 | |
| 35,79,441.48 | 3. ಸುಭದ್ರ ಕಪಾಟುಗಳ ಬಾಡಿಗೆ /Lockers Rent | 35,99,531.10 | |

| 2023–24 ಆರ್ಥಿಕ ವರ್ಷ Financial year | ನಷ್ಟ / Loss | ಮೊಬಲಗು Amount ರೂ. ಪೈ Rs. Ps. | ಮೊಬಲಗು Amount ರೂ. ಪೈ Rs. Ps. |
|---|---|---|---|
| | **4. ಆಡಳಿತಾತ್ಮಕ ವೆಚ್ಚಗಳು Administrative expenses** | | |
| 55,000.00 | 1) ವೃತ್ತಿ ತೆರಿಗೆ / Professional Tax (Bank) | 55,000.00 | |
| 2,00,12,962.06 | 2) ಬಾಡಿಗೆ / Rent | 2,23,76,498.60 | |
| 2,27,969.00 | 3) ಕಟ್ಟಡದ ಕಂದಾಯ / Corporation Tax | 2,25,701.00 | |
| 1,59,998.00 | 4) ನೀರಿನ ವೆಚ್ಚ / Water Charges | 1,69,868.00 | |
| 30,36,355.00 | 5) ವಿದ್ಯುಚ್ಛಕ್ತಿ ವೆಚ್ಚ / Electicity Charges | 29,45,904.00 | |
| 32,779.84 | 6) ವಾಹನ ವಿಮೆ ವೆಚ್ಚ / Vehicle Insurance Expenses | 57,260.82 | |
| 2,85,22,976.97 | 7) ಠೇವಣಾತಿಗಳ ಮೇಲಿನ ವಿಮೆ ವೆಚ್ಚ Deposit Insurance Expenses (DICGC) | 2,76,36,538.00 | |
| 2,54,025.50 | 8) ಬ್ಯಾಂಕರ್ಸ್ ಬ್ಲಾಂಕೆಟ್ ವಿಮೆ ಪಾಲಿಸಿಯ ವಿಮಾ ವೆಚ್ಚ Bankers Blanket Insurance Premium Expenses | 2,54,025.50 | |
| 16,248.50 | 9) ಕಟ್ಟಡ ಮತ್ತು ಪೀಠೋಪಕರಣಗಳ ಮೇಲೆ ಬೆಂಕಿ ವಿಮೆ ಕಂತು Building & Furniture Fire Insurance Premium Expenses | 16,248.50 | |
| **5,23,18,314.87** | | | **5,37,37,044.42** |
| **4,10,315.00** | **5. ಕಾನೂನು ಶುಲ್ಕಗಳು / Legal Expenses** | | |
| | **6. ಅಂಚೆ ಮತ್ತು ದೂರವಾಣಿ ವೆಚ್ಚ Post & Telephone expenses** | | |
| 5,37,290.50 | 1) ಅಂಚೆ ಶುಲ್ಕ / Postage Expenses | 4,58,581.17 | |
| 7,16,030.04 | 2) ದೂರವಾಣಿ ವೆಚ್ಚ / Telephone Expenses | 6,20,019.96 | |
| **12,53,320.54** | | | **10,78,601.13** |
| 17,65,380.00 | **7. i) ಲೆಕ್ಕ ಪರಿಶೋಧನಾ ವೆಚ್ಚಗಳು** Audit Expenses | 17,56,457.50 | |
| 14,52,965.00 | ii) ಲೆಕ್ಕ ಪರಿಶೋಧನಾ ವೆಚ್ಚ ಭರಿಸಲು ಅವಕಾಶಗಳು | 13,51,635.00 | |
| **32,18,345.00** | Provision for Audit Cost Payable | | **31,08,092.50** |
| | **8. ಸ್ವತ್ತಿನ ಸವಕಳಿ ಅವಕಾಶಗಳು Depreciation Provisions** | | |
| 1,60,372.00 | 1) ಕಟ್ಟಡದ ಮೇಲೆ ಶೇ.2.5ರಂತೆ on Building @ 2.5% | 1,56,363.00 | |
| 47,07,206.00 | 2)ಪೀಠೋಪಕರಣ & ಮರಮುಟ್ಟುಗಳ ಮೇಲೆ ಶೇ.10ರಂತೆ on Furniture & Fixtures @ 10% | 50,18,709.00 | |
| 31,16,214.00 | 3) ಗಣಕೀಕರಣದ ಹಾರ್ಡ್‌ವೇರ್ ಮೇಲೆ ಶೇ. 33.33ರಂತೆ on Computer Hardware @ 33.33% | 40,94,492.00 | |

| 2023–24 ಆರ್ಥಿಕ ವರ್ಷ Financial year | ಲಾಭ / Profit | ಮೊಬಲಗು Amount ರೂ. ಪೈ Rs. Ps. | ಮೊಬಲಗು Amount ರೂ. ಪೈ Rs. Ps. |
|---|---|---|---|
| 59,64,450.84 | 4. ನಿವ್ವಳ ವಸೂಲಿ ವೆಚ್ಚ ಜಮಾ<br>Net Recovery charges Received | 54,23,666.79 | |
| 4,289.00 | 5. ಹಳೆಯ ವರ್ತಮಾನ ಪತ್ರಿಕೆಗಳ ಮಾರಾಟದಿಂದ<br>Sale of old news papers | 3,305.00 | |
| 16,94,875.37 | 6. ಇತರೆ ಆದಾಯ/Miscellaneous Incomes | 17,68,485.19 | |
| 2,11,24,597.65 | 7. ಸೇವಾ ಶುಲ್ಕ ಆದಾಯ<br>Service charges Received | 2,49,22,809.50 | |
| 1,60,425.06 | 8. ನಕಲು ವೆಚ್ಚ ಜಮಾ<br>Photocopy charges Received | 2,15,523.98 | |
| 7,54,12,206.00 | 9. ಸರ್ಕಾರ ಸಾಲ ಪತ್ರಗಳ ಮಾರಾಟದಿಂದ ಬಂದ ಪ್ರೀಮಿಯಂ ಆದಾಯ<br>Premium on Sale of Govt. Securities | 4,56,83,718.00 | |
| 94,011.00 | 10. ಡೆಫರ್ಡ್ ಟ್ಯಾಕ್ಸ್ – ಅವಕಾಶ<br>Deferred Tax Assets | 1,71,763.00 | |
| 34,67,258.11 | 11. ಎ.ಟಿ.ಎಂ.ಕಾರ್ಡ್ ವೆಚ್ಚ<br>ATM Card Charges | 46,46,613.77 | |
| 3,73,892.17 | 12. ಸಿಬಿಲ್ ಶುಲ್ಕ ಲೆಕ್ಕ<br>CIBIL Charges Received | 4,85,559.00 | |
| 67,512.16 | 13. CERSAI ಶುಲ್ಕಗಳು<br>CERSAI Fees | 48,431.10 | |
| - | 14. ಆದಾಯ ತೆರಿಗೆ ವಾಪಸ್ಸಾತಿ<br>Income Tax Refund | 4,43,630.00 | |
| 16,61,563.62 | 15. ಕೋರ್ಟ್ ಶುಲ್ಕ ಸಂಬಂಧ ಅವಕಾಶಗಳು<br>Provision for Court Cost Receivable | - | |
| 4,18,34,489.00 | 16. ಗುಂತಾಯ ಸವಕಳಿ ಅವಕಾಶಗಳು<br>Provision for IDR | 8,45,60,091.00 | |
| 63,310.00 | 17. ತ್ರೈವಾರ್ಷಿಕ ತಪಾಸಣೆ ವೆಚ್ಚ ಸ್ವೀಕೃತಿ<br>Trinial Inspection charges receipts | 7,080.00 | |
| – | 18. ಸಾಲ ವಜಾ ಸಂಬಂಧ ಸ್ವೀಕೃತಿಗಳು<br>Receipts from write off a/cs | 5,000.00 | |
| **15,72,68,377.46** | | | **17,36,91,550.27** |
| **59,62,94,000.00** | ಬಿ) ಶಾಖೆಗಳ ಲೆಕ್ಕಗಳ ಮೇಲೆ ಬಂದ ಬಡ್ಡಿ<br>Int. on Branch Balances | | **63,60,60,000.00** |

ಅಧ್ಯಕ್ಷರು ಮುಂದುವರೆದು ದಿನಾಂಕ: 31.03.2024ಕ್ಕೆ ಬ್ಯಾಂಕು 80048 ಸದಸ್ಯರುಗಳಿಂದ 95 ಕೋಟಿ 9 ಲಕ್ಷ ರೂಪಾಯಿಗಳಿಗೂ ಮಿಗಿಲಾಗಿ ಷೇರು ಬಂಡವಾಳ ಸಂಗ್ರಹಿಸಿರುವುದರ ಬಗ್ಗೆ, 496 ಕೋಟಿ 73 ಲಕ್ಷ ರೂಪಾಯಿಗಳ ಆಪದ್ಧನ ಮತ್ತು ಇತರೆ ನಿಧಿಗಳು ಸಂಗ್ರಹಿಸಿರುವುದರ ಬಗ್ಗೆ, 2096 ಕೋಟಿ 22 ಲಕ್ಷ ರೂಪಾಯಿಗಳ ಠೇವಣಿ ಸಂಗ್ರಹಿಸಿರುವುದರ ಬಗ್ಗೆ, ದುಡಿಯುವ ಬಂಡವಾಳಗಳು ರೂ.2688 ಕೋಟಿ 4 ಲಕ್ಷಗಳು ಇರುವ ಬಗ್ಗೆ, 1333 ಕೋಟಿ 3 ಲಕ್ಷ ರೂಪಾಯಿಗಳ ಸಾಲಗಳನ್ನು ಸದಸ್ಯರುಗಳಿಗೆ ನೀಡಿರುವುದರ ಬಗ್ಗೆ ಹಾಗೂ 1188 ಕೋಟಿ 43 ಲಕ್ಷ ರೂಪಾಯಿಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಲ ಪತ್ರಗಳಲ್ಲಿ ಮತ್ತು ಇತರೆ ಹೂಡಿಕೆಗಳಲ್ಲಿ ಹೂಡಿಕೆ ಮಾಡಿರುವುದರ ಬಗ್ಗೆ, ತೆರಿಗೆ ಮತ್ತು ಅವಕಾಶಗಳ ಪೂರ್ವ 86 ಕೋಟಿ 20 ಲಕ್ಷ ಲಾಭ ಮತ್ತು ತೆರಿಗೆ ಮತ್ತು ಅವಕಾಶಗಳ ನಂತರ 28 ಕೋಟಿ 50 ಲಕ್ಷ ರೂಗಳ ನಿವ್ವಳ ಲಾಭ ಮಾಡಿರುವ ಬಗ್ಗೆ ವಿವರ ನೀಡಿದರು. ಮುಂದುವರೆದು ಬ್ಯಾಂಕಿನ CRAR ಮಟ್ಟವು ಶೇಕಡ 25.06 ರಷ್ಟಿದ್ದು ಬ್ಯಾಂಕಿನ ಸುಭದ್ರತೆಗೆ ಸಾಕ್ಷಿಯಾಗಿದೆ ಎಂದರು.

ಅಧ್ಯಕ್ಷರು ಮುಂದುವರೆದು ನಮ್ಮ ಬ್ಯಾಂಕು ಸದಸ್ಯತ್ವ ಸಂಖ್ಯೆಯಲ್ಲಿ, ಷೇರು ಸಂಗ್ರಹಣೆಯಲ್ಲಿ, ಠೇವಣಿ ಸಂಗ್ರಹಣೆಯಲ್ಲಿ, ದುಡಿಯುವ ಬಂಡವಾಳದಲ್ಲಿ, ಸಾಲ ನೀಡಿಕೆಯಲ್ಲಿ, ಒಟ್ಟು ವ್ಯವಹಾರದ ಲೆಕ್ಕದಲ್ಲಿ ಕರ್ನಾಟಕ ರಾಜ್ಯದ ಅತ್ಯುನ್ನತ ಪಟ್ಟಣ ಸಹಕಾರ ಬ್ಯಾಂಕಾಗಿದೆ ಎಂದು ಸಭೆಗೆ ತಿಳಿಸಿದರು. ಮುಂದುವರೆದು ಬ್ಯಾಂಕು 2023–24ರ ಸಾಲಿನಲ್ಲಿ ನಿಧಿ ಸಂಗ್ರಹಣೆಯಲ್ಲಿ ಶೇಕಡ 11.45ರಷ್ಟು ಪ್ರಗತಿ ಕಂಡಿದೆ ಎಂದು, ಷೇರು ಸಂಗ್ರಹಣೆಯಲ್ಲಿ ಶೇಕಡ 0.38ರಷ್ಟು ಋಣಾತ್ಮಕ ಬೆಳವಣಿಗೆ ಕಂಡಿದೆ ಎಂದರು. ಹಾಗೆಯೇ ಠೇವಣಿ ಸಂಗ್ರಹಣೆಯಲ್ಲಿ ಶೇಕಡ 7.44ರಷ್ಟು ಮತ್ತು ಸಾಲಗಳಲ್ಲಿ ಶೇಕಡ 8.13ರಷ್ಟು ಋಣಾತ್ಮಕ ಬೆಳವಣಿಗೆ ಕಂಡಿದೆ ಎಂದು, ಈ ಋಣಾತ್ಮಕ ಬೆಳವಣಿಗೆಗಳಿಗೆ ಕಳೆದ ವರ್ಷಗಳಲ್ಲಿ ಬೆಂಗಳೂರು ನಗರದ ಎರಡು ಸಹಕಾರ ಬ್ಯಾಂಕುಗಳು ವೈಫಲ್ಯವಾಗಿದ್ದು, ಇದನ್ನೇ ಉದಾಹರಿಸುತ್ತಾ ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳು ಆಗಾಗ್ಗೆ ವೈಭವೀಕರಿಸಿ ಸುದ್ದಿ ಮಾಡಲಾಗಿ ಸಾರ್ವಜನಿಕರಲ್ಲಿ ಸಹಕಾರ ಬ್ಯಾಂಕುಗಳ ಬಗ್ಗೆ ಅಪನಂಬಿಕೆ ಹೆಚ್ಚಾದ ಕಾರಣ ಮತ್ತು ನಮ್ಮ ಬ್ಯಾಂಕಿನ ಕೆಲ ಸದಸ್ಯರುಗಳು ಹಿಂದಿನ ಲೆಕ್ಕ ಪರಿಶೋಧನಾ ವರದಿಯಲ್ಲಿನ ಸಣ್ಣ ಸಣ್ಣ ಅಂಶಗಳನ್ನೇ ಉಲ್ಲೇಖಿಸಿ ಸಹಕಾರ ಸಂಘಗಳ ನಿಬಂಧಕರುಗಳಿಗೆ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರುಗಳಿಗೆ, ಭಾರತೀಯ ರಿಸರ್ವ್ ಬ್ಯಾಂಕಿನವರಿಗೆ ಪದೇ ಪದೇ ದೂರು ಸಲ್ಲಿಸುವ ಪರಿಪಾಠವಿರಿಸಿಕೊಳ್ಳುವುದರೊಂದಿಗೆ ಸಾರ್ವಜನಿಕರಲ್ಲಿ/ಗ್ರಾಹಕರಲ್ಲಿ ಚರ್ಚಿಸುವ ಮೂಲಕ, ದೃಶ್ಯ ಮಾಧ್ಯಮವೊಂದರಲ್ಲಿ ನಿರಾಧಾರ ಸುಳ್ಳು ಸುದ್ದಿ ಪ್ರಸಾರವಾದ ಕಾರಣ ಎಂದರು. ಅಧ್ಯಕ್ಷರು ಮುಂದುವರೆದು ಬ್ಯಾಂಕಿನ ಬೆಳವಣಿಗೆಗೆ ಧಕ್ಕೆ ತರುತ್ತಿದ್ದ ದೂರುದಾರ ಸದಸ್ಯರುಗಳನ್ನು ಸದಸ್ಯತ್ವದಿಂದ ವಜಾ ಮಾಡಲು ಕಳೆದ ಸರ್ವಸದಸ್ಯರ ಸಭೆಯು ತೀರ್ಮಾನಿಸಿದಕ್ಕೆ ಅಭಿನಂದಿಸಿದರು. ಅಧ್ಯಕ್ಷರು ಮುಂದುವರೆದು 2023–24ನೇ ಸಾಲಿನಲ್ಲಿ ಠೇವಣಿ

ಮತ್ತು ಸಾಲ ಬೆಳವಣಿಗೆ ಋಣಾತ್ಮಕವಾಗಿದ್ದರೂ ನಮ್ಮ ಬ್ಯಾಂಕು ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಠೇವಣಿಯಲ್ಲಿ, ಸಾಲಗಳಲ್ಲಿ, ಷೇರು ಬಂಡವಾಳದಲ್ಲಿ ಲಾಭಗಳಿಕೆಯಲ್ಲಿ ಅತ್ಯುನ್ನತ ಸ್ಥಾನ ಹೊಂದಿದೆ ಎಂದರು.

ಸದಸ್ಯರುಗಳು ನಮ್ಮ ಬ್ಯಾಂಕಿನ ಇತಿಹಾಸ, ಸ್ವಂತ ಬಂಡವಾಳ, ಉತ್ತಮ ಸಾಲ ನೀತಿ, ಲಾಭ ಗಳಿಕೆ ಸಾಮರ್ಥ್ಯ, 5 ಲಕ್ಷಗಳವರೆಗೆ ಠೇವಣಿ ವಿಮೆ, RBI ನಿಯಂತ್ರಣ, 'A' ಗ್ರೇಡ್ ಆಡಿಟ್ ವರ್ಗೀಕರಣ ಮತ್ತು ಬ್ಯಾಂಕಿನ ಸದೃಢತೆ ಗಮನಿಸಿ ಠೇವಣಿ ಇರಿಸಿ ನಮ್ಮೊಂದಿಗೆ ಮುಂದುವರೆಯಬೇಕೆಂದು ಮತ್ತು ತಮ್ಮ ಬಂಧು ಮಿತ್ರರನ್ನು ಬ್ಯಾಂಕಿಗೆ ಪರಿಚಯಿಸಲು ಕೋರಿದರು.

ಅಧ್ಯಕ್ಷರು ಮುಂದುವರೆದು ಬ್ಯಾಂಕು 117 ವರ್ಷಗಳ ಬ್ಯಾಂಕಿಂಗ್ ಸೇವೆಯಲ್ಲಿ ಉತ್ತಮ ಕಾರ್ಯಾಚರಣೆಗಾಗಿ ಹಲವಾರು ಪ್ರಶಸ್ತಿ ಮತ್ತು ಪುರಸ್ಕಾರಗಳನ್ನು ಪಡೆದಿರುವುದದನ್ನು ನೆನಪಿಸಿ, 1926, 1927 ಮತ್ತು 1928 ರಲ್ಲಿ ಸತತ ಮೂರು ವರ್ಷ ಅಂದಿನ ಮೈಸೂರು ಸಂಸ್ಥಾನದ ಮಹಾರಾಜರಾದ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್‌ರವರು 'ಅತ್ಯುತ್ತಮ ಪಟ್ಟಣ ಸಹಕಾರಿ ಬ್ಯಾಂಕ್' ಎಂದು ಗೌರವಿಸಿ ಪ್ರಶಸ್ತಿ ಪತ್ರ ಹಾಗೂ ಪರ್ಯಾಯ ಪಾರಿತೋಷಕವನ್ನು ನೀಡಿರುವುದನ್ನು, ಕರ್ನಾಟಕ ರಾಜ್ಯ ಸರ್ಕಾರವು ಸಹ 2001–02ರ ಸಾಲಿಗೆ ಮತ್ತು 2003–04ನೇ ಸಾಲಿಗೆ ನಮ್ಮ ಬ್ಯಾಂಕನ್ನು 'ಅತ್ಯುತ್ತಮ ಪಟ್ಟಣ ಸಹಕಾರಿ ಬ್ಯಾಂಕ್' ಎಂದು ಗೌರವಿಸಿ ಪ್ರಶಸ್ತಿ ಪತ್ರ ಹಾಗೂ ಪರ್ಯಾಯ ಪಾರಿತೋಷಕ ನೀಡಿರುವುದನ್ನು, ಕರ್ನಾಟಕ ರಾಜ್ಯ ಸರ್ಕಾರವು 2007 ರಲ್ಲಿ ಮೈಸೂರಿನಲ್ಲಿ ಸಹಕಾರ ಶತಮಾನೋತ್ಸವ ಸಮಾರಂಭ ಆಚರಿಸಿ, ಸದರಿ ಸಮಾರಂಭದಲ್ಲಿ ಬ್ಯಾಂಕಿನ 100 ವರ್ಷಗಳ ಸಹಕಾರ ಸೇವೆಯನ್ನು ಗುರುತಿಸಿ ಪ್ರಶಸ್ತಿ ಪತ್ರ ಮತ್ತು ಪರ್ಯಾಯ ಪಾರಿತೋಷಕ ನೀಡಿ ಗೌರವಿಸಿರುವುದನ್ನು, ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಬೆಂಗಳೂರು ರವರ ಸಹಯೋಗದೊಂದಿಗೆ ಹೊಸಪೇಟೆಯಲ್ಲಿ ನಡೆಸಿದ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ನಮ್ಮ ಬ್ಯಾಂಕನ್ನು 2007–08 ರ ಸಾಲಿಗೆ ರಾಜ್ಯದ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕೆಂದು ಗುರುತಿಸಿ ಸನ್ಮಾನಿಸಿರುವುದನ್ನು, ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ಹೊಸದೆಹಲಿ ಮತ್ತು ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ರವರು ಸಹ ಬ್ಯಾಂಕಿನ ಸಾಧನೆ ಗಮನಿಸಿ 2012ರ ಅಂತರ ರಾಷ್ಟ್ರೀಯ ಸಹಕಾರ ವರ್ಷದಲ್ಲಿ ಶತಮಾನೋತ್ಸವ ಆಚರಿಸಿದ ಸಹಕಾರಿ ಬ್ಯಾಂಕೆಂದು ಗುರುತಿಸಿರುವುದನ್ನು, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದವರು 2011–12, 2012–13 ಮತ್ತು 2013–14 ನೇ ಸಾಲಿಗೆ ಸತತ ಮೂರು ವರ್ಷ ನಮ್ಮ ಬ್ಯಾಂಕನ್ನು ಕರ್ನಾಟಕ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಠೇವಣಿ ಸಂಗ್ರಹಣೆ, ಸಾಲ ನೀಡಿಕೆ ಮತ್ತು ಲಾಭ ಗಳಿಕೆಯಲ್ಲಿ ಅತ್ಯುತ್ತಮ ಪಟ್ಟಣ ಸಹಕಾರಿ ಬ್ಯಾಂಕ್ ಪ್ರಶಸ್ತಿ ನೀಡಿ ಗೌರವಿಸಿರುವುದನ್ನು, 2014–15, 2015–16, 2016–17, 2017–18 ಮತ್ತು 2018–19ನೇ ಸಾಲಿಗೂ ಸಹ ರಾಜ್ಯದ ಮೂರು ಅತ್ಯುನ್ನತ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಒಂದೆಂದು ಗುರುತಿಸಿರುವುದನ್ನು ಸಭೆಗೆ ತಿಳಿಸಿದರು. ಅಧ್ಯಕ್ಷರು ಮುಂದುವರೆದು ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ನವದೆಹಲಿರವರು ದಿನಾಂಕ 23.06.2022 ರಂದು ನವದೆಹಲಿಯಲ್ಲಿ ನಡೆದ ಸಮ್ಮೇಳನದಲ್ಲಿ ನಮ್ಮ ಬ್ಯಾಂಕನ್ನು 'ಶತಮಾನ ದಾಟಿದ ಯಶಸ್ವಿ ಬ್ಯಾಂಕ್' ಎಂದು ಗುರುತಿಸಿ ಪ್ರಶಸ್ತಿ ನೀಡಿರುವುದನ್ನು ತಿಳಿಸಿದರು.

ಅಧ್ಯಕ್ಷರು ಮುಂದುವರೆದು ಬ್ಯಾಂಕ್ ಸದಸ್ಯರ ಸಹಕಾರದಿಂದ 1932 ರಲ್ಲಿ ರಜತ ಮಹೋತ್ಸವ, 1957 ರಲ್ಲಿ ಸ್ವರ್ಣ ಮಹೋತ್ಸವ, 1967 ರಲ್ಲಿ ವಜ್ರ ವಹೋತ್ಸವ, 1977ರಲ್ಲಿ ಪ್ಲಾಟಿನಂ ಮಹೋತ್ಸವ ಮತ್ತು 2007 ರಲ್ಲಿ ಶತಮಾನೋತ್ಸವ ಸಮಾರಂಭಗಳನ್ನು ವಿಜೃಂಭಣೆಯಿಂದ ಆಚರಿಸಿರುವುದನ್ನು ನೆನಪಿಸಿದರು.

ಅಧ್ಯಕ್ಷರು ಮುಂದುವರೆದು ಕೋವಿಡ್–19 ಸಾಂಕ್ರಾಮಿಕ ಕಾಯಿಲೆ ಉಂಟು ಮಾಡಿದ ಆರ್ಥಿಕ ಹಿಂಜರಿತದಿಂದ ಪೂರ್ಣ ಚೇತರಿಸಿಕೊಂಡಿಲ್ಲ ಎಂದು, ಆದಾಗ್ಯೂ ಬ್ಯಾಂಕಿನ ಸುಸ್ತಿ ಸಾಲಗಳನ್ನು ಒಟ್ಟು ಸಾಲಕ್ಕೆ ಶೇಕಡ 1.72ಕ್ಕೆ ಇಳಿಸಲಾಗಿದೆ ಎಂದು, ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ Due Dateನಿಂದ 90 ದಿನಗಳಿಗೂ ಮೀರಿ ಬಾಕಿ ನಿಂತ ಸಾಲ ಖಾತೆಗಳನ್ನು ಅನುತ್ಪಾದಕ ಸಾಲಗಳೆಂದು ಗುರುತಿಸುವ ಪದ್ಧತಿ ಅಳವಡಿಸಿ ಬ್ಯಾಂಕಿನ Net NPAಗಳನ್ನು ಒಟ್ಟು ಸಾಲದ ಶೇಕಡ ಶೂನ್ಯಕ್ಕೆ ಇಳಿಸಿದೆ ಎಂದರು, ಇಂತಹ ಅನುತ್ಪಾದಕ ಸಾಲಗಳಲ್ಲಿ ಹೆಚ್ಚಿನ

ಖಾತೆಗಳಲ್ಲಿ 3. ರಿಂದ 4 ತಿಂಗಳು ಮಾತ್ರ ಸಾಲ ಬಾಕಿ ಇದ್ದು, ಅವು ಪಾವತಿಯಾದ್ದಲ್ಲಿ ಅನುತ್ಪಾದಕ ಸಾಲಗಳು ಕಡಿಮೆಯಾಗಲಿವೆ ಎಂದು ತಿಳಿಸಿ ಬ್ಯಾಂಕಿನ ಅಭಿವೃದ್ಧಿಗೆ ಸದಸ್ಯರ ಸಹಕಾರ ಕೋರಿದರು.

ಅಧ್ಯಕ್ಷರು ಭಾಷಣ ಮುಂದುವರೆಸಿ, ಸದಸ್ಯರೆಲ್ಲರ ಸಹಕಾರದಿಂದ ಬ್ಯಾಂಕಿನ ಸ್ವಂತ ನಿಧಿಗಳು 497 ಕೋಟಿ ರೂಪಾಯಿಗಳಿದ್ದು, ಬ್ಯಾಂಕು ಎಂತಹ ಕಷ್ಟ ಪರಿಸ್ಥಿತಿಯನ್ನು ಎದುರಿಸುವ ಶಕ್ತಿ ಬ್ಯಾಂಕು ಹೊಂದಿದೆ ಎಂದರು.

ನಮ್ಮ ಬ್ಯಾಂಕಿನ ಹಣಕಾಸು ಸ್ಥಿತಿಯು ಭಾರತೀಯ ರಿಸರ್ವ್ ಬ್ಯಾಂಕಿನ ತಪಾಸಣೆ ಮತ್ತು ನಿರ್ದೇಶನಗಳನ್ವಯ ಉತ್ತಮ ಬ್ಯಾಂಕಾಗಿ ಮತ್ತು ಲೆಕ್ಕ ಪರಿಶೋಧನಾ ಸಂಬಂಧ 'A' ವರ್ಗದಲ್ಲಿ ಮುಂದುವರೆದಿರುವುದು ಬ್ಯಾಂಕಿನ ಪ್ರಗತಿದಾಯಕ ಅಂಶಗಳಿಗೆ ಕನ್ನಡಿಯಾಗಿದೆ ಎಂದರು. ಅಧ್ಯಕ್ಷರು ಮುಂದುವರೆದು ಸದಸ್ಯರ ಹಿತದೃಷ್ಟಿಯಿಂದ ಆಡಳಿತ ಮಂಡಳಿಯು ತೆಗೆದುಕೊಂಡಿರುವ ತೀರ್ಮಾನಗಳನ್ನು ಉಲ್ಲೇಖಿಸಿದರು.

ಅಧ್ಯಕ್ಷರು ಮುಂದುವರೆದು ಬ್ಯಾಂಕಿನ ಏಳಿಗೆಗೆ ಕಾರಣರಾದ ಗ್ರಾಹಕರುಗಳನ್ನು ಗುರುತಿಸಿ ಅವರನ್ನು ರಾಷ್ಟ್ರದ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವ ಸಂದರ್ಭಗಳಲ್ಲಿ ಕರೆದು ಗೌರವಿಸುವ ಸಂಪ್ರದಾಯ ಅಳವಡಿಸಿಕೊಂಡಿದೆ ಎಂದರು.

ನಂತರ ಅಧ್ಯಕ್ಷರು ಮುಂದುವರೆದು ಬ್ಯಾಂಕಿನ ಎಲ್ಲಾ ಸಾಧನೆಗಳಲ್ಲಿ ಆಡಳಿತ ಮಂಡಳಿಯ ಸದಸ್ಯರುಗಳ ಪಾತ್ರ ಪ್ರಶಂಶನೀಯ ಎಂದು, ಅವರ ಸಹಕಾರ ನೆನೆಯುವುದು ನನ್ನ ಕರ್ತವ್ಯವೆಂದು ತಿಳಿಸಿ ಅವರೆಲ್ಲರಿಗೆ ಮತ್ತು ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಿಗೆ ಧನ್ಯವಾದ ಅರ್ಪಿಸಿದರು.

ಈ ಸಂದರ್ಭದಲ್ಲಿ ಅನಾರೋಗ್ಯದ ನಿಮಿತ್ತ ಬ್ಯಾಂಕಿನ ನಿರ್ದೇಶಕರಾದ ಶ್ರೀ ಹನುಮದಾಸಯ್ಯ ನವರು ಹಾಗೂ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಶ್ರೀ ಆರ್.ಮುನಿರಾಜು ರವರು ಸಭೆಯಲ್ಲಿ ಹಾಜರಿರುವುದಿಲ್ಲವೆಂದು ತಿಳಿಸಿದರು.

ಅಧ್ಯಕ್ಷರು ಮುಂದುವರೆದು 2024–25ರ ಸಾಲಿಗೆ ಠೇವಣಾತಿಗಳನ್ನು 2400 ಕೋಟಿ ರೂಪಾಯಿಗಳಿಗೆ, ಸಾಲ ಮತ್ತು ಮುಂಗಡಗಳನ್ನು 1500 ಕೋಟಿಗಳಿಗೆ ಹೆಚ್ಚಿಸಲು, Schedule Bank Status ಪಡೆಯಲು ಮತ್ತು ಹೊಸ ಶಾಖೆಗಳನ್ನು ಬೆಂಗಳೂರು ನಗರದ ರಾಜರಾಜೇಶ್ವರಿನಗರ, ಮೈಸೂರು ನಗರದ ವಿಜಯನಗರ ಮತ್ತು ಸಿದ್ಧಾರ್ಥ ಬಡವಾವಣೆಗಳಲ್ಲಿ ತೆರೆಯುವುದು ಇತ್ಯಾದಿ ಗುರಿ ಇರಿಸಿಕೊಂಡಿದೆ ಎಂದರು. ಅಧ್ಯಕ್ಷರು ಮುಂದುವರೆದು ಮುಂದಿನ ವರ್ಷಗಳಲ್ಲಿ ಕರ್ನಾಟಕ ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಶಾಖೆ ತೆರೆಯುವ ಗುರಿ ಇರಿಸಿಕೊಂಡಿದೆ ಎಂದರು.

ಅಧ್ಯಕ್ಷರು ಮುಂದುವರೆದು ಬ್ಯಾಂಕಿನ ಶಾಖೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುವಂತಾಗಲು ಜ್ಞಾನಜ್ಯೋತಿನಗರ ಶಾಖೆಗೆ ಸಂಬಂಧಿಸಿದಂತೆ ಬೆಂಗಳೂರಿನ ನಾಗರಬಾವಿಯಲ್ಲಿ 40x60 ನಿವೇಶನವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹರಾಜಿನಲ್ಲಿ ಕೊಂಡಿರುವುದನ್ನು, ಆವಲಹಳ್ಳಿಯಲ್ಲಿ 57x40 ನಿವೇಶನವನ್ನು ಖಾಸಗಿಯವರಿಂದ ಕೊಂಡಿರುವುದಾಗಿ, ಮೈಸೂರು ಶಾಖೆಗೆ 50x70 ನಿವೇಶನವನ್ನು Mudaರವರಿಂದ ಬಹಿರಂಗ ಹರಾಜಿನಲ್ಲಿ ಕೊಂಡಿರುವುದಾಗಿ ತಿಳಿಸಿದರು. ಅಧ್ಯಕ್ಷರು ಮುಂದುವರೆದು ಬ್ಯಾಂಕು ಹರಳೂರಿನಲ್ಲಿ BDAರವರು ಬ್ಯಾಂಕ್ ಉದ್ದೇಶಕ್ಕೆ ಮೀಸಲಿರಿಸಿದ್ದ CA ನಿವೇಶನವನ್ನು Lease ಆಧಾರ ಪಡೆದಿದ್ದನ್ನು, ಸದರಿ ನಿವೇಶನವು ಹಾಲಿ ಕಾರ್ಯನಿರ್ವಹಿಸುತ್ತಿರುವ ಕೋರಮಂಗಲ ಶಾಖೆ ಮತ್ತು ಎಲೆಕ್ಟ್ರಾನಿಕ್ ಸಿಟಿ ಶಾಖೆಗಳ ನಡುವೆ ಬರುತ್ತಿದ್ದು ಶಾಖೆಗಳ ಬೆಳವಣಿಗೆ ದೃಷ್ಟಿಯಿಂದ ಅಲ್ಲಿ ಶಾಖೆ ತೆರೆಯುವುದು ಸಾಧುವಲ್ಲವೆಂದು, BDA ನಿಯಮ ರೀತ್ಯಾ Lease ಪಡೆದ ದಿನಾಂಕದಿಂದ 2 ವರ್ಷದೊಳಗೆ ನಿವೇಶನದಲ್ಲಿ ಕಟ್ಟಡ ನಿರ್ಮಿಸಿ ಶಾಖೆ ತೆರೆಯಲಾಗದ ಕಾರಣ ಮತ್ತು ಶಾಖೆ ತೆರೆಯಲು RBI ನಿರ್ಬಂಧ ಇರುವ ಕಾರಣ Lease ಆಧಾರ ಪಡೆದಿದ್ದ ಹರಳೂರು ನಿವೇಶನವನ್ನು BDA ರವರಿಗೆ ಹಿಂದಿರುಗಿಸಲು ಆಡಳಿತ ಮಂಡಳಿಯು ತೀರ್ಮಾನಿಸಿರುವುದನ್ನು ಸಭೆಯ ಗಮನಕ್ಕೆ ತಂದರು. ಬ್ಯಾಂಕು ಶಾಖೆಗಳಿಗೆ ಸ್ವಂತ ಕಟ್ಟಡ ಹೊಂದಲು ಸಹಕರಿಯಾಗುವಂತೆ ಸದಸ್ಯರುಗಳು ಲಾಭ ವಿಂಗಡಣೆಯಲ್ಲಿ ಕಟ್ಟಡ ನಿಧಿಗೆ ಹಣ ಮೀಸಲಿರಿಸುವುದಕ್ಕೆ ಧನ್ಯವಾದ ಹೇಳಿದರು.

ಅಧ್ಯಕ್ಷರು ಮುಂದುವರೆದು ಬ್ಯಾಂಕು ಲಾಭದ ಮೇಲೆ ಆದಾಯ ತೆರಿಗೆ ಪಾವತಿ ಮಾಡುವ ಅನಿವಾರ್ಯತೆ ಇರುವುದನ್ನು ತಿಳಿಸಿ ವರ್ಷವೊಂದಕ್ಕೆ ಸರಿಸುಮಾರು 20 ಕೋಟಿ ರೂಪಾಯಿ ಆದಾಯ ತೆರಿಗೆ ಪಾವತಿಸಲಾಗುತ್ತಿದೆ ಎಂದು ತಿಳಿಸಿ Income Tax Management ಅಳವಡಿಸಿಕೊಳ್ಳಬೇಕಾಗಿದೆ ಎಂದು, ಅವಕಾಶವಿರುವ Exemptions ಗಳನ್ನು ಬಳಸಿಕೊಳ್ಳಬೇಕಾಗಿದೆ ಎಂದು, ಈ ನಿಟ್ಟಿನಲ್ಲಿ ತೆರಿಗೆ ರಹಿತ ಬಾಂಡ್‌ಗಳಲ್ಲಿ ಸರಿ ಸುಮಾರು 4 ಕೋಟಿ ಹಣ ವಿನಿಯೋಗಿಸಿರುವುದಾಗಿ, Liquidity ಉದ್ದೇಶದಿಂದ ಮತ್ತು Long Term Capital Gain ವಿನಾಯ್ತಿ ಪಡೆಯಲು RBI ನಿರ್ದೇಶನಗಳನ್ನು ಅನುಸರಿಸಿ ಕೆಲವು Debt Mutual Fundನಲ್ಲಿ ಗುಂತಾಯಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಅಧ್ಯಕ್ಷರು ಮುಂದುವರೆದು 2023–24 ರ ಸಾಲಿನಲ್ಲಿ ತೆರಿಗೆ ಪಾವತಿ ಕಡಿಮೆಗೊಳಿಸಲು ಅಳವಡಿಸಿದ ಅವಕಾಶಗಳು ಮತ್ತು ಇತರೆ ಅವಕಾಶಗಳ ವಿವರವನ್ನು ಒಂದೊದಾಗಿ ನೀಡಿದರು.

ಅಧ್ಯಕ್ಷರು ಮುಂದುವರೆದು ಬ್ಯಾಂಕು ಆದಾಯ ತೆರಿಗೆ ಪಾವತಿಗಳನ್ನು ಕಡಿಮೆಗೊಳಿಸಲು, ಆದಾಯ ತೆರಿಗೆ ಕಾನೂನಿನ ರೀತ್ಯಾ ಅವಕಾಶಗಳನ್ನು, ಸಂಭವನೀಯ ವೆಚ್ಚಗಳನ್ನು ಭರಿಸಬೇಕಿದ್ದಲ್ಲಿ ಅವುಗಳಿಗೆ ಅವಕಾಶಗಳನ್ನು, RBIರವರ ಸೂಚನೆಯಂತೆ ಕಡ್ಡಾಯ ಮಾಡಬೇಕಿರುವ ಅವಕಾಶಗಳನ್ನು ಕಲ್ಪಿಸಲಾಗಿದೆ ಎಂದು, ಇಂತಹ ಅವಕಾಶ ಕಲ್ಪಿಸುವಾಗ್ಗೆ ಸದಸ್ಯರ ಡಿವಿಡೆಂಡ್‌ನ ಹಿತಾಸಕ್ತಿಗೆ ತೊಂದರೆಯಾಗದಂತೆ ಕ್ರಮ ತೆಗೆದುಕೊಂಡಿದೆ ಎಂದರು.

ಅಧ್ಯಕ್ಷರು ತಮ್ಮ ಮಾತು ಮುಂದುವರೆಸಿ ಬ್ಯಾಂಕು ಮಾಡುವ ಅವಕಾಶಗಳಿಂದಾಗಿ ಬ್ಯಾಂಕಿನ ಸ್ವಂತ ನಿಧಿಗಳು ಹೆಚ್ಚಾಗಿ ಬ್ಯಾಂಕಿನ ಸದೃಢತೆ ಹೆಚ್ಚಾಗುತ್ತದೆ ಎಂದು, ಠೇವಣಿದಾರರಿಗೆ ಬ್ಯಾಂಕಿನ ಬಗ್ಗೆ ನಂಬಿಕೆ ಹೆಚ್ಚಿಸಲು ಕಾರಣ ವಾಗುತ್ತದೆ ಎಂದು, ಯಾವುದೇ ಸಂಭವನೀಯ ಕಷ್ಟ ಬಂದರೂ ಠೇವಣಿದಾರರ ಹೂಡಿಕೆ ನಷ್ಟವಾಗುವುದಿಲ್ಲ ಎಂದು ತಿಳಿಸಿದರು.

ಅಧ್ಯಕ್ಷರು ಮುಂದುವರೆದು 2022–23ರ ಸಾಲಿನಲ್ಲಿನಿಂದಲೂ RBIರವರ Repo Rate ಹೆಚ್ಚಳ ಮಾಡಲಾಗಿ ದೇಶದಲ್ಲಿನ ಬ್ಯಾಂಕಿಂಗ್ ಸಂಸ್ಥೆಗಳು ಸಾಲ ಬಡ್ಡಿ ದರ ಹೆಚ್ಚಳ ಮಾಡುತ್ತಿರುವುದಾಗಿ ತಿಳಿಸಿ ನಮ್ಮ ಬ್ಯಾಂಕು ಸಾಲ ಉತ್ತೇಜಿಸಲು ಸಾಲ ಬಡ್ಡಿ ದರಗಳನ್ನು ಶೇಕಡ 1 ರವರೆಗೆ ಕಡಿಮೆ ಮಾಡಿದೆ ಎಂದರು.

ಅಧ್ಯಕ್ಷರು ಮುಂದುವರೆದು RBIರವರು ಬ್ಯಾಂಕುಗಳ ಸುರಕ್ಷತೆ ದೃಷ್ಟಿಯಿಂದ ಬ್ಯಾಂಕಿನ ಒಟ್ಟು ಸಾಲದ ಶೇಕಡ 50 ರಷ್ಟು ಸಾಲಗಳು ಬ್ಯಾಂಕಿನ Tier-I Capital ಶೇಕಡ 0.2ರ ಮಿತಿಯಲ್ಲಿ ಇರಬೇಕೆಂದು ಸೂಚಿಸಿ ಸದರಿ ಮಿತಿಯನ್ನು 2025–26 ರ ಅಂತ್ಯಕ್ಕೆ ತಲುಪಬೇಕಿದ್ದು ಅಂತಹ ಮಿತಿಯಲ್ಲಿ ಬ್ಯಾಂಕಿನ ಸಾಲಗಳು ಈಗಾಗಲೇ ಇರುತ್ತವೆ ಎಂದರು.

ಅಧ್ಯಕ್ಷರು ಮುಂದುವರೆದು ಸದಸ್ಯರೊಬ್ಬರಿಗೆ ಗರಿಷ್ಠ 38 ಕೋಟಿ 42 ಲಕ್ಷ ರೂಪಾಯಿ ಸಾಲ ನೀಡಬಹುದಾಗಿದ್ದರೂ ಬ್ಯಾಂಕಿನ ಸುರಕ್ಷತೆ ದೃಷ್ಟಿಯಿಂದ ಗರಿಷ್ಠ ಸಾಲ ಮಿತಿಯನ್ನು ರೂ. 12 ಕೋಟಿ ಇರಿಸಿರುವುದಾಗಿ ಮತ್ತು 5 ಕೋಟಿ ರೂಪಾಯಿ ಮೀರಿದ ಸಾಲಗಳು ಒಟ್ಟು ಸಾಲದ ಶೇಕಡ 3.42 ರಷ್ಟು ಮಾತ್ರ ಇದೆ ಎಂದು, ಬ್ಯಾಂಕು ಸಾಲಗಳ Risk ನ್ನು Diversify ಮಾಡುವಲ್ಲಿ ಯಶಸ್ವಿಯಾಗಿದೆ ಎಂದರು.

ನಂತರ ಅಧ್ಯಕ್ಷರು ಬ್ಯಾಂಕು ಹಿಂದಿನ ವರ್ಷಗಳಲ್ಲಿ ನೀಡಿರುವ ದಾನ ವಿವರಗಳನ್ನು ಸಂಕ್ಷಿಪ್ತವಾಗಿ ಸಭೆಗೆ ತಿಳಿಸಿ ದಾನಗಳನ್ನು ಸಮಾಜದ ಒಳಿತಿನ ದೃಷ್ಟಿಯಿಂದ ಮಾಡಿದೆ ಎಂದರು.

ಅಧ್ಯಕ್ಷರು ಮುಂದುವರೆದು ದಿನಾಂಕ 31.03.2023 ರಂದಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ತನಿಖಾಧಿಕಾರಿಗಳು ದಿನಾಂಕ 10.07.2023 ರಿಂದ 25.07.2023 ರ ಅವಧಿಯಲ್ಲಿ ತಪಾಸಣೆ ನಡೆಸಿರುವುದನ್ನು ಮತ್ತು ತಪಾಸಣಾ ವರದಿಗೆ ಅನುಪಾಲನಾ ವರದಿ ಸಲ್ಲಿಸಿರುವುದನ್ನು ಸಭೆಗೆ ತಿಳಿಸಿದರು.

ಅಧ್ಯಕ್ಷರು ಮುಂದುವರೆದು RBI ತನಿಖಾಧಿಕಾರಿಗಳು 2022–23ರ ಸಾಲಾಂತ್ಯಕ್ಕೆ ಸಾಲ ಉತ್ಪಾದಕ ಸಾಲವಾಗಿದ್ದರೂ ತನಿಖಾ ವೇಳೆಗೆ ಬಾಕಿಯಾದ ಕಾರಣ ಖಾತೆಗಳಲ್ಲಿ Satisfactory Performance ಇಲ್ಲವೆಂದು ಕಾರಣ ನೀಡಿ ದಿನಾಂಕ 31.03.2023ಕ್ಕೆ ಬ್ಯಾಂಕಿನ ಅನುತ್ಪಾದಕ ಸಾಲಗಳನ್ನು ರೂ.187.83 ಕೋಟಿಗಳಿಂದ ರೂ.

259.15 ಕೋಟಿಗಳಿಗೆ ಹೆಚ್ಚಿಸಲಾಗಿ, ಬ್ಯಾಂಕಿನ Net NPAಗಳು ಶೇಕಡ 6.45 ಆಗಿದ್ದು, ಬ್ಯಾಂಕಿನ ಮೇಲೆ ವಿಧಿಸಿದ್ದ SAF ನಿಯಮ ಮುಂದುವರೆಸಿರುವುದನ್ನು ತಿಳಿಸಿದರು. ಅಧ್ಯಕ್ಷರು ತಮ್ಮ ಮಾತು ಮುಂದುವರೆಸಿ ಸಾಲಾಂತ್ಯ 2023–24ಕ್ಕೆ RBI ನಿಯಮ ಕಟ್ಟುನಿಟ್ಟಾಗಿ ಅಳವಡಿಸಿಕೊಂಡು ಬ್ಯಾಂಕಿನ Net NPA ಗಳನ್ನು ಒಟ್ಟು ಸಾಲದ ಶೇಕಡ ಶೂನ್ಯಕ್ಕೆ ಇಳಿಸಿದೆ ಎಂದು ಮತ್ತು SAಈ ನಿಯಮ ತೆಗೆದುಹಾಕಲು RBIರವರಿಗೆ ಮನವಿ ಮಾಡಿದೆ ಎಂದರು.

ಅಧ್ಯಕ್ಷರು ತಮ್ಮ ಮಾತು ಮುಂದುವರೆಸಿ ದಿನಾಂಕ 31.03.2024 ರಂದಿಗೆ RBI ನಿಯಾಮನುಸಾರ ನಮ್ಮ ಬ್ಯಾಂಕು Financially Sound and Well Managed Status ಹೊಂದಿದ್ದು, ಈ ಬಗ್ಗೆ ಪತ್ರ ಬರೆಯಲಾಗಿದೆ ಎಂದರು.

ಅಧ್ಯಕ್ಷರು ಮುಂದುವರೆದು ಬ್ಯಾಂಕಿನ ಏಳಿಗೆಗಾಗಿ ಅತ್ಯುತ್ತಮ ಸಹಕಾರ ನೀಡುತ್ತಿರುವ ಸದಸ್ಯರುಗಳಿಗೆ ಠೇವಣಿದಾರರುಗಳಿಗೆ, ಸಹಕಾರ ಸಂಘಗಳ ನಿಬಂಧಕರಿಗೆ, ಲೆಕ್ಕ ಪರಿಶೋಧನಾ ಇಲಾಖೆಯ ನಿರ್ದೇಶಕರಿಗೆ, ಲೆಕ್ಕ ಪರಿಶೋಧನೆ ನಡೆಸಿರುವ ಚಾರ್ಟರ್ಡ್ ಅಕೌಂಟೆಂಟ್ ಮೆ॥ ಬಿ.ಆರ್.ಆರ್ ಅಂಡ್ ಕೋ ರವರಿಗೆ, ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೆ, ರಾಷ್ಟ್ರ ಹಾಗೂ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಪದಾಧಿಕಾರಿಗಳಿಗೆ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕಾರ ಮತ್ತು ಮಾರ್ಗದರ್ಶನ ನೀಡುತ್ತಿರುವ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿ, ಇಂದು ನಡೆಯುತ್ತಿರುವ 118ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಕಾರ್ಯ ಕಲಾಪಗಳಲ್ಲಿ ತಾವುಗಳು ಸಕ್ರಿಯವಾಗಿ ಪಾಲ್ಗೊಂಡು ಸಂಸ್ಥೆಯ ಏಳಿಗೆಗಾಗಿ ಅತ್ಯುತ್ತಮ ಸಲಹೆ ಹಾಗೂ ಸೂಚನೆಗಳನ್ನು ನೀಡಬೇಕೆಂದು ಕೋರುತ್ತಾ ಮತ್ತೊಮ್ಮೆ ಹೃತ್ಪೂರ್ವಕವಾಗಿ ಸ್ವಾಗತಿಸಿ ತಮ್ಮ ಅಧ್ಯಕ್ಷ ಭಾಷಣ ಮುಗಿಸಿದರು.

ನಂತರ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀಯುತ.ಪಿ.ಮಂಜುನಾಥರವರು ಅಧ್ಯಕ್ಷರ ಅಪ್ಪಣೆ ಮೇರೆಗೆ 2023–24ನೇ ಸರ್ವಸದಸ್ಯರ ಮಹಾಸಭೆಯ ನೋಟೀಸನ್ನು ಓದಿದ ಮೇಲೆ ಸಭೆಯು ಬಹುಮತದಿಂದ ಒಪ್ಪಿಗೆಯನ್ನು ನೀಡಿ, ದಾಖಲು ಮಾಡಿತು.

ಸಭೆಯು ಮುಂದುವರೆದು ಅಧ್ಯಕ್ಷರಾದ ಶ್ರೀ ಆವಲಹಳ್ಳಿ ಚಂದ್ರಪ್ಪ ಆರ್ ರವರು ಮಾತನಾಡುತ್ತಾ 2023–24ರಲ್ಲಿ ನಮ್ಮ ಬ್ಯಾಂಕಿನ 461 ಸದಸ್ಯರುಗಳು, ಮರಣ ಹೊಂದಿದ್ದು ಅವರುಗಳೆಲ್ಲರ ಆತ್ಮಕ್ಕೆ ಚಿರಶಾಂತಿಯನ್ನು ಕೋರಲು ಹಾಜರಿದ್ದ ಎಲ್ಲರೂ ಎದ್ದು ನಿಂತು ಎರಡು ನಿಮಿಷ ಮೌನವನ್ನಾಚರಿಸಿ ಅಗಲಿದ ಆತ್ಮಗಳಿಗೆ ಶಾಂತಿಯನ್ನು ಕೋರಿತು.

ಬ್ಯಾಂಕಿನ ಸಹಾಯಕ ಪ್ರಧಾನ ವ್ಯವಸ್ಥಾಪಕರಿಂದ ಶ್ರೀ ಸಿ.ಎನ್.ಶೇಷಾದ್ರಿರವರು ಅಧ್ಯಕ್ಷರ ಅಪ್ಪಣೆ ಮೇರೆಗೆ ನೋಟೀಸು ಮತ್ತು ವರದಿಗಳಲ್ಲಿನ ತಿದ್ದುಪಡಿ ಸೂಚಿಸಿದರು.

ನಂತರ ಬ್ಯಾಂಕಿನಲ್ಲಿ ಸದಸ್ಯರಾಗಿ 50 ವರ್ಷ ಪೂರೈಸಿರುವ ಸದಸ್ಯರುಗಳಾದ ಶ್ರೀ ಬೀರಪ್ಪ (ಸದಸ್ಯತ್ವ ಸಂಖ್ಯೆ: R-13472), ಶ್ರೀ ನರಸಿಂಹಮೂರ್ತಿ.ಎನ್.ಕೆ, (ಸದಸ್ಯತ್ವ ಸಂಖ್ಯೆ : R-13726) ರವರುಗಳಿಗೆ ಶಾಲು ಹೊದಿಸಿ ಹಾರ ಸಮರ್ಪಿಸಿ ಸನ್ಮಾನಿಸಲಾಯಿತು.

ಅಧ್ಯಕ್ಷರಾದ ಶ್ರೀ ಆವಲಹಳ್ಳಿ ಚಂದ್ರಪ್ಪ.ಆರ್ ರವರು 2022–23ನೇ ಸಾಲಿನ 117ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಲು ಮಹಾಸಭೆಯ ಅನುಮತಿಯನ್ನು ಕೋರಿದರು. 2022–23ನೇ ಸಾಲಿನ 117ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನಡವಳಿಕೆಯನ್ನು ಅನುಮೋದಿಸಬೇಕೆಂದು ಕೇಳಿದ ನಂತರ ನಡವಳಿಕೆಗಳನ್ನು ದಾಖಲು ಮಾಡಲು ಮಹಾಸಭೆ ಸರ್ವಾನುಮತದಿಂದ ಒಪ್ಪಿಗೆಯನ್ನು ನೀಡಿತು.

ನಂತರ 2024 ನೇ ಮಾರ್ಚ್ 31ಕ್ಕೆ ಆಖೈರಾದ ಕರ್ನಾಟಕ ಸಹಕಾರ ಸಂಘಗಳ ಕಾನೂನು 1959 ರ ಸೆಕ್ಷನ್ 63 (1) ರೀತ್ಯಾ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ನಿರ್ದೇಶಕರು ಸೂಚಿಸಿದ ಪಟ್ಟಿಯಲ್ಲಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿಯೊಂದಿಗೆ ನೇಮಕವಾಗಿರುವ ಚಾರ್ಟರ್ಡ್ ಅಕೌಂಟೆಂಟ್ ರವರಾದ ಮೆ॥ ಬಿ.ಆರ್.ಆರ್.ಅಂಡ್ ಕೋ., ಬೆಂಗಳೂರುರವರು ನೀಡಲ್ಪಟ್ಟಿರುವ 2023–24ನೇ ಸಾಲಿನ ಸರ್ಟಿಫೈಡ್ ಬ್ಯಾಲೆನ್ಸ್ ಷೀಟ್ ಮತ್ತು ಲಾಭ–ನಷ್ಟಗಳ ತಃಖ್ತೆ, ಆಡಳಿತ ಮಂಡಳಿಯವರ ಸಮಜಾಯಿಷಿಗಳೊಂದಿಗೆ ಲೆಕ್ಕ ಪರಿಶೋಧನಾ ವರದಿ, ಸದಸ್ಯತ್ವಕ್ಕೆ ಸೇರ್ಪಡೆ/ಹಿಂತೆಗೆಯುವಿಕೆ ನಿರ್ದೇಶಕ ಮಂಡಳಿ ಸದಸ್ಯರುಗಳಿಗೆ ನೀಡಲಾಗುತ್ತಿರುವ ಸಂಭಾವನೆ,

ಸಿಬ್ಬಂದಿ ವೇತನ, ನೇಮಕಾತಿ ಮತ್ತು ಸೇವಾ ನಿಯಮಗಳು, ಸದಸ್ಯರ ಮರಣ ಪರಿಹಾರ ಪಾವತಿ ನಿಯಮಗಳು ಹಾಗೂ ಮುಂದಿನ ವರ್ಷದ ಕಾರ್ಯಯೋಜನೆ ಒಳಗೊಂಡಂತೆ ಆಡಳಿತ ಮಂಡಳಿ ವರದಿಗಳನ್ನು ಕುರಿತು ಮಾನ್ಯ ಸದಸ್ಯರುಗಳು ಚರ್ಚಿಸಬಹುದೆಂದು ಅಧ್ಯಕ್ಷರು ಸಭೆಗೆ ತಿಳಿಸಿದರು.

ಅಧ್ಯಕ್ಷರು ಮುಂದುವರೆದು ಈ ವಿಷಯದ ಬಗ್ಗೆ ಹಲವು ಸದಸ್ಯರುಗಳು ಬ್ಯಾಂಕಿಗೆ ಪತ್ರ ನೀಡಿ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಲು ಅವಕಾಶ ಕೋರಿರುವುದನ್ನು ತಿಳಿಸಿ, ಅವರ ಹೆಸರನ್ನು ಕರೆದಾಗ ಬಂದು ಮಾತನಾಡಲು ವಿನಂತಿಸಿದರು.

ಶ್ರೀ ಜಿ.ಎಸ್.ಅಂಕೇಶ್, (ಸದಸ್ಯತ್ವ ಸಂಖ್ಯೆ ಆರ್-79549) ರವರು ಮಾತನಾಡಿ ಕಳೆದ 4-5 ವರ್ಷಗಳಲ್ಲಿ ಕೆಲವು ಬ್ಯಾಂಕುಗಳು ತೊಂದರೆಗೀಡಾದವೆಂದು, ಅದಕ್ಕೆ ಕಾರಣ ಆ ಬ್ಯಾಂಕುಗಳು ದೊಡ್ಡ ದೊಡ್ಡ ಸಾಲಗಳನ್ನು ನೀಡಿದಕ್ಕೆ ಮತ್ತು ಅಲ್ಲಿನ ಸಾಲಗಳು ಕೆಲವೇ ವ್ಯಕ್ತಿಗಳಲ್ಲಿ ಕೇಂದ್ರಿಕೃತವಾಗಿರುವುದಕ್ಕೆ ಎಂದು, ನಮ್ಮ ಬ್ಯಾಂಕಿನಲ್ಲಿ ದೊಡ್ಡ ಸಾಲಗಳನ್ನು ಉತ್ತೇಜಿಸದಿರುವುದಕ್ಕೆ, ಸಣ್ಣ ಮೊತ್ತದ ಸಾಲಗಳನ್ನು ಹೆಚ್ಚಿನ ಸದಸ್ಯರುಗಳಿಗೆ ನೀಡಿರುವುದಕ್ಕೆ ನಮ್ಮ ಬ್ಯಾಂಕಿನ ಆರ್ಥಿಕ ಸ್ಥಿತಿಯು ಚೆನ್ನಾಗಿದೆ ಎಂದು ಸಂತೋಷಿಸಿ ಇದನ್ನು ಮುಂದುವರೆಸಲು ಅಧ್ಯಕ್ಷರಲ್ಲಿ ಮನವಿ ಮಾಡಿದರು.

ಶ್ರೀ ಪುನೀತ್.ಕೆ (ಸದಸ್ಯತ್ವ ಸಂಖ್ಯೆ ಆರ್-80491) ರವರು ಮಾತನಾಡಿ ಬ್ಯಾಂಕು ಕಡಿಮೆ ಬಾಡಿಗೆಯಲ್ಲಿ ಸದಸ್ಯರುಗಳಿಗೆ ಲಾಕರ್ ಸೌಲಭ್ಯ ನೀಡಿರುವುದಕ್ಕೆ ತುಂಬಾ ಉಪಯೋಗವಾಗಿದೆ ಎಂದು, ಆಡಳಿತ ಮಂಡಳಿಗೆ ಧನ್ಯವಾದ ತಿಳಿಸಿದರು.

ಶ್ರೀ ಕೆ.ಸಿ. ಶ್ರೀನಿವಾಸ್ (ಆರ್-84111) ರವರು ಮಾತನಾಡಿ ಬ್ಯಾಂಕು ಹಿರಿಯ ನಾಗರೀಕರಿಗೆ ಉಚಿತ ಚೆಕ್ಕು ಪುಸ್ತಕ, ಕಮಿಷನ್ ಇಲ್ಲದೆ ಡಿಡಿ/ಪೇ-ಆರ್ಡರ್ ಸೌಲಭ್ಯ ನೀಡಿರುವುದಕ್ಕೆ, UPI ಸೌಲಭ್ಯ ಒದಗಿಸಿರುವುದಕ್ಕೆ ಅನುಕೂಲವಾಗಿದೆ ಎಂದು ಆಡಳಿತ ಮಂಡಳಿಗೆ ಅಭಿನಂದಿಸಿದರು.

ಶ್ರೀ ಉಮೇಶ್‌ಮೂರ್ತಿ (ಆರ್-77349)ರವರು ಮಾತನಾಡಿ ನಮ್ಮ ಬ್ಯಾಂಕು 117 ವರ್ಷದಿಂದಲೂ ಯಶಸ್ವಿಯಾಗಿ ಸಾಗುತ್ತಿರುವುದು ಹೆಮ್ಮೆ ತಂದಿದೆ ಎಂದರು. ಅವರು ಮುಂದುವರೆದು ಆಡಳಿತ ಮಂಡಳಿ / ಲೆಕ್ಕ ಪರಿಶೋಧನಾ ವರದಿಗಳಲ್ಲಿ ಬ್ಯಾಂಕಿನ ಬಗ್ಗೆ ವಿವರವಾಗಿ ನೀಡಿದೆ ಎಂದು, ಈ ಸಾಲಾಂತ್ಯಕ್ಕೆ ಸ್ವಂತ ನಿಧಿಗಳು 496 ಕೋಟಿ ರೂಪಾಯಿ ಇದ್ದು ಎಂತಹ ಕಷ್ಟ ಪರಿಸ್ಥಿತಿಯನ್ನು ಬ್ಯಾಂಕು ಎದುರಿಸಬಹುದಾಗಿದೆ ಎಂದು ತಿಳಿಸಿ ಆಡಳಿತ ಮಂಡಳಿಗೆ ಅಭಿನಂದನೆ ಸೂಚಿಸಿದರು.

ಶ್ರೀ ವಂಸತ.ಕೆ (ಆರ್-70140)ರವರು ಮಾತನಾಡಿ ಬ್ಯಾಂಕಿನ ಹಣವನ್ನು ಎಲ್ಲಿಯು ಹೋಗದಂತೆ ಕಾಪಾಡುತ್ತಿರುವ ಅಧ್ಯಕ್ಷರು/ಆಡಳಿತ ಮಂಡಳಿಯವರನ್ನು ಶ್ಲಾಘಿಸಿದರು. ಅವರು ಮುಂದುವರೆದು ರಾಜ್ಯದ ಎರಡು ಉನ್ನತ ಬ್ಯಾಂಕುಗಳು ಕಷ್ಟಕ್ಕೆ ಸಿಲುಕಿದ್ದನ್ನು ಉಲ್ಲೇಖಿಸಿ ಇಂತಹ ಕಷ್ಟ ಕಾಲದಲ್ಲೂ ಸಹ ನಮ್ಮ ಬ್ಯಾಂಕ್ ಪ್ರತಿ ವರ್ಷವೂ ಲಾಭ ಗಳಿಸುತ್ತಾ ಸದಸ್ಯರಿಗೆ ಗರಿಷ್ಠ ಡಿವಿಡೆಂಡ್ ನೀಡುತ್ತಿರುವುದಕ್ಕೆ ಗಟ್ಟಿಯಾಗಿ ಮುಂದುವರೆಯುತ್ತಿರುವುದಕ್ಕೆ ಆಡಳಿತ ಮಂಡಳಿಗೆ ಧನ್ಯವಾದ ಹೇಳಿದರು. ಬ್ಯಾಂಕ್ ಈ ರೀತಿ ಯಶಸ್ವಿಯಾಗಿರುವುದಕ್ಕೆ ಬ್ಯಾಂಕ್ ಅನುಸರಿಸಿಕೊಂಡು ಬಂದ ಸಾಲ ನೀತಿ ಕಾರಣ ಎಂದರು.

ಬ್ಯಾಂಕಿನಲ್ಲಿ ದೊಡ್ಡ ಮೊತ್ತದ ಸಾಲಗಳು ಕಡಿಮೆಯಿರುವುದರಿಂದ, Loan Risk Diversify ಆಗಿರುವುದಿರಂದ NPA ಆದಲ್ಲಿ ವಸೂಲಾತಿ ಸಾಧ್ಯವೆಂದು ತಿಳಿಸಿ ಆಡಳಿತ ಮಂಡಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಅಧ್ಯಕ್ಷರು ಈ ಸಂದರ್ಭದಲ್ಲಿ ಮಾತನಾಡಿ ಬ್ಯಾಂಕು ಸದಸ್ಯರೊಬ್ಬರಿಗೆ ರೂ.38 ಕೋಟಿವರೆಗೂ ಸಾಲ ನೀಡಬಹುದಾಗಿದ್ದರೂ ಬ್ಯಾಂಕಿನ ಸುರಕ್ಷತೆ ದೃಷ್ಟಿಯಿಂದ ಸದಸ್ಯರೊಬ್ಬರಿಗೆ ಗರಿಷ್ಠ ರೂ.12 ಕೋಟಿವರೆಗೆ ಸಾಲ ನೀಡಲು ತೀರ್ಮಾನಿಸಲಾಗಿದೆ ಎಂದು, ಅಂತಹ ಸಾಲಗಳು ಬ್ಯಾಂಕಿನಲ್ಲಿ ಕೇವಲ ಒಂದು ಇರುತ್ತದೆಂದು, ರೂ.5 ಕೋಟಿಯಿಂದ ಸಾಲಗಳು ಕೇವಲ ಆರು ಇರುತ್ತದೆಂದು, ಹೆಚ್ಚಿನ ಸಾಲಗಳು ರೂ. 1 ಕೋಟಿಯೊಳಗೆ ಇರುತ್ತವೆ ಎಂದರು.

ಶ್ರೀ ಡಿ.ಎಂ.ಅಶ್ವತ್ಥಕುಮಾರ್ (ಆರ್-24365)ರವರು ಮಾತನಾಡಿ ಬ್ಯಾಂಕು Digital Payment ಅಳವಡಿಸಿರುವುದು ಒಳ್ಳೆಯದು ಎಂದರು. ಅವರು ಮುಂದುವರೆದು ಗ್ರಾಮೀಣ ಭಾಗಗಳಲ್ಲಿ ಶಾಖೆ ತೆರೆಯಲು

ಸಲಹೆ ಮಾಡಿದರು. ತಾವು ರಾಮನಗರ ಶಾಖೆಯಲ್ಲಿ ಸದಸ್ಯರಾಗಿದ್ದು ಸಿಬ್ಬಂದಿಗಳು ಉತ್ತಮ ಸೇವೆ ನೀಡುತ್ತಾರೆ, ಸಾಲ ನೀಡಲು ಸತಾಯಿಸಿರುವುದಿಲ್ಲ ಎಂದು ಧನ್ಯವಾದ ತಿಳಿಸಿದರು.

ಅಧ್ಯಕ್ಷರು ಮಾತನಾಡಿ ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯಾದ್ಯಂತ ಶಾಖೆಗಳನ್ನು ತೆರೆಯಲು ಗುರಿ ಇರಿಸಿಕೊಳ್ಳಲಾಗಿದೆ ಎಂದರು.

ಶ್ರೀ ಅಭಿಷೇಕ.ಬಿ (ಆರ್–85579) ರವರು ಮಾತನಾಡಿ ನಮ್ಮ ಬ್ಯಾಂಕಿನ ಬಗ್ಗೆ ಮಾತನಾಡಲು ಸಂತೋಷವಾಗುತ್ತದೆ ಎಂದು, ಬ್ಯಾಂಕ್ ಬೆಳೆಯಲು ಅದರ ಕಾರ್ಯ ವೈಖರಿ ಕಾರಣ ಎಂದು, ಬೆಳವಣಿಗೆಗೆ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳು ಶ್ರಮ ವಹಿಸಿರುತ್ತಾರೆಂದು, 118 ವರ್ಷ ಇತಿಹಾಸ ಹೊಂದಿರುವ ಬ್ಯಾಂಕು ಠೇವಣಿಯಲ್ಲಿ, ನಿಧಿಯಲ್ಲಿ, ಸಾಲ ನೀಡಿಕೆಯಲ್ಲಿ, ಲಾಭ ಗಳಿಕೆಯಲ್ಲಿ ಉತ್ತಮ ಸಾಧನೆ ಮಾಡಿದೆ ಎಂದು ಅಂಕಿ ಅಂಶಗಳ ಸಮೇತ ಹೇಳಿದರು. ಬ್ಯಾಂಕು ಗ್ರಾಹಕರ ದೊಡ್ಡ ಮೊತ್ತದ ಚೆಕ್ಕು ಪಾವತಿಸುವಾಗ ದೃಢೀಕರಿಸಿಕೊಳ್ಳುವ ಪದ್ಧತಿ ಅನುಸರಿಸುವುದು, ಯಾವುದೇ ಕೊರತೆಯಿಲ್ಲದೆ ಸೇವೆ ನೀಡುತ್ತಿರುವುದು ಪ್ರಶಂಶನೀಯ ಎಂದು ಹೇಳಿ ಬ್ಯಾಂಕ್ ಇನ್ನೂ ಪ್ರಗತಿಯಾಗಲಿ ಎಂದರು.

ಶ್ರೀ ರಂಗನಾಥ.ಹೆಚ್ (ಆರ್–67345) ರವರು ಮಾತನಾಡಿ ಕಾರ್ಯಕಾರಿ ಸಮಿತಿ ಉತ್ತಮವಾಗಿ ಸಭೆ ನಡೆಸುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಬ್ಯಾಂಕಿನಲ್ಲಿ ಸಿಬ್ಬಂದಿಗಳು ಉತ್ತಮ ಸೇವೆ ನೀಡುತ್ತಿರುತ್ತಾರೆಂದು, ಅದು ಬ್ಯಾಂಕಿನ ಉನ್ನತ ಸ್ಥಿತಿಗೆ ಕಾರಣ ಎಂದು, ಸರ್ವಸದಸ್ಯರ ಸಭೆಯಲ್ಲಿ ನೀಡುವ ನಗದನ್ನು ಸದಸ್ಯರ ಉಳಿತಾಯ ಖಾತೆಗೆ ಜಮಾ ಮಾಡಬೇಕೆಂದು ಕೋರಿದಾಗ ಅಧ್ಯಕ್ಷರು ಉತ್ತರಿಸಿ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸುವ ಸದಸ್ಯರುಗಳಿಗೆ ಮಾತ್ರ ಹಣ ನೀಡಬೇಕಾಗಿರುವುದರಿಂದ ಸದಸ್ಯರ ಕೋರಿಕೆ ಪರಿಗಣಿಸಲಾಗುವುದಿಲ್ಲ ಎಂದರು.

ಶ್ರೀ ಕೃಷ್ಣದೇವರಾಜ್ (ಆರ್–81607) ರವರು ಮಾತನಾಡಿ ಸರ್ವಸದಸ್ಯರ ಸಭೆಗೆ ಹಾಜರಾದ ಸದಸ್ಯರುಗಳಿಗೆ ನಗದು ನೀಡುತ್ತಿರುವುದು ಸರಿಯಾದ ಕ್ರಮ ಎಂದು, ಸಭೆ ನಡೆಸಲು ತೆಗೆದುಕೊಂಡಿರುವ ಕ್ರಮಗಳು ಸಹ ಸರಿಯಾಗಿರುತ್ತವೆ ಎಂದು, ಹಲವು ಬ್ಯಾಂಕುಗಳು ಮುಚ್ಚಿ ಹೋಗುತ್ತಿರುವಾಗ ನಮ್ಮ ಬ್ಯಾಂಕು ಚೆನ್ನಾಗಿ ಹೋಗುತ್ತಿರುವುದಕ್ಕೆ ಅಧ್ಯಕ್ಷರು ಕಾರಣ ಎಂದು, ಮೇಟಿ ಚೆನ್ನಾಗಿರುವುದಕ್ಕೆ ಡ್ಯೂಟಿ ಚೆನ್ನಾಗಿರುತ್ತದೆಂದು, ಅಭಿನಂದಿಸಿ ಅಧ್ಯಕ್ಷರಾಗಿ ಚಂದ್ರಪ್ಪ ರವರೇ ಮುಂದುವರೆಯಲಿ ಎಂದರು. ಅವರು ಮುಂದುವರೆದು ಬ್ಯಾಂಕಿನ ಸಿಬ್ಬಂದಿಗಳು ಸಹ ಗ್ರಾಹಕರೊಂದಿಗೆ ಉತ್ತಮವಾಗಿ ಸಹಕರಿಸುತ್ತಾರೆ ಎಂದರು.

ಶ್ರೀ ಸಿ.ವಿ.ಶ್ರೀನಿವಾಸ್ (ಸದಸ್ಯತ್ವ ಸಂಖ್ಯೆ ಆರ್–21460) ರವರು ಮಾತನಾಡಿ ಸಿಬ್ಬಂದಿಗಳು ಬ್ಯಾಂಕಿನಲ್ಲಿ ಉತ್ತಮವಾಗಿ ಸಹಕರಿಸುತ್ತಾರೆಂದು, ಗುಂತಾಯಗಳನ್ನು ಸರ್ಕಾರಿ ಸಾಲ ಪತ್ರಗಳಲ್ಲಿ ಹೂಡಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಸ್ವಂತ ಕಟ್ಟಡ ಹೊಂದಲು ಕ್ರಮವಹಿಸಿರುವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಆವಲಹಳ್ಳಿ ಶಾಖೆಗೆ ಸ್ವಂತ ಕಟ್ಟಡ ಕಟ್ಟಲು ಕ್ರಮವಹಿಸಲು ಮನವಿ ಮಾಡಿದರು. ಅವರು ಮುಂದುವರೆದು ಸದಸ್ಯರುಗಳಿಗೆ ವೈದ್ಯಕೀಯ ವೆಚ್ಚ ಪಾವತಿ, ಹಿರಿಯ ಗ್ರಾಹಕರಿಗೆ ಸನ್ಮಾನ, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಸಾಮಾಜಿಕ ಕಾರ್ಯಗಳಿಗೆ ದಾನಗಳನ್ನು ನೀಡಿರುವುದರ ಬಗ್ಗೆ ಕ್ರಮ ಅಳವಡಿಸಿರುವುದಕ್ಕೆ ಧನ್ಯವಾದ ಹೇಳಿದರು. ಅವರು ಮುಂದುವರೆದು 2023–24 ರ ಸಾಲಿನ ವರದಿ ಪುಸ್ತಕಗಳಲ್ಲಿ ಎಲ್ಲಾ ವಿವರಗಳನ್ನು ಸಾಂಗವಾಗಿ ತಿಳಿಸಿರುತ್ತಾರೆಂದು ಹೇಳಿದರು. ಅವರು ಮುಂದುವರೆದು 5 ಕೋಟಿ ಮೀರಿದ ಸಾಲಗಳನ್ನು ನೀಡಬಾರದೆಂದು ಸಲಹೆ ಮಾಡಿದರು. ನಮ್ಮ ಬ್ಯಾಂಕು RBI ನೀತಿಯನುಗುಣವಾಗಿ ಕಾರ್ಯ ನಡೆಸುತ್ತಿರುವುದರಿಂದ ಚೆನ್ನಾಗಿದೆ ಎಂದು ಹೇಳಿದರು. ಅವರು ಮುಂದುವರೆದು 2023–24ರ ಸಾಲಿನ ಲೆಕ್ಕ ಪತ್ರಗಳನ್ನು/ವರದಿಗಳನ್ನು ಸಭೆಯು ಅನುಮೋದಿಸಲು ಕೋರಿದರು. ಅಧ್ಯಕ್ಷರು ಉತ್ತರಿಸುತ್ತಾ ಸದಸ್ಯರ ಸಲಹೆಗಳನ್ನು ಅಳವಡಿಸುವುದರ ಬಗ್ಗೆ ಕ್ರಮವಹಿಸಲಾಗುವುದು ಎಂದರು.

ಶ್ರೀ ನಾರಾಯಣ ಪ್ರಸಾದ್.ಎಂ.ವಿ (ಸದಸ್ಯತ್ವ ಸಂಖ್ಯೆ ಎ–8662) ರವರು ಮಾತನಾಡಿ ನಕಲಿ ಚಿನ್ನಾಭರಣ ಸಾಲಗಳ ವಸೂಲಾತಿಗೆ ಕ್ರಮ ಕೋರಿದರು. ಅಧ್ಯಕ್ಷರು ಉತ್ತರಿಸಿ ವಸೂಲಿ ಮಾಡಲಾಗುವುದು ಎಂದರು.

ಶ್ರೀ ಹೆಚ್.ಆರ್. ರಾಮಪ್ರಸಾದ್ (ಆರ್–23641) ರವರು ಮಾತನಾಡಿ ಸರ್ವಸದಸ್ಯರ ಸಭೆಗೆ ಹಾಜರಾಗುವ ಸದಸ್ಯರಿಗೆ ರೂ.500/– ಪಾವತಿಸಬೇಕೆಂದು ಕೋರಿದಾಗ ಅಧ್ಯಕ್ಷರು ಉತ್ತರಿಸಿ ಪರಿಶೀಲಿಸಲಾಗುವುದು ಎಂದರು.

ಶ್ರೀ ವೀರಣ್ಣ ಬಿ (ಸದಸ್ಯತ್ವ ಸಂಖ್ಯೆ ಆರ್–30175) ರವರು ಮಾತನಾಡಿ ಬ್ಯಾಂಕಿನ ಆವಲಹಳ್ಳಿ ಶಾಖೆಯು ಮೊದಲನೇ ಮಹಡಿಯಲ್ಲಿರುವುದರಿಂದ ಹಿರಿಯ ಗ್ರಾಹಕರಿಗೆ ತೊಂದರೆಯಾಗುತ್ತಿದೆ ಎಂದು, ನೆಲಮಹಡಿಗೆ ಸ್ಥಳಾಂತರ ಮಾಡಲು ಈ ವರ್ಷವೇ ಬ್ಯಾಂಕ್ ಹೊಂದಿರುವ ನಿವೇಶನದಲ್ಲಿ ಶಂಕು ಸ್ಥಾಪನೆ ಮಾಡಲು ಕೋರಿದಾಗ ಅಧ್ಯಕ್ಷರು ಉತ್ತರಿಸಿ ಇಲಾಖಾ ಅನುಮತಿಯೊಂದಿಗೆ ಕಟ್ಟಡ ನಿರ್ಮಿಸಬೇಕಾಗುತ್ತದೆ ಎಂದು ತಿಳಿಸಿ ಈ ಬಗ್ಗೆ ಕ್ರಮವಹಿಸ ಲಾಗುವುದು ಎಂದರು.

ಶ್ರೀ ವಿಜಯಕುಮಾರ್ ಎಂ. (ಸದಸ್ಯತ್ವ ಸಂಖ್ಯೆ ಆರ್–65883), ರವರು ಮಾತನಾಡಿ ನಮ್ಮ ಬ್ಯಾಂಕ್ ಅಧ್ಯಕ್ಷರು/ ಉಪಾಧ್ಯಕ್ಷರ ನೇತೃತ್ವದಲ್ಲಿ ಚೆನ್ನಾಗಿ ಸಾಗುತ್ತಿದೆ ಎಂದು, 2023–24ರ ಸಾಲಾಂತ್ಯಕ್ಕೆ

RBI ನೀತಿಯನ್ವಯ Financially Sound and Well Managed Bank Statμ ಹೊಂದಿರುವುದಕ್ಕೆ, CRAR ಶೇಕಡ 25 ಇರುವುದಕ್ಕೆ, UPI ಅಳವಡಿಸಿರುವುದಿಕ್ಕೆ ಪ್ರಶಂಸಿದರು.

ಶ್ರೀ ಸುರೇಂದ್ರಬಾಬು.ಜೆ (ಸದಸ್ಯತ್ವ ಸಂಖ್ಯೆ: ಎ–9883) UPI ವ್ಯವಸ್ಥೆ ಯಾವಾಗ ಕೊಡುತ್ತೀರಾ ಎಂದು ಪ್ರಶ್ನಿಸಿದಾಗ ಅಧ್ಯಕ್ಷರು ಉತ್ತರಿಸಿ UPI ಈಗಾಗಲೇ ಜಾರಿಯಾಗಿದೆ ಎಂದು ಸದಸ್ಯರಿಗೆ ತಮ್ಮ ಶಾಖೆಯನ್ನು ಸಂಪರ್ಕಿಸಲು ಕೋರಿದರು.

ಶ್ರೀ ಮಲ್ಲಿಕಾರ್ಜುನ (ಸದಸ್ಯತ್ವ ಸಂಖ್ಯೆ : ಆರ್–89574) ರವರು ಮಾತನಾಡಿ ತಾವು ಚಾಮರಾಜಪೇಟೆ (ಪಶ್ಚಿಮ) ಶಾಖೆಯಲ್ಲಿ ಸಾಲ ತೆಗೆದುಕೊಂಡಿರುವುದಾಗಿ ಯಾವುದೇ ತೊಂದರೆ ಇಲ್ಲದೆ ಸಾಲ ನೀಡಲಾಗಿದೆ ಎಂದು ತಿಳಿಸಿ ತಮ್ಮ ಸ್ವಂತ ಕನಸಿನ ಮನೆಗೆ ಬ್ಯಾಂಕು ಕಾರಣವಾಗಿದೆ ಎಂದರು.

ಶ್ರೀ ಕೃಷ್ಣಪ್ಪ ಎಸ್.ವಿ (ಸದಸ್ಯತ್ವ ಸಂಖ್ಯೆ: ಆರ್–76686) ಬ್ಯಾಂಕಿನ ಕೆ.ಆರ್.ಪುರಂ ಶಾಖೆ ಸಿಬ್ಬಂದಿಗಳು ಚೆನ್ನಾಗಿ ಕೆಲಸ ಮಾಡುತ್ತಾರೆಂದು, ಶಾಖೆಯು ಮೊದಲನೇ ಮಹಡಿಯಲ್ಲಿರುವುದರಿಂದ ಹಿರಿಯ ಗ್ರಾಹಕರಿಗೆ ತೊಂದರೆ ತೊಂದರೆಯಾಗುತ್ತಿರುವುದರಿಂದ ನೆಲ ಮಹಡಿಯ ಸ್ಥಳಕ್ಕೆ ಸ್ಥಳಾಂತರಿಸಬೇಕೆಂದು ಕೋರಿದಾಗ ಅಧ್ಯಕ್ಷರು ಉತ್ತರಿಸಿ ಈ ಬಗ್ಗೆ ಈಗಾಗಲೇ ಪರಿಶೀಲಿಸಿರುವುದಾಗಿ ತಿಳಿಸಿ ಸೂಕ್ತ ಸ್ಥಳ ದೊರಕಿಲ್ಲವೆಂದು ಮುಂದೆ ಕ್ರಮ ವಹಿಸಲಾಗುವುದು ಎಂದರು. ಇದೇ ಸದಸ್ಯರು ಮಾತನಾಡಿ ಶಿವರಾಮ ಕಾರಂತನಗರ, ಹೆಗ್ಗಡೆ ನಗರದಲ್ಲಿ ಶಾಖೆ ತೆರೆದಲ್ಲಿ ಅನುಕೂಲವಾಗುತ್ತದೆ ಎನ್ನಲು ಅಧ್ಯಕ್ಷರು ಉತ್ತರಿಸಿ ಪರಿಶೀಲನೆ ಮಾಡಿ RBI ಅನುಮತಿ ಇತ್ತಲ್ಲಿ ಕ್ರಮವಹಿಸ ಲಾಗುವುದು ಎಂದರು.

ಅಧ್ಯಕ್ಷರು ಮಾತು ಮುಂದುವರೆಸಿ ಕೆಲವು ಸದಸ್ಯರು ಪತ್ರ ನೀಡಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದಾಗಿ ಹೇಳಿ 1) ಶ್ರೀ ಎಂ.ಎಸ್. ಶ್ರೀನಿವಾಸ್, (ಆರ್–33667)ರವರು ಶಾಖೆಗಳಿಗೆ ಸ್ವಂತ ಕಟ್ಟಡ ಹೊಂದಲು ಕಟ್ಟಡ ನಿಧಿಗೆ ಲಾಭ ಹಂಚಿಕೆಯಲ್ಲಿ ಶೇಕಡ 25 ರಷ್ಟು ತೆಗೆದಿರಿಸಲು ಸಲಹೆ ಮಾಡಿರುತ್ತಾರೆಂದು ತಿಳಿಸಿ ಅವಶ್ಯ ಸಂದರ್ಭದಲ್ಲಿ ಮುಂದಿನ ದಿನಗಳಲ್ಲಿ ಅಳವಡಿಸಿಕೊಳ್ಳಲಾಗುವುದು ಎಂದರು.

2) ಶ್ರೀ ತೀರ್ಥಪ್ರಸಾದ್ (ಆರ್–28187) ರವರು ಸಿಬ್ಬಂದಿಗಳಿಗೆ ಹೆಚ್ಚಿನ ತರಬೇತಿ ಕಾರ್ಯಕ್ರಮ ಅಳವಡಿಸ ಬೇಕೆಂದು ಸಲಹೆ ಮಾಡಿರುವುದನ್ನು ತಿಳಿಸಿ ಬ್ಯಾಂಕು ಶಾಖಾಧಿಕಾರಿಗಳಿಗೆ AO ಮಟ್ಟದಲ್ಲಿ ಪ್ರತಿ ಮಾಹೆ ಸಭೆ ನಡೆಸಿ ಅಗತ್ಯ ಮಾಹಿತಿ ನೀಡುತ್ತಿರುವುದಾಗಿ, ಹಾಗೆಯೇ ಶಾಖಾ ಮಟ್ಟದಲ್ಲಿ ಎಲ್ಲಾ ಸಿಬ್ಬಂದಿಗಳಿಗೆ ಪ್ರತಿ ಮಾಹೆ ಸಭೆ ನಡೆಸಿ ಅಗತ್ಯ ಮಾಹಿತಿ ನೀಡುತ್ತಿರುವುದನ್ನು, RBI, Federationಗಳು, ಸಹಕಾರ ತರಬೇತಿ ಕಾಲೇಜುಗಳೂ ನಡೆಸುವ ತರಬೇತಿ ಕಾರ್ಯಕ್ರಮಗಳಿಗೆ ಸಿಬ್ಬಂದಿಯವರುಗಳನ್ನು ಕಳುಹಿಸಲಾಗುತ್ತಿದೆ ಎಂದರು.

3) ಶ್ರೀ ನರಸಿಂಹಲು (ಸದಸ್ಯತ್ವ ಸಂಖ್ಯೆ ಆರ್–48268) ರವರು ಮಾತನಾಡಿ ಬ್ಯಾಂಕು CRAR ಶೇಕಡ 25.06 ಹೊಂದಿರುವುದು, ಸರ್ಕಾರಿ ಸಾಲ ಪತ್ರಗಳಲ್ಲಿ ಹಣ ಹೂಡಿರುವುದು ಇತ್ಯಾದಿ ಬ್ಯಾಂಕಿನ ಠೇವಣಿ ಸುರಕ್ಷತೆ ಸೂಚಿಸುತ್ತವೆ ಅಂದಿರುತ್ತಾರೆ ಎಂದರು.

4) ಶ್ರೀ ಎಂ.ಪ್ರಸಾದ್ (ಆರ್–98756) ರವರು ಸುಸ್ತಿದಾರ ಸದಸ್ಯರುಗಳಿಗೆ ಮಹಾಸಭೆಯಲ್ಲಿ ಮತ ನೀಡದಿರುವುದಕ್ಕೆ ಕಾರಣ ಕೇಳಿರುತ್ತಾರೆಂದು ತಿಳಿಸಿ, ಇದು ಸಹಕಾರ ಕಾಯಿದೆ ರೀತ್ಯಾ ಇರುತ್ತದೆ ಎಂದರು.

5) ಶ್ರೀಮತಿ ಮಮತ.ಎನ್.ಕೆ (ಆರ್–97521) ರವರು ಮೂರು ವರ್ಷಗಳಿಗೂ ಮೀರಿದ ಡಿವಿಡೆಂಡ್‌ನ್ನು ರಿಸರ್ವ್ ಫಂಡ್‌ಗೆ ವರ್ಗಾಹಿಸುವುದು ಏತಕ್ಕೆ? ಎಂದು ಕೇಳಿರುತ್ತಾರೆಂದು ತಿಳಿಸಿ, ಇದು ಸಹಕಾರ ಕಾಯಿದೆ ರೀತ್ಯಾ ಮಾಡಬೇಕಾಗಿದೆ ಎಂದರು. ಅಧ್ಯಕ್ಷರು ಮುಂದುವರೆದು ಸದಸ್ಯರು ಬ್ಯಾಂಕಿನಲ್ಲಿ ಉಳಿತಾಯ ಖಾತೆ ಹೊಂದಿದ್ದಲ್ಲಿ ಆಯಾ ವರ್ಷ ಅವರ ಡಿವಿಡೆಂಡ್‌ನ್ನು ಅಂತಹ ಉಳಿತಾಯ ಖಾತೆಗೆ ವರ್ಗಾಯಿಸಲಾಗುವ ನೀತಿ ಅಳವಡಿಸಿಕೊಂಡಿರುವುದನ್ನು ಸಭೆಯ ಗಮನಕ್ಕೆ ತಂದರು.

6) ಶ್ರೀ ಚೇತನಗೌಡ (ಆರ್–92951) ರವರು ಬ್ಯಾಂಕಿನ ಒಟ್ಟು ಸಾಲದ ಶೇಕಡ 50 ರಷ್ಟು ಸಾಲಗಳು ಬ್ಯಾಂಕಿನ Tier-I Capitalನ ಶೇಕಡ 0.2ರ ಮಿತಿಯಲ್ಲಿರಬೇಕೆಂದು ತಿಳಿಸಿದ್ದೀರಿ. ಇದರಿಂದ ಸಾಲಗಳ ಬೆಳವಣಿಗೆಗೆ ತೊಂದರೆಯಾಗುವುದಿಲ್ಲವೆ? ಎಂದು ಪ್ರಶ್ನಿಸಿರುತ್ತಾರೆಂದು ತಿಳಿಸಿ, ಈ ನೀತಿಯನ್ನು RBIರ ನಿಯಮಗಳನ್ವಯ ಅಳವಡಿಸಲಾಗಿದೆ ಎಂದರು. ಅಧ್ಯಕ್ಷರು ಮುಂದುವರೆದು ಇಂತಹ ನೀತಿಯಿಂದ ಬ್ಯಾಂಕು ಎಂದಿಗೂ ಸುಭದ್ರತೆಯಿಂದ ಇರುತ್ತದೆ ಎಂದರು.

7) ಶ್ರೀ ರಂಗಸ್ವಾಮಿ ಎನ್.ಹೆಚ್. (ಆರ್–64641) ರವರು ಬ್ಯಾಂಕಿನ ಒಟ್ಟು ಸಾಲಗಳನ್ನು ಹೆಚ್ಚಿಸಲು ಸಲಹೆ ನೀಡಿರುತ್ತಾರೆಂದು ತಿಳಿಸಿ, ಬ್ಯಾಂಕು ಈ ದಿಸೆಯಲ್ಲಿ ಬಡ್ಡಿ ಇಳಿಕೆ ಮಾಡಿರುವುದು, ಶೀಘ್ರ ಅರ್ಜಿ ಪರಿಗಣಿಸಲು ಪ್ರಧಾನ ವ್ಯವಸ್ಥಾಪಕರುಗಳಿಗೆ ರೂ.25 ಲಕ್ಷಗಳವರೆಗೆ ಸಾಲ ಮಂಜೂರು ಮಾಡಲು ಅಧಿಕಾರ ನೀಡಿದೆ ಎಂದು, ಸೇವಾ ಶುಲ್ಕ ಇಳಿಕೆ, ಪ್ರತಿ ಮಾಹೆ ಎರಡು ಆಡಳಿತ ಮಂಡಳಿ ಸಭೆ ನಡೆಸಿ ಸಾಲ ಮಂಜೂರು ಮಾಡುವುದು ಇತ್ಯಾದಿ ಕ್ರಮ ಅನುಸರಿಸಿರುವುದನ್ನು ಸಭೆಗೆ ತಿಳಿಸಿದರು. ಅಧ್ಯಕ್ಷರು ಮುಂದುವರೆದು 450 ಕೋಟಿ ರೂ. ಸಾಲ ನೀಡಬಹುದಾದ ಹಣ ಬ್ಯಾಂಕಿನಲ್ಲಿದ್ದು ಅದನ್ನು ಸರ್ಕಾರಿ ಸಾಲಪತ್ರಗಳಲ್ಲಿ ಹೂಡಿಕೆ ಮಾಡಿದೆ ಎಂದು ಸದಸ್ಯರು ತಮ್ಮ ಬಂಧುಮಿತ್ರರನ್ನು ಬ್ಯಾಂಕಿಗೆ ಪರಿಚಯಿಸಿ ಅವರಿಗೆ ಸಾಲ ಅವಶ್ಯಕತೆ ಇದ್ದಲ್ಲಿ ನಮ್ಮ ಬ್ಯಾಂಕಿನ ಮೂಲಕ ಪಡೆಯಲು ಸಹಕರಿಸಬೇಕೆಂದು ಕೋರುತ್ತೇನೆ ಎಂದರು.

8) ಶ್ರೀ ಬಿ.ಎಸ್.ರಾಮದಾಸ್ (ಆರ್–66066) ರವರು ಬ್ಯಾಂಕಿನಲ್ಲಿ ಸಿಬ್ಬಂದಿಗಳು Very Cooperative in Nature ಎಂದು, Net NPA ಶೂನ್ಯ ಇರುವುದಕ್ಕೆ, ನಿವ್ವಳ ಲಾಭ 28.50 ಕೋಟಿ ಇರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಠೇವಣಿ ಬಡ್ಡಿ ದರ ಹೆಚ್ಚಿಸುವಂತೆ ಕೋರಿರುತ್ತಾರೆಂದು ತಿಳಿಸಿ, ಬ್ಯಾಂಕ್ ಈಗಾಗಲೇ ಶೇಕಡ 7.50 ಸಾಮಾನ್ಯರಿಗೆ, ಹಿರಿಯ ನಾಗರೀಕರಿಗೆ ಶೇಕಡ 8.25 ರವರೆಗೆ ಬಡ್ಡಿ ನೀಡಲು ಅವಕಾಶ ಮಾಡಿದೆ ಎಂದು, ಠೇವಣಿ ಬಡ್ಡಿ ದರಗಳು ಈಗಾಗಲೇ ಆಕರ್ಷಕವಾಗಿರುವುದನ್ನು ಸದಸ್ಯರು ಗಮನಿಸಬೇಕೆಂದು ಎಂದರು.

9) ಶ್ರೀ ಸುನೀಲ್‌ಕುಮಾರ್.ಬಿ (ಆರ್–91994) ರವರು ಕ್ಲೇಮ್ ಮಾಡದ ಠೇವಣಿಗಳ ಬಗ್ಗೆ, ಗ್ರಾಹಕರುಗಳಿಗೆ ದೂರವಾಣಿ ಮೂಲಕ, ಪತ್ರ ಬರೆಯುವ ಮೂಲಕ ಸಂಪರ್ಕಿಸಿ ಕ್ರಮ ಇಡಬೇಕೆಂದು ಕೋರಿರುವುದನ್ನು ತಿಳಿಸಿ, ಈಗಾಗಲೇ ಅಂತಹ ಕ್ರಮ ಅಳವಡಿಸಿಕೊಂಡಿದೆ ಎಂದರು.

ಶ್ರೀ ವೃಷಭರಾಜು.ಪಿ (ಆರ್–90998) ರವರು ಮಾತನಾಡಿ ಬ್ಯಾಂಕಿನಲ್ಲಿ ಠೇವಣಿಗಳಿಗೆ Auto Renewal ಸೌಲಭ್ಯ ಒದಗಿಸಿಬೇಕೆಂದು ತಿಳಿಸಿದಾಗ ಅಧ್ಯಕ್ಷರು ಉತ್ತರಿಸಿ ಈಗಾಗಲೇ Auto Renewal ಜಾರಿಯಲ್ಲಿದೆ ಎಂದರು.

ನಂತರ ಅಧ್ಯಕ್ಷರು ಮಾತನಾಡಿ ಸರ್ವಸದಸ್ಯರ ಸಭೆ ವಿಷಯ ಸಂಖ್ಯೆ 6 (ಅಂದರೆ 2023–24 ಸಾಲಿನ ಆರ್ಥಿಕ ತಃಖ್ತೆ, ಲೆಕ್ಕ ಪರಿಶೋಧನಾ ವರದಿ, ಆಡಳಿತ ಮಂಡಳಿ ವರದಿ ಇತ್ಯಾದಿ) ಕ್ಕೆ ಸಭೆಯು ಅನುಮೋದಿಸಲು ಕೋರಿದಾಗ ಮಹಾಸಭೆಯಲ್ಲಿನ ಸದಸ್ಯರು ಕೈ ಎತ್ತುವ ಮೂಲಕ ಸರ್ವಾನುಮತದಿಂದ ಅನುಮೋದಿಸಿತು.

ಅಧ್ಯಕ್ಷರು ವಿಷಯ ಸಂಖ್ಯೆ 7 2023–24ನೇ ಸಾಲಿನ ನಿವ್ವಳ ಆದಾಯದ ಹಂಚಿಕೆಯನ್ನು ತೀರ್ಮಾನಿಸುವ ಬಗ್ಗೆ ವಿಷಯ ಮಂಡಿಸಿ ಬ್ಯಾಂಕಿನ ಆಡಳಿತ ಮಂಡಳಿಯು ಶೇಕಡ 15 ರಂತೆ ಡಿವಿಡೆಂಡ್ ನೀಡಲು, ಶಿಫಾರಸ್ಸು ಮಾಡಿದೆ

ಎಂದು, ಭಾರತೀಯ ರಿಸರ್ವ್ ಬ್ಯಾಂಕ್‌ನವರು ಶೇಕಡ 10 ರಂತೆ ಡಿವಿಡೆಂಡ್ ನೀಡಲು ಅನುಮತಿಸಿದ್ದು, ಬ್ಯಾಂಕು ಮರು ಪರಿಶೀಲಿಸುವಂತೆ RBI ರವರನ್ನು ಕೋರಿದ್ದು, RBIರವರ ಅನುಮತಿಯಂತೆ 2023–24ನೇ ಸಾಲಿಗೆ ಡಿವಿಡೆಂಡ್ ನೀಡಲು ಮತ್ತು ಈ ಸಂಬಂಧದಲ್ಲಿ ಉಳಿದ ಮೊಬಲಗನ್ನು ಕರಡು ಸಾಲಗಳ ನಿಧಿಗೆ ವರ್ಗಾಯಿಸಲು ಸದಸ್ಯರನ್ನು ಕೋರಿದಾಗ ಸರ್ವಸದಸ್ಯರ ಮಹಾಸಭೆಯು ಕೈ ಎತ್ತುವ ಮೂಲಕ ಸರ್ವಾನುಮತದಿಂದ ಅನುಮೋದಿಸಿತು.

ನಂತರ ಅಧ್ಯಕ್ಷರು ವಿಷಯ : 8 ಪ್ರಸ್ತಾಪಿಸಿ 2023–24ರ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಿಗೆ ಖರ್ಚಾಗಿರುವುದನ್ನು ಅನುಮೋದಿಸುವ ಮತ್ತು 2024–25 ರ ಸಾಲಿನ ಪರಿಷ್ಕೃತ ಹಾಗೂ 2025–26ನೇ ಸಾಲಿನ ಆಯವ್ಯಯ ಪಟ್ಟಿ ಪರಿಶೀಲಿಸಿ ಅನುಮೋದಿಸುವ ವಿಷಯ ಮಂಡಿಸಿ 2023–24ರ ಸಾಲಿನಲ್ಲಿ ಯಾವುದೇ ವೆಚ್ಚಗಳು ಅಂದಾಜು ವೆಚ್ಚ ಮೀರಿರುವುದಿಲ್ಲ ಎಂದು ತಿಳಿಸಿ ಅನುಮೋದಿಸಲು ಸಭೆಯನ್ನು ಕೋರಲಾಗಿ, ಮಹಾಸಭೆಯು ಕೈ ಎತ್ತುವ ಮೂಲಕ ಸರ್ವಾನುಮತದಿಂದ ಅನುಮೋದನೆ ನೀಡಿತು.

ಅಧ್ಯಕ್ಷರು ಮುಂದುವರೆದು, 2024–25ನೇ ಸಾಲುಗಳಿಗೆ ಶಾಸನಬದ್ಧ ಲೆಕ್ಕ ಪರಿಶೋಧನೆ ನಡೆಸಲು ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿ ಮೇರೆಗೆ ಮೆ॥ ಬಿ.ಪಿ.ಎಸ್.ಎಸ್.ವೈ ಅಂಡ್ ಕೋ., ಬೆಂಗಳೂರು, ಚಾರ್ಟರ್ಡ್ ಅಕೌಂಟೆಂಟ್‌ರವರನ್ನು ನೇಮಕ ಮಾಡಲು ವಿಷಯ ಮಂಡಿಸಿ ಅನುಮೋದಿಸಲು ಸಭೆಯನ್ನು ಕೋರಲಾಗಿ, ಮಹಾಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

ಅಧ್ಯಕ್ಷರು ಇತರೆ ವಿಷಯ ಮಂಡಿಸಿ ಬ್ಯಾಂಕು 2010–11ರ ಸಾಲಿನಲ್ಲಿ ನಗರದ ಹರಳೂರುನಲ್ಲಿ ಬಿಡಿಎ ರವರು ಬ್ಯಾಂಕ್ ಉದ್ದೇಶಕ್ಕಾಗಿ ಮೀಸಲಿರಿಸಿದ್ದ ಅಂ ಸೈಟ್ 136 ಚದುರ ಮೀಟರ್ ನಿವೇಶನವನ್ನು ಬಾಡಿಗೆ ಆಧಾರ ಪಡೆದಿತ್ತೇಂದು, ಸದರಿ ನಿವೇಶನವು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕೋರಮಂಗಲ ಶಾಖೆ ಮತ್ತು ಎಲೆಕ್ಟ್ರಾನಿಕ್ ಸಿಟಿ ಶಾಖೆಗಳ ನಡುವೆ ಇರುವುದರಿಂದ ಶಾಖಾ ಬೆಳವಣಿಗೆ ದೃಷ್ಟಿಯಿಂದ ಅಲ್ಲಿ ಶಾಖೆ ತೆರೆಯುವುದು ಸಾಧುವಲ್ಲ ಎಂದು, ಹಾಗೆಯೇ Lease ಪಡೆದ 2 ವರ್ಷದೊಳಗೆ ನಿವೇಶನದಲ್ಲಿ ಕಟ್ಟಡ ನಿರ್ಮಿಸಿ ಶಾಖೆ ತೆರೆಯಲು ಸಾಧ್ಯವಾಗಿಲ್ಲದ ಕಾರಣ ಮತ್ತು RBI ನೀತಿಯನ್ವಯ ಶಾಖೆ ತೆರೆಯಲು ಅನುಮತಿ ಸಿಗದಿರುವ ಕಾರಣ ಸದರಿ ನಿವೇಶನವನ್ನು BDA ರವರಿಗೆ ಹಿಂದಿರುಗಿಸಲು ಆಡಳಿತ ಮಂಡಳಿಯು ತೀರ್ಮಾನಿಸಿರುವುದನ್ನು ಸಭೆಗೆ ತಿಳಿಸಿ ಮಹಾಸಭೆಯ ಒಪ್ಪಿಗೆ ಕೇಳಿದಾಗ, ಮಹಾಸಭೆಯು ಕೈ ಎತ್ತುವ ಮೂಲಕ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

ನಂತರ ಅಧ್ಯಕ್ಷರು ಬೈಲಾ ಬದಲಾವಣೆ ಇರುವುದಿಲ್ಲ ಎಂದರು.

ಬ್ಯಾಂಕಿನ ಸದಸ್ಯರಾದ ಶ್ರೀ ವೆಂಕಟರಾಮಣಶಾಸ್ತ್ರಿರವರು ಬ್ಯಾಂಕಿನ ಬಗ್ಗೆ ಸ್ವರಚಿತ ಕವನ ಹಾಡಿದರು.

ಬ್ಯಾಂಕಿನ ಸದಸ್ಯರಾದ ಶ್ರೀ ವರದರಾಜು.ಆರ್ (ಆರ್–58290) ರವರು ಮಾತನಾಡಿ ಬ್ಯಾಂಕು ಬೃಹದಕಾರವಾಗಿ ಬೆಳೆದಿದೆ ಎಂದು, ಲಾಭ ನಷ್ಟ ಖಾತೆಯಲ್ಲಿ ಆದಾಯ ತೆರಿಗೆ ಪೂರ್ವ ಲಾಭ ಸರಿಯಾಗಿ ತೋರಿಸಿಲ್ಲ ಎಂದು, ಅದನ್ನು ಕೂಡಿದಲ್ಲಿ ವ್ಯತ್ಯಾಸವಾಗುತ್ತದೆಂದು, ಅಧಿಕೃತ ಬಂಡವಾಳಕ್ಕೆ ಗೆರೆ ಹಾಕಿಲ್ಲವೆಂದು ಸರಿಪಡಿಸಿಕೊಳ್ಳಲು ಸಲಹೆ ಮಾಡಿದರು.

ನಂತರ ಬ್ಯಾಂಕಿನ ಉಪಾಧ್ಯಕ್ಷರಾದ ಡಾ॥ ದೇವರಾಜ್. ಟಿ. ಎಂ ರವರು ವಂದನಾರ್ಪಣೆ ಮಾಡುತ್ತಾ

ಇಂದು ನಡೆದ ನಮ್ಮ ಬ್ಯಾಂಕಿನ 2023–24ನೇ ಸಾಲಿನ 118ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟು ಸದಸ್ಯರು ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಅಂಕಿ ಅಂಶಗಳ ಸಮೇತ ಸಮರ್ಪಕವಾದ ಉತ್ತರವನ್ನು ನೀಡಿದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆವಲಹಳ್ಳಿ ಚಂದ್ರಪ್ಪ. ಆರ್ ರವರಿಗೆ ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರುಗಳ ಪರವಾಗಿ ಮತ್ತು ಎಲ್ಲಾ ಸದಸ್ಯರುಗಳ ಪರವಾಗಿ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸಿದರು ಮತ್ತು ಸದಸ್ಯರೆಲ್ಲರ ಪರವಾಗಿ ಶ್ರೀ ಸಿದ್ದಣ್ಣರವರಿಂದ ಗೌರವಿಸಲಾಯಿತು. ಬ್ಯಾಂಕಿನಲ್ಲಿ 50 ವರ್ಷ ಸದಸ್ಯತ್ವದಲ್ಲಿ ಮುಂದುವರೆದು ಸನ್ಮಾನ ಸ್ವೀಕರಿಸಿದ 1) ಶ್ರೀ ಬೀರಪ್ಪ ಮತ್ತು 2) ಶ್ರೀ ನರಸಿಂಹಮೂರ್ತಿ.ಎನ್. ಕೆ ರವರುಗಳಿಗೆ ಧನ್ಯವಾದ ತಿಳಿಸಿದರು.

ಉಪಾಧ್ಯಕ್ಷರು ಮುಂದುವರೆದು ಬ್ಯಾಂಕಿನ 2023–24 ನೇ ಸಾಲಿನ ಲೆಕ್ಕ ಪತ್ರಗಳನ್ನು ಸಕಾಲಕ್ಕೆ ಆಡಿಟ್ ಮಾಡಿ ಉಪಯುಕ್ತವಾದ ಸಲಹೆ ಹಾಗೂ ಸೂಚನೆಗಳನ್ನು ನೀಡಿರುವ ಚಾರ್ಟರ್ಡ್ ಅಕೌಂಟೆಂಟ್ ರವರಾದ ಮೆ॥ ಬಿ.ಆರ್.ಆರ್ ಅಂಡ್ ಕೋ, ಬೆಂಗಳೂರು ರವರಿಗೆ ಬ್ಯಾಂಕಿನ ಆಡಳಿತ ಮಂಡಳಿಯ ಪರವಾಗಿ ಹಾಗೂ ಎಲ್ಲಾ ಸದಸ್ಯರುಗಳ ಪರವಾಗಿ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸಿದರು.

ಉಪಾಧ್ಯಕ್ಷರು ಮುಂದುವರೆದು ಸದಸ್ಯರುಗಳು ಸಂಸ್ಥೆಯ 2023–24ರ ಸಾಲಿನ ಲಾಭ–ನಷ್ಟ ಹಾಗೂ ಆಸ್ತಿ–ಜವಾಬ್ದಾರಿ ತಃಖ್ತೆ, ಲೆಕ್ಕಪರಿಶೋಧನಾ ವರದಿಯ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ ನಿವ್ವಳ ಲಾಭ ಹಾಗೂ ವಿಲೇವಾರಿ, 2024–25 ಮತ್ತು 2025–26 ನೇ ಸಾಲಿನ ಆಯವ್ಯಯದ ಅಂದಾಜು ಹಾಗೂ 2024–25ರ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಇತ್ಯಾದಿ ವಿಷಯಗಳಲ್ಲಿ ತಮ್ಮ ಅತ್ಯಮೂಲ್ಯವಾದ ಸಲಹೆ ಹಾಗೂ ಸೂಚನೆಗಳನ್ನು ನೀಡಿರುವುದಕ್ಕೆ ಸದಸ್ಯರೆಲ್ಲರಿಗೂ ಬ್ಯಾಂಕಿನ ಆಡಳಿತ ಮಂಡಳಿ ಪರವಾಗಿ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸಿದರು.

ಉಪಾಧ್ಯಕ್ಷರು ಮುಂದುವರೆದು ಬ್ಯಾಂಕಿನ ಕೆಲಸ ಕಾರ್ಯಗಳನ್ನು ಸುಸೂತ್ರವಾಗಿ ನಡೆಸಿಕೊಟ್ಟಿರುವ ಎಲ್ಲಾ ಸಿಬ್ಬಂದಿ ವರ್ಗದವರಿಗೆ, ಶಾಮಿಯಾನ ಒದಗಿಸಿದವರಿಗೆ, ತಮ್ಮ ಆವರಣ ಉಪಯೋಗಿಸಲು ಅನುಮತಿಸಿರುವ GMC Bank /ಸಂಸ್ಕೃತ ಕಾಲೇಜುರವರಿಗೆ, ಧ್ವನಿ ವರ್ಧಕ ವ್ಯವಸ್ಥೆ ಒದಗಿಸಿರುವವರಿಗೆ, ಪೊಲೀಸ್ ಅಧಿಕಾರಿಗಳಿಗೆ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಬ್ಯಾಂಕಿನ ಆಡಳಿತ ಮಂಡಳಿಯ ಪರವಾಗಿ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸಿದರು.

ಸರ್ವಸದಸ್ಯರ ಮಹಾಸಭೆ ಮಧ್ಯಾಹ್ನ 12.25 ಗಂಟೆಗೆ ರಾಷ್ಟ್ರ ಗೀತೆಯೊಂದಿಗೆ ಮುಕ್ತಾಯಗೊಂಡಿತು.

# ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್,
## 2024-2025 ಮತ್ತು ಕಳೆದ ಸಂವತ್ಸರಗಳಲ್ಲಿ

| ವರ್ಷಗಳು | ಸದಸ್ಯರುಗಳ ಸಂಖ್ಯೆ | ಷೇರು ಮೊಬಲಗು | ಕಾಯ್ದಿರಿಸಿದ ನಿಧಿ ಮತ್ತು ಇತರೆ ನಿಧಿಗಳು | ಠೇವಣಿಗಳು |
|---|---|---|---|---|
| 1907 | 150 | 2,727 | 39 | 2,265 |
| 1917 | 1110 | 1,26,922 | 1,150 | 1,17,318 |
| 1927 | 1535 | 1,77,980 | 21,180 | 1,15,079 |
| 1937 | 2545 | 3,65,277 | 1,47,144 | 17,07,660 |
| 1947 | 2172 | 3,51,783 | 2,15,923 | 1,75,77,378 |
| 1957 | 3348 | 3,79,109 | 2,94,344 | 21,00,049 |
| 1967 | 5360 | 4,10,266 | 4,48,091 | 24,87,795 |
| 1977 | 5496 | 8,95,904 | 8,17,155 | 37,58,839 |
| 1987 | 13579 | 44,48,665 | 33,55,252 | 5,42,64,905 |
| 1997 | 30980 | 2,76,23,080 | 3,04,31,589 | 53,48,55,407 |
| 2000-2001 | 31649 | 6,39,46,120 | 7,50,05,949 | 166,03,78,661 |
| 2001-2002 | 38137 | 8,42,03,108 | 11,27,89,391 | 210,95,74,302 |
| 2002-2003 | 40573 | 10,59,35,099 | 15,86,18,293 | 223,48,53,723 |
| 2003-2004 | 41468 | 11,19,26,458 | 25,55,44,174 | 230,73,88,038 |
| 2004-2005 | 40666 | 11,00,94,576 | 30,75,79,766 | 223,53,94,973 |
| 2005-2006 | 40046 | 11,04,54,465 | 35,87,24,961 | 212,18,41,240 |
| 2006-2007 | 39912 | 11,41,64,541 | 38,53,63,257 | 224,43,62,150 |
| 2007-2008 | 42191 | 13,94,22,103 | 41,57,51,667 | 289,10,54,009 |
| 2008-2009 | 44518 | 17,33,63,267 | 44,98,27,118 | 378,63,09,868 |
| 2009-2010 | 47698 | 21,84,53,827 | 48,25,77,806 | 489,58,18,010 |
| 2010-2011 | 50639 | 28,71,12,907 | 54,26,10,058 | 597,62,10,335 |
| 2011-2012 | 54139 | 35,01,79,012 | 63,16,96,731 | 736,09,92,441 |
| 2012-2013 | 58218 | 43,16,59,372 | 71,44,23,015 | 975,96,47,835 |
| 2013-2014 | 63972 | 50,99,43,272 | 80,97,18,606 | 1144,27,34,762 |
| 2014-2015 | 66246 | 58,65,28,122 | 97,68,17,911 | 1280,16,16,010 |
| 2015-2016 | 67705 | 69,60,07,507 | 111,22,96,145 | 1521,37,70,258 |
| 2016-2017 | 69759 | 82,33,72,992 | 124,80,59,361 | 1755,06,82,964 |
| 2017-2018 | 71188 | 83,68,98,214 | 154,11,62,339 | 1933,57,56,772 |
| 2018-2019 | 74019 | 87,49,00,947 | 174,40,95,817 | 2049,35,54,754 |
| 2019-2020 | 75711 | 90,98,66,107 | 199,79,21,657 | 2169,19,10,362 |
| 2020-2021 | 76667 | 90,37,88,472 | 261,77,80,344 | 2301,36,54,923 |
| 2021-2022 | 77166 | 91,53,68,627 | 326,10,57,405 | 2353,08,35,407 |
| 2022-2023 | 78165 | 95,43,64,952 | 445,08,32,181 | 2264,67,56,536 |
| 2023-2024 | 80048 | 95,07,66,852 | 495,80,64,782 | 2096,22,55,136 |
| 2024-2025 | 81330 | 95,94,58,332 | 525,48,99,645 | 2158,88,87,918 |

*** ಕೋವಿಡ್ 19 ಸಾಂಕ್ರಾಮಿಕ ಕಾಯಿಲೆ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನದ ರೀತ್ಯಾ 2019-20ನೇ ಸಾಲಿನ ಷೇರು ನಫೆಯನ್ನು ಮಂಜೂರು ಮಾಡಿರುವುದಿಲ್ಲ.

# ಚಾಮರಾಜಪೇಟೆ, ಬೆಂಗಳೂರು–18

## ಬ್ಯಾಂಕಿನ ಪ್ರಗತಿ ವಿವರಣಾ ಪಟ್ಟಿ

| ಸಾಲಗಳು | ಒಟ್ಟು ಲಾಭ | ನಿವ್ವಳ ಲಾಭ | ನಿವ್ವಳ ಅನುತ್ಪಾದಕ ಆಸ್ತಿ–ಶೇಕಡ | ಡಿವಿಡೆಂಡ್ ಕೊಟ್ಟಿದ್ದು ಶೇಕಡ | ಆಡಿಟ್ ತರಗತಿ |
|---|---|---|---|---|---|
| 4,036 | 279 | 156 | – | 13.02 | A |
| 2,36,725 | 22,384 | 9,892 | – | 6.00 | A |
| 6,06,756 | 58,110 | 20,137 | – | 7.50 | A |
| 17,40,913 | 1,52,249 | 42,216 | – | 7.50 | A |
| 12,26,099 | 1,05,979 | 26,313 | – | 5.00 | A |
| 23,13,176 | 1,78,121 | 36,187 | – | 6.26 | A |
| 28,16,149 | 1,39,747 | 22,054 | – | 6.25 | A |
| 48,69,489 | 7,54,369 | 1,48,615 | – | 9.00 | A |
| 4,16,66,528 | 70,81,196 | 11,53,581 | – | 12.00 | A |
| 35,05,87,887 | 7,98,58,861 | 1,18,83,786 | – | 20.00 | A |
| 110,79,71,575 | 24,80,61,003 | 3,07,19,149 | 9.97 | 25.00 | A |
| 137,27,84,055 | 29,16,40,532 | 3,10,94,623 | 9.81 | 25.00 | A |
| 165,54,52,412 | 37,46,85,524 | 3,03,74,217 | 14.91 | 16.00 | A |
| 151,35,91,543 | 37,68,91,745 | 3,01,65,209 | 14.67 | 9.00 | A |
| 137,59,27,385 | 30,66,71,244 | 2,47,38,004 | 9.70 | 10.00 | A |
| 132,58,94,080 | 28,62,35,710 | 2,61,27,461 | 8.32 | 10.00 | A |
| 150,17,47,820 | 28,17,69,862 | 3,55,49,263 | 2.76 | 16.00 | A |
| 233,67,94,705 | 33,95,05,771 | 4,27,23,786 | 0.96 | 18.00 | A |
| 294,84,43,368 | 45,27,52,340 | 5,17,00,057 | 4.88 | 18.00 | A |
| 352,98,06,856 | 57,56,20,956 | 5,33,77,802 | 2.49 | 15.50 | A |
| 444,12,12,211 | 72,50,99,304 | 7,95,66,288 | 1.89 | 17.00 | A |
| 526,50,17,038 | 91,22,21,963 | 10,34,96,564 | 0.28 | 17.00 | A |
| 692,55,27,605 | 115,15,12,171 | 11,09,28,872 | 1.61 | 18.00 | A |
| 842,76,11,387 | 145,12,28,426 | 13,26,88,678 | 2.60 | 15.00 | A |
| 895,56,98,152 | 173,41,24,380 | 15,65,03,697 | 2.71 | 15.00 | A |
| 996,20,14,319 | 188,93,48,039 | 16,42,59,217 | 2.93 | 15.00 | A |
| 1233,27,86,123 | 219,77,35,145 | 18,64,75,179 | 3.21 | 15.00 | A |
| 1300,23,85,130 | 242,02,94,913 | 22,48,94,753 | 2.45 | 15.00 | A |
| 1336,53,39,767 | 257,89,87,831 | 23,89,43,083 | 0.36 | 15.00 | A |
| 1545,26,81,849 | 271,04,90,800 | 25,40,00,245 | 3.90 | * * * | A |
| 1598,42,21,405 | 283,49,57,654 | 25,85,81,583 | 3.45 | 15.00 | A |
| 1592,52,05,347 | 309,39,35,082 | 24,15,16,398 | 0.00 | 15.00 | A |
| 1448,08,72,111 | 298,28,40,153 | 28,29,62,096 | 0.84 | 10.00 | A |
| 1333,43,22,257 | 277,51,42,140 | 28,50,29,761 | 0.00% | 10.00 | A |
| 1381,51,62,689 | 264,88,77,405 | 28,77,68,538 | 0.00% | 15.00 (ಸೂಚಿಸಿದ್ದು) | A |

# ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018

**(ಆಡಳಿತ ಮಂಡಳಿಯ ಸಭೆಯಲ್ಲಿ ತಿದ್ದುಪಡಿಗೆ ಮಂಡಿಸಿರುವುದು)**

| 53. | ಮಂಡಲಿಯ ಸದಸ್ಯರ ಸೇವೆ | 53. | ಮಂಡಲಿಯ ಸದಸ್ಯರ ಸೇವೆ |
|---|---|---|---|
| | ನಿರ್ದೇಶಕ ಮಂಡಳಿ ಸದಸ್ಯರ ಸೇವೆಯು ಉಚಿತವಾಗಿರುತ್ತದೆಯಾದರೂ ನಿರ್ದೇಶಕರು ಸಭೆಗಳಿಗೆ ಹಾಜರಾದಾಗ ಅಥವಾ ನಿರ್ದೇಶಕರಾಗಿ ಬ್ಯಾಂಕಿನ ಯಾವುದೇ ಕೆಲಸಗಳನ್ನು ನಿರ್ವಹಿಸಿದಾಗ, ಅವರಿಗೆ ಕೆಳಕಂಡಂತೆ ಪ್ರಯಾಣಭತ್ಯೆ, ದಿನಭತ್ಯೆ ಮತ್ತು ಆಸೀನ ಶುಲ್ಕಗಳನ್ನು ಕೊಡಬಹುದು. | | ನಿರ್ದೇಶಕ ಮಂಡಳಿ ಸದಸ್ಯರ ಸೇವೆಯು ಉಚಿತವಾಗಿರುತ್ತದೆಯಾದರೂ ನಿರ್ದೇಶಕರು ಸಭೆಗಳಿಗೆ ಹಾಜರಾದಾಗ ಅಥವಾ ನಿರ್ದೇಶಕರಾಗಿ ಬ್ಯಾಂಕಿನ ಯಾವುದೇ ಕೆಲಸಗಳನ್ನು ನಿರ್ವಹಿಸಿದಾಗ, ಅವರಿಗೆ ಕೆಳಕಂಡಂತೆ ಪ್ರಯಾಣಭತ್ಯೆ, ದಿನಭತ್ಯೆ ಮತ್ತು ಆಸೀನ ಶುಲ್ಕಗಳನ್ನು ಕೊಡಬಹುದು. |
| | **ಪ್ರವಾಸ ಭತ್ಯೆ** | | **ಪ್ರವಾಸ ಭತ್ಯೆ** |
| | **ರಾಜ್ಯದ ಒಳಗೆ**<br>**ರೈಲ್ವೆ**: ವಾಸ್ತವಿಕ ದರ ಎಲ್ಲಾ ವರ್ಗಗಳಿಗೆ<br>**ಬಸ್**: ಬಸ್ ದರದ ಒಂದೂವರೆ ಪಟ್ಟು | | **ರಾಜ್ಯದ ಒಳಗೆ**<br>**ರೈಲ್ವೆ**: ವಾಸ್ತವಿಕ ದರ ಎಲ್ಲಾ ವರ್ಗಗಳಿಗೆ<br>**ಬಸ್**: ಬಸ್ ದರದ ಒಂದೂವರೆ ಪಟ್ಟು |
| | **ಹೊರ ರಾಜ್ಯಗಳಿಗೆ**<br>**ವಿಮಾನ**: ಸಾಮಾನ್ಯ ದರ್ಜೆ ದರ<br>**ರೈಲ್ವೆ**: ವಾಸ್ತವಿಕ ದರ ಎಲ್ಲಾ ವರ್ಗಗಳಿಗೆ<br>**ಬಸ್**: ಬಸ್ ದರದ ಒಂದೂವರೆ ಪಟ್ಟು | | **ಹೊರ ರಾಜ್ಯಗಳಿಗೆ**<br>**ವಿಮಾನ**: ಸಾಮಾನ್ಯ ದರ್ಜೆ ದರ<br>**ರೈಲ್ವೆ**: ವಾಸ್ತವಿಕ ದರ ಎಲ್ಲಾ ವರ್ಗಗಳಿಗೆ<br>**ಬಸ್**: ಬಸ್ ದರದ ಒಂದೂವರೆ ಪಟ್ಟು |
| | **ದಿನದ ಭತ್ಯೆ**<br>**ರಾಜ್ಯದ ಒಳಗೆ**: ರೂ. 1,750/-<br>**ಹೊರ ರಾಜ್ಯಗಳಿಗೆ**: ರೂ. 3,000/-<br>**ಸಭಾ ಭತ್ಯೆ**<br>**ಆಸೀನ ಶುಲ್ಕ**: ರೂ. 2000/- | | **ದಿನದ ಭತ್ಯೆ**<br>**ರಾಜ್ಯದ ಒಳಗೆ**: ರೂ. 2,500/-<br>**ಹೊರ ರಾಜ್ಯಗಳಿಗೆ**: ರೂ. 4,000/-<br>**ಸಭಾ ಭತ್ಯೆ**<br>**ಆಸೀನ ಶುಲ್ಕ**: ಆಡಳಿತ ಮಂಡಳಿಯು ಆಗಿಂದಾಗ್ಗೆ ನಿಗದಿಪಡಿಸುವ ಮಿತಿ ರೀತ್ಯಾ |

| | | | |
|---|---|---|---|
| | **ಅ. ಷರತ್ತುಗಳು :**<br>1. ಸಭಾಭತ್ಯೆಯನ್ನು ಆಡಳಿತ ಮಂಡಲಿ ಮತ್ತು ಉಪಸಮಿತಿ ಸಭೆಗಳಿಗೆ ಹಾಜರಾದಾಗ ಮಾತ್ರ ಪಡೆಯತಕ್ಕದ್ದು.<br>2. ಆಡಳಿತ ಮಂಡಲಿ ಸದಸ್ಯರಿಗೆ ದಿನ ಭತ್ಯೆ ಮತ್ತು ಸಭಾಭತ್ಯೆ ಎರಡನ್ನು ಪಾವತಿಸತಕ್ಕದ್ದಲ್ಲ. ಇವೆರಡರಲ್ಲಿ ಒಂದನ್ನು ಮಾತ್ರ ಪಾವತಿಸತಕ್ಕದ್ದು<br>3. ಮಂಡಲಿ ಸದಸ್ಯರು ಮಂಡಲಿ ಸಭೆ ಹಾಗೂ ಉಪಸಮಿತಿ ಸಭೆಗಳಲ್ಲಿ ಹಾಜರಾಗಲು ಆಡಳಿತ ಮಂಡಳಿಯು, ಕಾಲಕಾಲಕ್ಕೆ ನಿರ್ಧರಿಸುವ ದರದಲ್ಲಿ ಪ್ರಯಾಣ ಭತ್ಯೆ ನೀಡಬಹುದು.<br>4. ವಿಮಾನದಲ್ಲಿ ಪ್ರಯಾಣಿಸಿದ ಸಂದರ್ಭದಲ್ಲಿ ಅಸಲು ಚೀಟಿ (ಟಿಕೇಟ್) ಹಾಜರುಪಡಿಸಿ ಬ್ಯಾಂಕಿನಿಂದ ಭತ್ಯೆ ಪಡೆಯತಕ್ಕದ್ದು.<br>5. ರೈಲಿನಲ್ಲಿ ಹವಾನಿಯಂತ್ರಿತ ಅಥವಾ ಪ್ರಥಮ ದರ್ಜೆ ಸೌಲಭ್ಯದಲ್ಲಿ ಪ್ರಯಾಣಿಸಿದ ಸಂದರ್ಭ ದಲ್ಲಿ ಅಸಲು ಚೀಟಿ (ಟಿಕೇಟು) ಹಾಜರುಪಡಿಸಿ ಬ್ಯಾಂಕಿನಿಂದ ಭತ್ಯೆ ಪಡೆಯತಕ್ಕದ್ದು.<br>6. ಕಾಲಕಾಲಕ್ಕೆ ಭಾರತೀಯ ರಿಜರ್ವ್ ಬ್ಯಾಂಕ್ ಹೊರಡಿಸುವ ನೀತಿ ನಿಯಮಾವಳಿಗಳು ಅನ್ವಯಿಸುತ್ತವೆ.<br>7. ರಾಜ್ಯ ಸರ್ಕಾರ ಹಾಗೂ ಸಹಕಾರ ಇಲಾಖೆಯ ಸುತ್ತೋಲೆಗಳು ಅನ್ವಯಿಸುತ್ತವೆ.<br>**ಬ. ಟಿಪ್ಪಣಿ : ದಿನಭತ್ಯೆ ಲೆಕ್ಕ ಹಾಕುವುದು**<br>1. ಆರು ಗಂಟೆಯವರೆಗೆ ತಂಗಿದ್ದರೆ–ಭತ್ಯೆ ಪಡೆಯಲು ಅರ್ಹರಲ್ಲ.<br>2. ಆರು ಗಂಟೆ ಮೀರಿ ಹನ್ನೆರಡು ಗಂಟೆಗಳವರೆಗೆ –ದಿನ ಭತ್ಯೆಯ ಅರ್ಧದಷ್ಟು.<br>3. ಹನ್ನೆರಡು ಗಂಟೆ ಮೀರಿ ಇಪ್ಪತ್ತನ್ನಾಲ್ಕು ಗಂಟೆ ಯೊಳಗಿದ್ದಲ್ಲಿ–ಒಂದು ದಿನದ ಪೂರ್ಣಭತ್ಯೆ. | | **ಅ. ಷರತ್ತುಗಳು :**<br>1. ಸಭಾಭತ್ಯೆಯನ್ನು ಆಡಳಿತ ಮಂಡಲಿ ಮತ್ತು ಉಪಸಮಿತಿ ಸಭೆಗಳಿಗೆ ಹಾಜರಾದಾಗ ಮಾತ್ರ ಪಡೆಯತಕ್ಕದ್ದು.<br>2. ಆಡಳಿತ ಮಂಡಲಿ ಸದಸ್ಯರಿಗೆ ದಿನ ಭತ್ಯೆ ಮತ್ತು ಸಭಾಭತ್ಯೆ ಎರಡನ್ನು ಪಾವತಿಸತಕ್ಕದ್ದಲ್ಲ. ಇವೆರಡರಲ್ಲಿ ಒಂದನ್ನು ಮಾತ್ರ ಪಾವತಿಸತಕ್ಕದ್ದು<br>3. ಮಂಡಲಿ ಸದಸ್ಯರು ಮಂಡಲಿ ಸಭೆ ಹಾಗೂ ಉಪಸಮಿತಿ ಸಭೆಗಳಲ್ಲಿ ಹಾಜರಾಗಲು ಆಡಳಿತ ಮಂಡಳಿಯು, ಕಾಲಕಾಲಕ್ಕೆ ನಿರ್ಧರಿಸುವ ದರದಲ್ಲಿ ಪ್ರಯಾಣ ಭತ್ಯೆ ನೀಡಬಹುದು.<br>4. ವಿಮಾನದಲ್ಲಿ ಪ್ರಯಾಣಿಸಿದ ಸಂದರ್ಭದಲ್ಲಿ ಅಸಲು ಚೀಟಿ (ಟಿಕೇಟ್) ಹಾಜರುಪಡಿಸಿ ಬ್ಯಾಂಕಿನಿಂದ ಭತ್ಯೆ ಪಡೆಯತಕ್ಕದ್ದು.<br>5. ರೈಲಿನಲ್ಲಿ ಹವಾನಿಯಂತ್ರಿತ ಅಥವಾ ಪ್ರಥಮ ದರ್ಜೆ ಸೌಲಭ್ಯದಲ್ಲಿ ಪ್ರಯಾಣಿಸಿದ ಸಂದರ್ಭ ದಲ್ಲಿ ಅಸಲು ಚೀಟಿ (ಟಿಕೇಟು) ಹಾಜರುಪಡಿಸಿ ಬ್ಯಾಂಕಿನಿಂದ ಭತ್ಯೆ ಪಡೆಯತಕ್ಕದ್ದು.<br>6. ಕಾಲಕಾಲಕ್ಕೆ ಭಾರತೀಯ ರಿಜರ್ವ್ ಬ್ಯಾಂಕ್ ಹೊರಡಿಸುವ ನೀತಿ ನಿಯಮಾವಳಿಗಳು ಅನ್ವಯಿಸುತ್ತವೆ.<br>7. ರಾಜ್ಯ ಸರ್ಕಾರ ಹಾಗೂ ಸಹಕಾರ ಇಲಾಖೆಯ ಸುತ್ತೋಲೆಗಳು ಅನ್ವಯಿಸುತ್ತವೆ.<br>**ಬ. ಟಿಪ್ಪಣಿ : ದಿನಭತ್ಯೆ ಲೆಕ್ಕ ಹಾಕುವುದು**<br>1. ಆರು ಗಂಟೆಯವರೆಗೆ ತಂಗಿದ್ದರೆ– ಭತ್ಯೆ ಪಡೆಯಲು ಅರ್ಹರಲ್ಲ.<br>2. ಆರು ಗಂಟೆ ಮೀರಿ ಹನ್ನೆರಡು ಗಂಟೆಗಳ ವರೆಗೆ – ದಿನ ಭತ್ಯೆಯ ಅರ್ಧದಷ್ಟು.<br>3. ಹನ್ನೆರಡು ಗಂಟೆ ಮೀರಿ ಇಪ್ಪತ್ತನ್ನಾಲ್ಕು ಗಂಟೆ ಯೊಳಗಿದ್ದಲ್ಲಿ–ಒಂದು ದಿನದ ಪೂರ್ಣಭತ್ಯೆ. |

# ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ಆಡಳಿತ ಕಛೇರಿ : ನಂ. 3, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018**

ಚುನಾವಣಾ ದಿನಾಂಕದಿಂದ ಮುಂದಿನ ಐದು ವರ್ಷಗಳ ಅವಧಿಗೆ ಬ್ಯಾಂಕಿನ ಆಡಳಿತ ಮಂಡಳಿಗೆ ದಿನಾಂಕ 05.01.2025 ರಂದು ಚುನಾವಣೆ ನಡೆದು, ಸಂಬಂಧದಲ್ಲಿ ಚುನಾವಣಾಧಿಕಾರಿಗಳು ಘೋಷಿಸಿರುವ ಚುನಾವಣಾ ಫಲಿತಾಂಶಗಳು ಕೆಳಕಂಡಂತೆ ಇರುತ್ತವೆ.

## : ಅಭ್ಯರ್ಥಿಗಳು ಪಡೆದ ಮತಗಳ ವಿವರ :

ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ನಂ. 3, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018, ಈ ಸಹಕಾರ ಸಂಘದ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಲಿಗೆ ದಿನಾಂಕ 05–01–2025 ರಂದು ಜರುಗಿದ ಚುನಾವಣೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 14 ವೈ (2) ನಲ್ಲಿ ಉಪಬಂಧಾನುಸಾರ ಈ ಕೆಳಕಂಡ ಅಭ್ಯರ್ಥಿಗಳು ಅವರ ಹೆಸರಿನ ಮುಂದೆ ನಮೂದಿಸಿರುವ ಮತಗಳನ್ನು ಪಡೆದಿರುತ್ತಾರೆ ಎಂದು ರಿಟರ್ನಿಂಗ್ ಅಧಿಕಾರಿ ಬಿ.ಕೆ.ಸಲೀಂ, ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ. ಆದ ನಾನು ಘೋಷಿಸುತ್ತೇನೆ.

| ಕ್ರಸಂ. | ಅಭ್ಯರ್ಥಿಯ ಹೆಸರು | ಪಡೆದ ಮತಗಳು |
|---|---|---|
| | **ಸಾಮಾನ್ಯ ಸ್ಥಾನದಿಂದ** | |
| 1 | ಆವಲಹಳ್ಳಿ ಚಂದ್ರಪ್ಪ.ಆರ್ | 4999 |
| 2 | ಆಂಜನಪ್ಪ | 4725 |
| 3 | ಕೃಷ್ಣಪ್ಪ.ಕೆ | 4690 |
| 4 | ಚಿಕ್ಕಣ್ಣಯ್ಯ.ಕೆ.ಸಿ | 4595 |
| 5 | ಜಯಕುಮಾರ್.ವಿ | 960 |
| 6 | ಡಾ॥ ದೇವರಾಜ್.ಟಿ.ಎಂ | 4983 |
| 7 | ನರಸಿಂಹ ಮೂರ್ತಿ.ಎಸ್.ಡಿ. | 829 |
| 8 | ಪಂಕಜ ಹನುಮಂತಯ್ಯ | 4381 |
| 9 | ಡಾ.ಯೋಗ.ಟಿ.ಪಿ. | 1273 |
| 10 | ರಘುನಾಥ್.ಸಿ | 4142 |
| 11 | ರಾಧಕೃಷ್ಣ.ಎನ್ | 4146 |
| 12 | ಸುದರ್ಶನ್.ಎಸ್ | 608 |
| 13 | ಸುರೇಶ್.ಕೆ.ಪಿ | 4005 |
| 14 | ಸ್ವಾಮಿ.ಎಂ.ಎಲ್ | 582 |

| | | |
|---|---|---|
| **ಪರಿಶಿಷ್ಟ ಜಾತಿಸ್ಥಾನದಿಂದ** | | |
| 1. | ತಿಮ್ಮಯ್ಯ.ಎನ್ | 972 |
| 2. | ವೆಂಕಟೇಶ್ | 4344 |
| **ಮಹಿಳಾ ಮೀಸಲು ಸ್ಥಾನದಿಂದ** | | |
| 1. | ಅಶ್ವಿನಿ ಸತೀಶ್ | 4735 |
| 2. | ಮೀನಾಕುಮಾರಿ ಕೆ.ಪಿ | 4532 |
| 3. | ಲಲಿತಾ ಬಾಯಿ | 564 |
| 4. | ವಿಜಯ.ಆರ್ | 638 |

**ನಮೂನೆ–XXII**

**(ನಿಯಮ 14 (ವೈ) ರಂತೆ)**

ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018, ಈ ಸಹಕಾರ ಸಂಘದ ಚುನಾವಣಾ ದಿನಾಂಕದಿಂದ ಮುಂದಿನ ಐದು ವರ್ಷಗಳ ಅವಧಿಯ ಆಡಳಿತ ಮಂಡಲಿಗೆ ದಿನಾಂಕ 05–01–2025 ರಂದು ಜರುಗಿದ ಚುನಾವಣೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 14 ವೈ (ಎ) ರ ಉಪಬಂಧಾನುಸಾರ ಈ ಕೆಳಕಂಡ ಅಭ್ಯರ್ಥಿಗಳು ಅವರ ಹೆಸರಿನ ಮುಂದೆ ನಮೂದಿಸಿರುವ ಮತಸ್ಥಾನದಿಂದ ವಿದ್ಯುಕ್ತವಾಗಿ ಚುನಾಯಿತರಾಗಿರುತ್ತಾರೆಂದು ರಿಟರ್ನಿಂಗ್ ಅಧಿಕಾರಿ ಬಿ.ಕೆ.ಸಲೀಂ, ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ. ಆದ ನಾನು ಘೋಷಿಸುತ್ತೇನೆ.

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ವಿಳಾಸ | ಪಡೆದ ಮತಗಳು |
|---|---|---|---|
| 01 | ಆವಲಹಳ್ಳಿ ಚಂದ್ರಪ್ಪ.ಆರ್ | ನಂ.13, 18ನೇ ಎ ಮುಖ್ಯರಸ್ತೆ, ವೆಂಕಟೇಶ್ವರ ಚಿತ್ರಮಂದಿರ ಹಿಂಭಾಗ, ಆವಲಹಳ್ಳಿ, ಬೆಂಗಳೂರು–560 026. | 4999 |
| 02 | ಡಾ॥ ದೇವರಾಜ್.ಟಿ.ಎಂ | ನಂ. 938, 6ನೇ ಅಡ್ಡರಸ್ತೆ, ಬಿ.ಎಸ್.ಕೆ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು–560 050 | 4983 |
| 03 | ಆಂಜನಪ್ಪ | ನಂ.71, ಕೆಂಪಮ್ಮ ನಿಲಯ, 1ನೇ ಮುಖ್ಯರಸ್ತೆ, ಜಿಇಎಫ್ ಪೋಸ್ಟ್, ಮೈಸೂರು ರಸ್ತೆ, ಆವಲಹಳ್ಳಿ, ಬೆಂಗಳೂರು–560 026. | 4725 |
| 04 | ಕೃಷ್ಣಪ್ಪ.ಕೆ | ನಂ.78, 3ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಕಲ್ಯಾಣನಗರ, ನಾಗರಬಾವಿ, ಬೆಂಗಳೂರು–560 072 | 4690 |
| 05 | ಚಿಕ್ಕಣ್ಣಯ್ಯ.ಕೆ.ಸಿ | ನಂ.756/16, 47ನೇ ಅಡ್ಡರಸ್ತೆ, 8ನೇ ಬ್ಲಾಕ್, ಜಯನಗರ, ಸಂಗಮ್ ಸರ್ಕಲ್ ಹತ್ತಿರ, ಬೆಂಗಳೂರು–560 082. | 4595 |

| | | | |
|---|---|---|---|
| 06 | ಪಂಕಜ ಹನುಮಂತಯ್ಯ | ನಂ.69, ಮಾಡಲ್ ಹೌಸ್ ಸ್ಟ್ರೀಟ್, ಬಸವನಗುಡಿ, ಬೆಂಗಳೂರು-560 004. | 4381 |
| 07 | ರಾಧಕೃಷ್ಣ.ಎನ್ | ನಂ.21, ಆಶೀರ್ವಾದ್, 5ನೇ ಅಡ್ಡರಸ್ತೆ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು-560 026 | 4146 |
| 08 | ರಘುನಾಥ್.ಸಿ | ನಂ.13, 18ನೇ ಎ ಮುಖ್ಯರಸ್ತೆ, ಆವಲಹಳ್ಳಿ, ಬೆಂಗಳೂರು-560 026. | 4142 |
| 09 | ಸುರೇಶ್.ಕೆ.ಪಿ. | ನಂ.18, 3ನೇ ಬಿ ಮುಖ್ಯರಸ್ತೆ, ಭೈರವೇಶ್ವರನಗರ, ನಾಗರಬಾವಿ ರಸ್ತೆ, ಬೆಂಗಳೂರು-560 072. | 4005 |
| | | **ಪರಿಶಿಷ್ಟ ಜಾತಿ ಮೀಸಲು ಸ್ಥಾನ** | |
| 1 | ವೆಂಕಟೇಶ್ | ನಂ.21, 3ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಬ್ಯಾಟರಾಯನಪುರ, ಬೆಂಗಳೂರು-560 026. | 4344 |
| | | | |
| | | **ಪರಿಶಿಷ್ಟ ಪಂಗಡ ಮೀಸಲು ಸ್ಥಾನ** | |
| 1 | ಹನುಮಂತಪ್ಪ ಟಿ.ವಿ | ನಂ.484, 3ನೇ ಮುಖ್ಯರಸ್ತೆ, ನಾಗೇಂದ್ರ ಬ್ಲಾಕ್, ಶ್ರೀನಗರ, ಬೆಂಗಳೂರು-560 050 | ಅವಿರೋಧ ಆಯ್ಕೆ |
| | | **ಹಿಂದುಳಿದ ಪ್ರವರ್ಗ 'ಎ' ಮೀಸಲು ಸ್ಥಾನ** | |
| 1 | ಬಸವರಾಜು | ನಂ.15/4, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ದೀಪಾಂಜಲಿನಗರ, ಮೈಸೂರು ರಸ್ತೆ, ಬೆಂಗಳೂರು-560 026. | ಅವಿರೋಧ ಆಯ್ಕೆ |
| | | **ಹಿಂದುಳಿದ ಪ್ರವರ್ಗ 'ಬಿ' ಮೀಸಲು ಸ್ಥಾನ** | |
| 1 | ನಾರಾಯಣಪ್ಪ. ಬಿ.ಆರ್ | ನಂ.112, ಎಂ.ಎಂ.ಕೆ.ಲೇಔಟ್, 11ನೇ ಮುಖ್ಯರಸ್ತೆ, ಜ್ಞಾನಭಾರತಿ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು-560 060. | ಅವಿರೋಧ ಆಯ್ಕೆ |
| | | **ಮಹಿಳಾ ಮೀಸಲು ಸ್ಥಾನ** | |
| 1 | ಅಶ್ವಿನಿ ಸತೀಶ್ | ನಂ.1956, 12ನೇ ಎ ಅಡ್ಡರಸ್ತೆ, ಆರ್.ಪಿ.ಸಿ.ಲೇಔಟ್, ವಿಜಯನಗರ, 2ನೇ ಹಂತ, ಬೆಂಗಳೂರು-560 040 | 4735 |
| 2 | ಮೀನಾಕುಮಾರಿ ಕೆ.ಪಿ | ನಂ.8, 1ನೇ ಸಿ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ವಿಜಯನಗರ 2ನೇ ಹಂತ, ಆರ್.ಪಿ.ಸಿ.ಲೇಔಟ್, ಬೆಂಗಳೂರು-560 040 | 4532 |